Minister said that on 7th May 1956, instructions were given to the Inspector of Co-operative Societies to convene a meeting.

Sri K. PUTTASWAMY.—May I know then when was the Society instructed by the Assistant Registrar to call for the meeting?

Sri S. NIJALINGAPPA.—He was immediately asked to call for a meeting and possibly very soon thereafter, the society was called upon to do so. Unfortunately, I cannot give the exact dates as that information is not before me.

Sri K. PUTTASWAMY.—May I know what disciplinary action has been taken against the Inspector of Co-operative Societies for having neglected to call for the General Body meeting for over a year?

Sri S. NIJALINGAPPA.—I will get the records examined and if he is found in any way liable for punishment, we will examine.

ಶ್ರೀ ಎಚ್. ಜಿ. ನರಸಿಂಹೇಗೌಡ.—ಅಸಿಸ್ಟೆಂಟ್ ರಿಜಿಸ್ಟ್ರಾರ್ ಮತ್ತು ಇನ್‌ಸ್ಪೆಕ್ಟರು ಸಕಾಲದಲ್ಲಿ ಜನರಲ್‌ಬಾಡಿ ಮೀಟಿಂಗ್ ಕರೆಯಲು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳದಿರುವುದಕ್ಕಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು.—ಅದಕ್ಕಾಗಲೇ ಉತ್ತರ ಹೇಳಿದ್ದಾರೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ಒಂದು ವರ್ಷವಾದರೂ ಮೀಟಿಂಗ್ ಕರೆಯಲು ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಇನ್ನೂ ಹತ್ತು ವರ್ಷ ಹೀಗೆಯೇ ಆದರೆ ಏನು ಮಾಡುತ್ತೀರಿ?

ಅಧ್ಯಕ್ಷರು.—ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಹಿಂದೆ ಕೇಳಿದ ಪ್ರಶ್ನೆಯನ್ನೇ putting old wine into new bottles ಎನ್ನುವಂತೆ ಬೇರೆ ರೀತಿ ಕೇಳುತ್ತಿದ್ದೀರಿ.

ಶ್ರೀ ಅಣ್ಣಾರಾವ್ ಗಣಮುಖಿ.—ಕೆಲವು ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡಿಲ್ಲವೆಂದು ಉತ್ತರದಲ್ಲಿ ಹೇಳಿದ್ದೀರಿ. ಆ ಅಧಿಕಾರಿಗಳು ಈಗಲೂ ಕೆಲಸದಲ್ಲಿದ್ದಾರೆಯೆ?

ಶ್ರೀ ಎಸ್. ನಿಜಲಿಂಗಪ್ಪ.—ಕೆಲವರು ರಿಟೈರ್ ಆಗಿದ್ದಾರೆ; ಕೆಲವರು ಇದ್ದಾರೆ.

ಶ್ರೀ ಅಣ್ಣಾರಾವ್ ಗಣಮುಖಿ.—ಇರುವವರು ಈಗಲೂ ಹಾಗೆಯೇ ಕೆಲಸ ಮಾಡುತ್ತಾರೆಯೆ?

ಶ್ರೀ ಎಸ್. ನಿಜಲಿಂಗಪ್ಪ.—ಹಾಗೆ ಮಾಡಿದರೆ ಅಂಥವರ ವಿಷಯದಲ್ಲಿ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಕೆಂಚಪ್ಪ.—ಇನ್‌ಸ್ಪೆಕ್ಟರು ಕೆಲಸ ಮಾಡದೇ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಯಾವ ರೂಲ್ಸ್ ಪ್ರಕಾರ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು.—ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ. ಕೆಂಚಪ್ಪ.—ಹಾಗೆ ಮಾಡಲು ಯಾವ ಅಧಿಕಾರವಿದೆ ಇವರಿಗೆ? ಜನರಲ್‌ಬಾಡಿ ಮೀಟಿಂಗ್ ಕರೆಯುವುದಕ್ಕೆ ಇನ್‌ಸ್ಪೆಕ್ಟರಿಗೆ ಅಧಿಕಾರವಿದೆಯೆ?

ಶ್ರೀ ಎಸ್. ನಿಜಲಿಂಗಪ್ಪ.—ಕಾನೂನನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಕೆ. ಕೆಂಚಪ್ಪ.—ಮೇಲಿನ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಸ್. ನಿಜಲಿಂಗಪ್ಪ.—ಮೇಲಿನ ಅಧಿಕಾರಿಗಳ ವಿಷಯದಲ್ಲಿ ಏನೋ ಮನೋಭಾವವಿರುವಂತೆ ಕಾಣುತ್ತದೆ. ಮಾನ್ಯ ಸದಸ್ಯರು ಬರೆದರೆ ನಾನು ವಿಚಾರ ಮಾಡುತ್ತೇನೆ.

Mr. SPEAKER.—Question time is over.

PAPER LAID ON THE TABLE.

Sri C. M. POONACHA (Minister for Industries and Home Affairs).—Sir, I lay on the Table of the House Notification No. H. D. 34 MVF 57, dated the 26th June 1957, issued under section 68 of the Motor Vehicles Act, 1939 (Central Act IV of 1939) as required by Section 133 (3) of the Act.

BUDGET FOR 1957-58 DEMANDS FOR GRANTS.

DEMAND No. 1—TAXES ON INCOME OTHER THAN CORPORATION TAX AND ESTATE DUTY.

4. Taxes on Income other than Corporation Tax and Estate Duty.

Mr. SPEAKER.—Mo ion moved:

'That a sum not exceeding Rs. 27,000 be granted to the Government to defray the charges which will come in course of payment during the year ending 31st day of March 1958, in respect of "Taxes on Income other than Corporation Tax and Estate Duty".'

DEMAND No. 3—STATE EXCISE

8. State Excise Duties

Mr. SPEAKER.—Motion moved:

'That a sum not exceeding Rs.30,97,000 be granted to the Government to defray the charges which will come in course of payment during the year ending 31st day of March 1958, in respect of "State Excise".'

DEMAND No. 4—STAMPS

9. Stamps

Mr. SPEAKER.—Motion moved:

'That a sum not exceeding Rs. 2,35,000 be granted to the Government to defray the charges which will come in course of payment during the year ending 31st day of March 1958, in respect of "Stamps".'

DEMAND No. 7—TAXES ON VEHICLES

12. Taxes on Vehicles

Mr. SPEAKER.—Motion moved:

'That a sum not exceeding Rs. 17,83,500 be granted to the Government to defray the charges which will come in course of payment during the year ending 31st day of March 1958, in respect of "Taxes on Vehicles".'

DEMAND No. 8—OTHER TAXES AND DUTIES

13. Other taxes and duties

Mr. SPEAKER.—Motion moved:

'That a sum not exceeding Rs. 65,06,400 be granted to the Government to defray the charges which will come in course of payment during the year ending 31st day of March 1958, in respect of "Other Taxes and Duties".'

Sri M. C. NARASIMHAN (Kolar Gold Fields).—Can these be covered in two days, Sir ?

Mr. SPEAKER.—We shall see what happens.

Sri M. C. NARASIMHAN.—If two Demands are taken up for today, the debate being confined to those Demands for to-day, and on Monday if the other Demands are taken up, it would facilitate discussion, and we could place our views on all the Demands. But when there are half a dozen Demands and there is only limited time at our disposal, it is not possible to express our views on all the subjects.

Mr. SPEAKER.—The Hon'ble Members may offer their remarks on any of the Demands or all of the Demands or on a few of the Demands. This being so, I have no objection if Hon'ble Members take the whole of the day in discussing only one Demand.

Sri M. C. NARASIMHAN.—I fear that my submission was not clear. My difficulty is, if all the Demands are taken together, some of us who are interested in all the Demands, *i.e.*, Excise, Stamps, Other Duties and Taxes, etc., may get only five or seven minutes Each . . .

Mr. SPEAKER.—Hon'ble Members can speak on all the Demands or any of the Demands.

Sri M. C. NARASIMHAN.—It will be difficult for members to speak on all the Demands within five minutes.

Mr. SPEAKER.—I understand the difficulty. Hon'ble Members want more than ten minutes. I have no objection to give more time exceeding ten minutes in each case.

Sri ANNARAO GANAMUKHI (Afzalpur).—On a point of information, Sir. May I know whether it is not necessary to know whether recommendation of the Governor is obtained for the Demands made ? That information ought to have been made known to us while making the Demands so as to enable us to know that such Demands are sanctioned according to the Constitution.

Mr. SPEAKER.—It is not necessary. In some Assemblies recommendation of the Governor is announced and in some other Assemblies it is not announced in the House. The recommendation of the Governor is for the information of the Chair and that information is with me.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಅಧ್ಯಕ್ಷರೆ, ಈಗ ನಾನು ಮೈಸೂರು ಸಂಸ್ಥಾನದಲ್ಲಿ ಸರ್ಕಾರಕ್ಕೆ ಬರತಕ್ಕ ತೆರಿಗೆಗಳ ವಿಚಾರದಲ್ಲಿ ವರಮಾನ ಮತ್ತು ಖರ್ಚಿನ ವಿಚಾರದಲ್ಲಿ, ರಾಜ್ಯದ ಎಕ್ಸೈಜು ಸುಂಕಗಳು, ಸ್ಟಾಂಪುಗಳು, ವಾಹನಗಳ ಮೇಲಿನ ತೆರಿಗೆಗಳು ಎಂದರೆ ಮೋಟಾರು ವಾಹನಗಳು ಇವುಗಳ ಮೇಲೆ ಬರುವ ವರಮಾನ ಮತ್ತು ಖರ್ಚುಗಳ ವಿಚಾರದಲ್ಲಿ ನನ್ನ ಅಭಿಪ್ರಾಯಗಳನ್ನು ಕೊಡಬೇಕೆಂದು ನಿಂತಿದ್ದೇನೆ.

ಮೊದಲನೆಯದಾಗಿ ಈ ಎಲ್ಲಾ ತೆರಿಗೆಗಳ ವಿಚಾರದಲ್ಲಿ ನಾವು ಆಲೋಚಿಸುವುದಾದರೆ ಈಗ ನಮ್ಮ ಮೈಸೂರು ಸಂಸ್ಥಾನದಲ್ಲಿ ವಿಪರೀತವಾಗಿ ತೆರಿಗೆಗಳನ್ನು ಹಾಕುವುದರ ಮೂಲಕವೇ ದೇಶದ ಉತ್ಪತ್ತಿಯನ್ನು ಹೆಚ್ಚುಮಾಡುವ ಒಂದು ಹವ್ಯಾಸಕ್ಕೆ ಹೊರಟಿದ್ದಾರೆ. ಹೀಗೆ ಹೊರಟಿರುವಾಗ ಈ ತೆರಿಗೆ ಕೊಡಲು ಜನರ ಶಕ್ತಿ ಎಷ್ಟರಮಟ್ಟಿಗಿದೆ ಎಂಬ ವಿಚಾರದಲ್ಲಿ

ಯಾವ ಸಾಹಿತ್ಯವನ್ನೂ ನಮ್ಮ ಮುಂದಿಡಲಿಲ್ಲ. ಇದು ವರೆಗೂ ನಾವು ಇಲ್ಲಿ ಚರ್ಚೆ ಮಾಡತಕ್ಕಂಥ ಕಾಲ ದಲ್ಲಿ 1948ನೆಯ ಇಸವಿಯಿಂದೀಚೆಗಾದರೂ ಮಹಾ ಜನರ ಶಕ್ತಿ ತೆರಿಗೆ ಕೊಡುವ ಸಂಬಂಧದಲ್ಲಿ ಇಷ್ಟರಮಟ್ಟಿಗೆ ಹೆಚ್ಚಿದೆ, ಅದರಿಂದ ತೆರಿಗೆ ಹೆಚ್ಚು ಮಾಡುತ್ತೇವೆಂದು ಹೇಳಲಿಲ್ಲ. ಆದ್ದರಿಂದ ನಮಗೆ ಸರ್ಕಾರದವರ ಹತ್ತಿರ ಅಂಕಿ ಅಂಶವಿದೆಯೋ, ಇಲ್ಲವೋ ಎಂಬ ಅನುಮಾನ ಬಂದಿದೆ. 1947ನೆಯ ಇಸವಿಯ ಹಿಂದೆ ಈಗಿರುವ ಯಾವ ತೆರಿಗೆಗಳೂ ಇರಲಿಲ್ಲ. ಈಗಿರುವ ಸಂಸ್ಥಾನದ ವರಮಾನದ ರೀತಿಯೇ ಬೇರೆ. ಅಲ್ಲಿಂದ ಇಲ್ಲಿಯವರೆಗೂ ತೆರಿಗೆಗಳನ್ನು ಹಾಕಬೇಕೆಂದು ವಿಶೇಷ ಪ್ರಯತ್ನ ನಡೆಯುತ್ತಿದೆ. ಅದರಲ್ಲಿಯೂ ತೆರಿಗೆ ಹಾಕುವಾಗ ಯಾವ ಸಂಸ್ಥಾನದಲ್ಲಿ ಹೆಚ್ಚಾಗಿ ಹಾಕಿದ್ದಾರೋ ಕೇವಲ ಅದನ್ನೇ ನಿದರ್ಶನವಾಗಿ ಇಟ್ಟುಕೊಳ್ಳುತ್ತಾ ತೆರಿಗೆಗಳನ್ನು ಹಾಕುವುದು ಒಂದು ಅಭ್ಯಾಸವಾಗಿದೆ. ದೇಶ ದೇಶಕ್ಕೂ ಸನ್ನಿವೇಶಗಳು ವ್ಯತ್ಯಾಸವಾಗುತ್ತಿರುತ್ತವೆ. ಆಯಾ ದೇಶಗಳಲ್ಲಿರುವ ಸನ್ನಿವೇಶಕ್ಕನುಗುಣವಾಗಿ ಪ್ರಜೆಗಳ ಉತ್ಪತ್ತಿ ಯಾವ ರೀತಿಯಿದೆಯೆಂದು ತಿಳಿದುಕೊಂಡು ಆಯಾ ಸಂದರ್ಭಕ್ಕೆ ತಕ್ಕಂತೆ ಅಲ್ಲಿ ತೆರಿಗೆ ಹಾಕಿರಬಹುದು. ಇದು ಸ್ಥೂಲವಾಗಿ ಆಲೋಚನೆ ಮಾಡುವ ಸಂದರ್ಭ; ಮತ್ತು ಹಾಗೆ ಮಾಡುವಾಗ ನಮ್ಮ ದೇಶದ ಸಂಪತ್ತು ಹೆಚ್ಚಲು ಎಷ್ಟರಮಟ್ಟಿಗೆ ಪ್ರಯತ್ನ ಮಾಡಿದ್ದೇವೆ, ಪ್ರತಿಯೊಬ್ಬರ ಉತ್ಪಾದನೆ ದೇಶದಲ್ಲಿ ಎಷ್ಟರಮಟ್ಟಿಗೆ ಹೆಚ್ಚಾಗಿದೆ ಎಂದು ನೋಡಿ ಆ ದೃಷ್ಟಿಯಿಂದ ತೆರಿಗೆ ಹಾಕಿದ್ದಾರೆಯೆ ಎಂಬುದನ್ನು ನೋಡಬೇಕು. ಹಾಗೆ ನೋಡಿದರೆ ಆ ರೀತಿ ಮಾಡಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ವ್ಯವಸಾಯದ ಬಾಬಿನ ಉತ್ಪತ್ತಿಯ ಮೇಲೆ ತೆರಿಗೆ ಹಾಕುವ ವಿಚಾರವನ್ನು ಸಹಿತ ನಾವು ಈ ಸಭೆಯ ಮುಂದೆ ಚರ್ಚೆ ಮಾಡುತ್ತಿದ್ದೇವೆ. ಸ್ವಲ್ಪ ದಿವಸದಲ್ಲೇ ಅದು ಆಲೋಚನೆಗೆ ಒಳಗಾಗುತ್ತದೆ. ಅಲ್ಲೂ ಸಹಿತ ನಾವು ನೋಡಿದರೆ ಸುತ್ತಮುತ್ತಲೂ ಇರುವ ಪ್ರಾಂತಗಳಲ್ಲಿ ಎಲ್ಲಿ ತೆರಿಗೆ ಹೆಚ್ಚಾಗಿದೆಯೋ ಅದನ್ನೇ ಇಲ್ಲೂ ಅನುಸರಿಸುವ ಪ್ರಯತ್ನ ನಡೆದಿದೆ. ಈ ವಿಚಾರದಲ್ಲಾಗಲೆ ವಿಪರೀತ ಚರ್ಚೆಯಾಗಿದೆ. ಈ ದೃಷ್ಟಿಯಿಂದ ನಾನು ಕೇಳಿಕೊಳ್ಳುವುದಿಷ್ಟೆ: ಈ ತೆರಿಗೆಗಳನ್ನು ಹಾಕುವ ಹವ್ಯಾಸದಲ್ಲಿ ನಾವು ಹುಷಾರಾಗಿರಬೇಕು. ನಾನು ಹೆಚ್ಚಾಗಿ ಹೇಳುವುದಿಲ್ಲ. ಒಂದು ವಿಚಾರವನ್ನು ಮಾತ್ರ ಹೇಳುತ್ತೇನೆ. 1700 ಚಿಲ್ಲರೆ ಇಸವಿಯಲ್ಲಿ ಎಂದರೆ 18ನೆಯ ಶತಮಾನದಲ್ಲಿ ರಾಜ್ಯಭಾರ ಮಾಡುವ ವಿವಿಧ ದೇಶಗಳಲ್ಲಿ ಕೂಡ ತೆರಿಗೆ ಹಾಕುವುದಕ್ಕೆ ಪ್ರಾರಂಭಿಸಿದ ಮೇಲೆ ಹದಿನಾಲ್ಕನೆಯ ಲೂಯಿ ಗತಿಯೇನಾಯಿತು, ಪೀಟರ್ ಗತಿಯೇನಾಯಿತು, ರಷ್ಯಾದ ಪೀಟರ್ ದಿ ಗ್ರೇಟ್ ಗತಿಯೇನಾಯಿತು ಎಂದು ಹೀಗೆ ಆಲೋಚನೆಮಾಡಿದರೆ ತೆರಿಗೆ ಹಾಕುವುದರಿಂದ ಏನು ಅಪಾಯವಾದೀತೆಂಬ ತಿಳಿವು ಸರ್ಕಾರಕ್ಕಿರುವ ಹಾಗೆ ಕಾಣುವುದಿಲ್ಲ. ನಾನು ಧರ್ಮದೃಷ್ಟಿಯಿಂದ ಹೇಳುತ್ತಿದ್ದೇನೆ. 18ನೆಯ ಶತಮಾನದಲ್ಲಿ ಇಂಗ್ಲೀಷರ ದರ್ಬಾರು ಅಮೇರಿಕಾದಲ್ಲಿದ್ದಾಗ 'ಟಿ' ಮೇಲೆ ತೆರಿಗೆ ಹಾಕಿದ್ದಕ್ಕೆ ಇಂಗ್ಲೀಷರನ್ನು ಅವರ ದೇಶಕ್ಕೆ ವಾಪಸ್ಸು ಕಳುಹಿಸಿದರು. ಇದನ್ನು ನಾವು ಗಮನಿಸಬೇಕು, ತಾವು ಗಾಂಧಿ ಶಿಷ್ಯರು. ಉಪ್ಪಿನ ಸತ್ಯಾಗ್ರಹವನ್ನು ಮಹಾತ್ಮ ಗಾಂಧಿಯವರು ಯಾವ ಉದ್ದೇಶದಿಂದ ಮಾಡಿದರು ಎಂಬುದನ್ನು ತಿಳಿಯದೆ ಅವರ ತತ್ತ್ವವನ್ನು ಬದಿಗಿಟ್ಟು ಗಾಂಧೀಜಿ ಮಾರ್ಗವನ್ನನುಸರಿಸಿ ಅವರ ತತ್ತ್ವವನ್ನು ಅನುಷ್ಠಾನಕ್ಕೆ ತರುತ್ತಿದ್ದೇವೆಂದು ಹೇಳುತ್ತಿದ್ದೀರಿ. ಸಾರ್ವಜನಿಕರು ಉಪಯೋಗಿಸುವ ಸಾಮಾನ್ಯ ಪದಾರ್ಥಗಳ ಮೇಲೆ ತೆರಿಗೆ ಹಾಕಬಾರದೆಂಬ ಉದ್ದೇಶದಿಂದ ಹಿಂದೆ ಉಪ್ಪಿನ ಸತ್ಯಾಗ್ರಹ ಮಾಡಿದ್ದಾರೆ. ಅದನ್ನು ಗಮನಿಸದೆ ತೆರಿಗೆಗಳನ್ನು ಹಾಕುತ್ತಿರುವುದು ಬಹಳ ಸಂಕಟಕ್ಕೀಡು ಮಾಡಿದೆ. ಈ ತೆರಿಗೆಗಳನ್ನು ವಿಪರೀತವಾಗಿ ಹಾಕುತ್ತಿದ್ದರೆ ಅದಕ್ಕೆ ಸರಿಯಾದ ಪ್ರತಿಫಲವನ್ನು ತೆರಿಗೆ ಹಾಕುವವರು ಅನುಭವಿಸಲೇಬೇಕು. ಅದಕ್ಕೆ ತಯಾರಾಗಿರಬೇಕಾಗುತ್ತದೆ, ಎದುರಿಸುವುದಕ್ಕೆ ಸಿದ್ಧರಾಗಿರಬೇಕಾಗುತ್ತದೆ ಎಂಬ ವಿಚಾರವನ್ನು ಕೂಡ ಆಲೋಚನೆ ಮಾಡಬೇಕಾಗಿದೆ.

ಇನ್ನು ಎಕ್ಸೈಜು ಸುಂಕಗಳ ಸಂಬಂಧದಲ್ಲಿ ಕೆಲವು ವಿಚಾರ ಹೇಳಬೇಕೆಂದಿದ್ದೇನೆ. ಎಕ್ಸೈಜು ಸುಂಕದ ವಿಚಾರದಲ್ಲಿ ನಿಮ್ಮ ನೀತಿಯೇನು ? ಮೈಸೂರು ಸಂಸ್ಥಾನದ ನೀತಿಯೇನು ? ಕುಡಿತವನ್ನು ತಪ್ಪಿಸುತ್ತೀರೋ ? ಅಥವಾ ಇಟ್ಟುಕೊಳ್ಳುತ್ತೀರೋ ? Whether you are socialist or not, I would like to know. ಗಾಂಧೀಜಿಯವರ ತತ್ತ್ವಪರಿಪಾಲನೆಗಾದರೂ ಸರಿಯಾದ ನೀತಿಯನ್ನನುರಿಸಬೇಡವೇ ? ಗಾಂಧಿಯವರು ಕುಡಿತ ತಪ್ಪಿಸಿ ಎಂದು ಹೇಳಿದ್ದರು ನಿಮಗೆ ಅವರ ತತ್ತ್ವದಲ್ಲಿ ನಂಬಿಕೆಯಿಲ್ಲದಿದ್ದರೆ ಇಲ್ಲವೆಂದಾದರೂ ಹೇಳಬಾರದೆ ? ಅರ್ಧ ದೇಶದಲ್ಲಿ ಪಾನ ನಿರೋಧ ಜಾರಿಗೆ ತಂದು ಇನ್ನರ್ಧದೇಶದಲ್ಲಿ ಜಾರಿಗೆ ತಾರದಿರುವುದು ಸರಿಯೆ ಎಂಬುದನ್ನು ಧರ್ಮದೃಷ್ಟಿಯಿಂದಲಾದರೂ ಆಲೋಚಿಸಬೇಡವೆ ? ಈ ದ್ವಿಮುಖವಾದ ಮನೋಭಾವ, ಹೇಳುವುದೊಂದು ಮಾಡುವುದೊಂದು, ಹೋಗಬೇಕು. ಈಗ ಅರ್ಧಮರ್ಧ ಮಾಡಿದ್ದೀರಿ. ಐದು ವರ್ಷಗಳಲ್ಲಿ ಕುಡಿತವನ್ನು ನಿಲ್ಲಿಸುತ್ತೇವೆಂದು ಹೇಳಿದ್ದಿರಿ. ಅಲ್ಲಿಂದೀಚೆಗೆ ಏನಾದರೂ ನಿಮ್ಮ ಅಭಿಪ್ರಾಯ ಬದಲಾವಣೆಯಾಗಿದ್ದರೆ ಅದನ್ನಾದರೂ ತಿಳಿಸಿ. ಬೊಂಬಾಯಿಯಲ್ಲೂ ಸಹ ಕುಡಿತವನ್ನು ನಿಲ್ಲಿಸಿರುವ ಉದಾಹರಣೆಯಿರುವಾಗ ಮೈಸೂರು ಸಂಸ್ಥಾನದಲ್ಲಿ ಐದು ವರ್ಷಗಳಲ್ಲಿ ನಿಲ್ಲಿಸುತ್ತೇವೆಂದು ಸಾರಿ ಎಷ್ಟೋ ವಿಜೃಂಭಣೆಯಿಂದ ಪ್ರತಿ ಜಿಲ್ಲೆಯಲ್ಲೂ ಕುಡಿತವೆಂಬ ರಾಕ್ಷಸನನ್ನು ಓಡಿಸುತ್ತೇವೆಂದು ಪ್ರತಿಮೆಮಾಡಿ ದೊಡ್ಡ ದೊಡ್ಡ ಮೆರವಣಿಗೆ ಮಾಡಿದ ಮಾನ್ಯ ಮಿತ್ರರು ಈ ದಿವಸ ಆ ವಿಚಾರದಲ್ಲೇನು ಹೇಳುವವರಿದ್ದಾರೆ ? ಕಾರ್ಯಕ್ರಮ ತೆಗೆದುಕೊಂಡು ಇಷ್ಟು ವರ್ಷಗಳಲ್ಲಿ ಕುಡಿತವನ್ನು ತೆಗೆದು ಹಾಕುತ್ತೇವೆಂದು ಹೇಳಿ ತೆಗೆಯದಿರುವುದಕ್ಕೆ ಕಾರಣವೇನು ? ಒಂದು ವೇಳೆ ತೆಗೆದುಹಾಕುವುದಕ್ಕೆ ಇಷ್ಟವಿಲ್ಲದಿದ್ದರೆ ಅಥವಾ ಇತ್ತೀಚೆಗೆ ಅವರ ಭಾವನೆ ಬದಲಾವಣೆಯಾಗಿದ್ದರೆ ಅದನ್ನಾದರೂ ಖಚಿತವಾಗಿ ಏಕೆ ಹೇಳಬಾರದು ? ಈ ವಿಚಾರವನ್ನೂ ಸಹಿತ ಬಹಳ ಜಾಗರೂಕತೆಯಿಂದ ಪರಿಶೀಲಿಸಬೇಕಾಗಿದೆ. ಹಾಗೆ ಮಾಡದಿದ್ದರೆ ದೇಶದಲ್ಲಿ ಬಹಳ ಅನಾಹುತವಾಗುತ್ತದೆ. ಕೆಲವು ಸ್ಥಳಗಳಲ್ಲಿ ಕುಡಿತಕ್ಕೆ ಅವಕಾಶ ಕೊಟ್ಟು ಇನ್ನು ಕೆಲವು ಸ್ಥಳಗಳಲ್ಲಿ ಕೊಡದಿರುವುದು ಸರಿಯಾದ ನೀತಿಯಲ್ಲ, ಜನತೆಗೆ ಒಂದು ಭಾವನೆ ಬರಲು ಅವಕಾಶವಾಗುತ್ತದೆ. ನಿನ್ನೆ ಮಾನ್ಯ ಮಿತ್ರರು ಮಹಾರಾಜರ ವರ್ಧಂತಿ ವಿಚಾರದಲ್ಲಿ ಮಾತನಾಡುತ್ತಾ ಅದನ್ನು ನೋಡಲು ಬಹು ಜನರು ಬರುತ್ತಾರೆ ; ಹೆಚ್ಚು ಉತ್ಪತ್ತಿ ಅದರಿಂದ ಬರುತ್ತದೆ ಎಂದು ಹೇಳಿದರು. ಅದರಲ್ಲಿ ಕುಡಿಯುವುದಕ್ಕಾಗಿ ಬರುವವರು ಎಷ್ಟೋ ಮಂದಿ ಇರುತ್ತಾರೆ, ಅದಕ್ಕಾಗಿ ಹೊರಗಿನಿಂದ ಬರುತ್ತಾರೆ, ಪ್ರತಿ ದಿನವೂ ಮೈಸೂರು ಮತ್ತು ಬೆಂಗಳೂರು ಸಿಟಿಗಳಿಗೆ ಕುಡಿಯುವುದಕ್ಕೆ ಎಷ್ಟು ಜನ ಬರುತ್ತಾರೆ, ಹಾಗೆ ಬಂದು ಎಷ್ಟು ಹಣ ಹಾಳು ಮಾಡಿಕೊಳ್ಳುತ್ತಾರೆ ಎಂಬುದನ್ನು ಸಹ ಗಮನಿಸಬೇಕು. ಸರ್ಕಾರದ ಅರ್ಧಮರ್ಧವಾದ ಈ ನೀತಿಯಿಂದ ಜನತೆಗೂ

(ಶ್ರೀ ಕೆ. ಕೆಂಚಪ್ಪ.)

ಲಾಭವಿಲ್ಲ, ಸರ್ಕಾರಕ್ಕೂ ಲಾಭವಿಲ್ಲ, ಹಣ ನಷ್ಟ ಮಾಡಿಕೊಳ್ಳುವವರು ಮಾಡಿಕೊಳ್ಳುತ್ತಲೇ ಇದ್ದಾರೆ. ಯಾರು ಇಲ್ಲಿಗೆ ಬಂದು ಖರ್ಚುಮಾಡುತ್ತಿದ್ದಾರೋ ಅವರು ನಮ್ಮವರೇ ಆಗಿರುತ್ತಾರೆ. ಬಹು ಭಾಗದ ಜನರು ಕನ್ನಡಿಗರಾಗಿರುತ್ತಾರೆ. ಅವರು ಇಲ್ಲಿಗೆ ಬರುವುದಕ್ಕೆ ಎಷ್ಟೋ ದುಡ್ಡನ್ನು ಖರ್ಚುಮಾಡುತ್ತಿದ್ದಾರೆ. ಈ ದೃಷ್ಟಿಯಿಂದ ಮತ್ತೊಂದು ಸಾರಿ ಕೇಳುತ್ತೇನೆ. ದಯಮಾಡಿ ಮಂತ್ರಿಗಳು ಈ ವಿಚಾರವಾಗಿ ಕ್ಯಾಟಗಾರಿಕಲ್ ಸ್ಟೇಟ್‌ಮೆಂಟೊಂದನ್ನು ಕೊಡಬೇಕಾಗಿದೆ. ಇಲ್ಲದಿದ್ದರೆ ನಮ್ಮ ವಿರೋಧ ಪಕ್ಷದವರಲ್ಲಿ ಈ ವಿಚಾರದಲ್ಲಿ ಈಗಾಗಲೇ ಒಂದು ಅನುಮಾನ ಬಂದಿದೆ. ಅದು double thinking, double action ಎಂಬಂತಾಗಿದೆ. ಆಡಿದಮಾತಿಗೂ ಮಾಡುವ ಕಾರ್ಯಕ್ಕೂ ತುಂಬಾ ವಿರುದ್ಧವಾಗಿದೆ. ಆತ್ಮ ನುಡಿದಂತೆ ನಡೆಯಬೇಕು ಎಂಬ ತತ್ತ್ವಕ್ಕೆ ವಿರೋಧವಾಗಿದೆಯೆಂದು ಇಷ್ಟೆಲ್ಲಾ ನಾನು ಹೇಳುತ್ತಿದ್ದೇನೆ.

ಇನ್ನು ಪ್ರೊಹಿಬಿಷನ್ ವಿಚಾರದಲ್ಲಿ ಖಂಡಿತವಾಗಿ ನಮ್ಮ ಅಭಿಪ್ರಾಯವನ್ನು ಈಗ ಕೊಡಬೇಕಾಗಿದೆ. ಆಡಳಿತ ಪಕ್ಷದವರು ಒಂದು ವೇಳೆ ಈ ಪಾನ ನಿರೋಧವನ್ನು ಸಂಸ್ಥಾನಾದ್ಯಂತ ಸಂಪೂರ್ಣವಾಗಿ ಜಾರಿಗೆ ತರುವುದಾದರೆ, ನಮ್ಮ ಪಕ್ಷದ ಸಂಪೂರ್ಣ ಬೆಂಬಲವಿದೆಯೆಂದು ಆಶ್ವಾಸನೆಯನ್ನು ಕೊಡುತ್ತೇನೆ. (*Hear, Hear*) ಆ ರೀತಿ ಪಾನನಿರೋಧವನ್ನು ಸಂಸ್ಥಾನಾದ್ಯಂತ ಜಾರಿಮಾಡಲು ಆಗುವುದಿಲ್ಲವೆಂದು ಏನಾದರೂ ಅಭಿಪ್ರಾಯಪಟ್ಟಿದ್ದರೆ, ಅದನ್ನು ಈ ಸಭೆಯಲ್ಲಿ ಹೇಳಲಿ. When law become lawless, disobedience becomes duty, ಎಂಬ ವಿಚಾರವನ್ನು ಸಹ ಮಹಾತ್ಮ ಗಾಂಧೀಯವರು ಹೇಳಿದಾರೆ. ಅದಕ್ಕೋಸ್ಕರವಾಗಿ ನಾವು ಈ ವಿಚಾರವಾಗಿ ತೀರ್ಮಾನ ಮಾಡಬೇಕಾಗಿದೆ. ನಾನು ಈ ವಿಷಯವನ್ನು ಅತಿ ಕಳಕಳಿಯಿಂದ ಕೇಳುತ್ತಿದ್ದೇನೆ. ಒಂದು ಧರ್ಮದೃಷ್ಟಿಯಿಂದ, ಒಂದು ತಾತ್ತ್ವಿಕ ದೃಷ್ಟಿಯಿಂದ ಕೇಳುತ್ತಿದ್ದೇನೆ. ಇದನ್ನು ಮಂತ್ರಿಗಳು ಉತ್ತರ ಕೊಡುವಾಗ ಖಚಿತವಾಗಿ ಹೇಳಬೇಕಾಗಿದೆ.

ಇನ್ನು ಎಕ್ಸೈಜು ಬಾಬಿನ ವಿಚಾರದಲ್ಲಿ ಇಲಾಖೆಯಲ್ಲಿ ನಡೆಯುತ್ತಿರುವ ಆಡಳಿತವನ್ನು ನೋಡುವುದಾದರೆ ಈಗ ಇದ್ದಷ್ಟೇ ಸಾಕಾಗಿದೆ. ಎಷ್ಟು ಸಡಿಲವಾದ ವ್ಯವಸ್ಥೆ ಈ ರಾಜ್ಯಭಾರದಲ್ಲಿ ಇದೆಯೆಂಬುದನ್ನು ತೋರಿಸುವುದಕ್ಕೆ ಇವೊತ್ತಿನದಿವಸ ಕುಡಿಯದೆ ಇರತಕ್ಕ ಜನರು ಪಾನನಿರೋಧವನ್ನು ಎಲ್ಲಿ ತೆಗೆದುಹಾಕಿದ್ದಾರೋ, ಅಲ್ಲಿ ಎಷ್ಟೋ ಜನರು ಕುಡಿಯುತ್ತಾ ಇದ್ದಾರೆ. ಕುಡಿಯದವನೇ ಪಾಪಿ !

ಇನ್ನು ಗೋಲ್ಡ್ ಮೈನ್ಸನ್ನು ರಾಷ್ಟ್ರೀಕರಣಮಾಡಿದ್ದೇವೆಂದು ಹೇಳಿದ್ದಾರೆ. ಇದರಿಂದ ಬರುವ ಉತ್ಪತ್ತಿಯನ್ನು ರಾಷ್ಟ್ರೀಕರಣ ಮಾಡಬೇಕೆಂದು ಹೋಗಿದ್ದಾರೆ. ಅಲ್ಲಿಯ ಜನರು ತಮ್ಮ ಸ್ವೇಚ್ಛಾನುಸಾರವಾಗಿ ಕುಡಿದು ಹಣವನ್ನು ಕಳೆದುಕೊಂಡು ತಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳುತ್ತಿದ್ದಾರೆ. ಈ ವಿಚಾರದಲ್ಲಿ ಒಂದು ಬಿಗಿಯಾದ ಆಡಳಿತವನ್ನು ನಮ್ಮ ಸರ್ಕಾರದವರು ಇಂಟ್ರಡ್ಯೂಸ್‌ಮಾಡಲಿಲ್ಲ. ಇದರಲ್ಲಿ ಪೋಲೀಸಿನವರ ಕೈವಾಡ ತುಂಬ ಜಾಸ್ತಿಯಾಗಿದೆ. ಇದು ಒಂದು ವ್ಯಸನಕರವಾದ ವಿಷಯ. ಈಗ್ಗೆ ಮೂರು ನಾಲ್ಕು ತಿಂಗಳ ಹಿಂದೆ, ಒಬ್ಬ ಕಾನ್‌ಸ್ಟೇಬಲ್ಲಿನ ಕತ್ತನ್ನು ಕತ್ತರಿಸಿ ಅದನ್ನು ಎಲ್ಲೋ ಒಂದುಕಡೆ ಹೂತು ಹಾಕಿದ್ದರು. ಕಳ್ಳಭಟ್ಟಿ ಸಾರಾಯಿಯನ್ನು ತಯಾರುಮಾಡುತ್ತಿದ್ದ ಕೇಸನ್ನು ಹಿಡಿಯುವುದಕ್ಕೆ ಹೋದಾಗ ಈ ಕೃತ್ಯ ನಡೆದಿದ್ದು ಎಂದು ಆಮೇಲೆ ಗೊತ್ತಾಯಿತು. ಈ ವಿಚಾರದಲ್ಲಿ ಎಷ್ಟರಮಟ್ಟಿಗೆ ದಕ್ಷತೆಯಿಂದ ಕೆಲಸಮಾಡಿದ್ದಾರೆಂಬುದು ಗೊತ್ತಾಗುತ್ತದೆ. ಇದನ್ನು ತಾವು ವಿಚಾರಮಾಡಬೇಕಾಗಿದೆ. ಅದು ಸಬ್ ಜುಡೀಸ್ ಆದರೂ ಒಬ್ಬ ಕಾನ್‌ಸ್ಟೇಬಲ್ಲಿನ ಕತ್ತನ್ನು ಕತ್ತರಿಸಿ ಹಾಕಿರುವುದರಿಂದ ಪೋಲೀಸಿನವರು ಎಷ್ಟು ಕಳಕಳಿಯಿಂದ ಇದ್ದಾರೆಂಬುದನ್ನು ಯೋಚಿಸಬೇಕು. ಹಿಂದೆ ಒಂದು ಸಾರಿ ಈಸೂರಿನಲ್ಲಿ ಕೆಲವು ಪೋಲೀಸಿನವರಿಗೆ ಪ್ರಾಣಹಾನಿಯಾಯಿತು. ದೇಶದ ಒಂದು ಪ್ರೇಮಕ್ಕೋಸ್ಕರ ಒಳಗಾಗಿದ್ದ ಜನರು ಈ ಒಂದು ತಪ್ಪಿಗೆ ಕಟ್ಟುಬಿದ್ದು ಆರೀತಿ ಮಾಡ್ಡಿದರು. ಆದರೆ ಪೋಲೀಸಿನವರು ಎಷ್ಟು ಕಠಿಣವಾದ ಕ್ರಮವನ್ನು ತೆಗೆದುಕೊಂಡರು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಒಬ್ಬ ಕಾನ್‌ಸ್ಟೇಬಲ್ ಟ್ರೆಜರಿ ಡ್ಯೂಟಿಯಲ್ಲಿದ್ದವನು ಟ್ರೆಜರಿ ಡ್ಯೂಟಿಯನ್ನು ಬಿಟ್ಟು ಅಲ್ಲಿಗೆ ಏತಕ್ಕೆ ಹೋಗಿದ್ದನೆಂಬುದನ್ನು ತಾವೇ ಯೋಚಿಸಬಹುದು. ಆತನಿಗೆ ಎಷ್ಟು ದಿವಸಗಳಿಂದ ಅಭ್ಯಾಸವಿತ್ತೋ ? ಯಾರೋ ಏನು ಪಿತೂರಿ ಮಾಡಿದ್ದಾರೆಯೋ ? ಆಡಳಿತದಲ್ಲಿ ಇಷ್ಟರಮಟ್ಟಿಗೆ ಬಿಗಿ ಇದೆ. ಎಷ್ಟುಸಾರಿ ಆ ಸ್ಥಳಕ್ಕೆ ಹೋಗಿದ್ದನೋ, ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಲ್ಲಿ ಎಷ್ಟು ಸಹಕರಿಸಿದ್ದನೋ ಗೊತ್ತಿಲ್ಲ. ಇಷ್ಟು ಬಿಗಿತಪ್ಪಿದ ಆಡಳಿತದಿಂದ ದೇಶಕ್ಕೆ ತುಂಬ ನಷ್ಟವಾಗಿದೆ.

ಇನ್ನು ಒಂದು ವಿಚಾರ. ಎಕ್ಸೈಜು ವರಮಾನದಲ್ಲಿ ಜಿಲ್ಲಾ ಬೋರ್ಡುಗಳಿಗೂ ಒಂದು ಭಾಗವನ್ನು ಕೊಡಬೇಕಾಗಿದೆ. ಹಿಂದೆ ಈ ಎಕ್ಸೈಜು ವರಮಾನದ ಮೇಲೆ ಒಂದು ಸೆಸ್ಸನ್ನು ಹಾಕಿದ್ದರು. ಅದನ್ನು ಆಗಲೇ ಅಸೈನ್‌ಮೆಂಟ್ ಮಾಡಿದ್ದರೂ ಜಿಲ್ಲಾ ಬೋರ್ಡುಗಳಿಗೆ ಇನ್ನೂ ಕೊಟ್ಟಿಲ್ಲ. 1952ನೆಯ ಇಸವಿಯಲ್ಲಿ ಜಿಲ್ಲಾ ಬೋರ್ಡು ಮತ್ತು ವಿಲೇಜ್ ಪಂಚಾಯಿತಿ ಆಕ್ಟು ತಿದ್ದುಪಡಿಯಾದಮೇಲೆ, ಸರ್ಕಾರಕ್ಕೆ ಬರುವ ರೆವಿನ್ಯೂ ಉತ್ಪತ್ತಿಯಲ್ಲಿ ಶೇ. $12\frac{1}{2}$ ಭಾಗ ಜಿಲ್ಲಾ ಬೋರ್ಡುಗಳಿಗೆ ಕೊಡಬೇಕೆಂದು ಕಾನೂನು ಇದೆ. ಆ ರೀತಿ ಕಾನೂನು ಇದ್ದರೂ ಸಹ, ಅದನ್ನು ಕೊಡುತ್ತಾ ಇಲ್ಲ. ಇದನ್ನು ನೋಡಿದರೆ ಜಿಲ್ಲಾ ಬೋರ್ಡುಗಳು ರಸ್ತೆಗಳನ್ನು ಯಾವರೀತಿ ರಿಪೇರಿಮಾಡಬೇಕು ? ಎಕ್ಸೈಜು ವರಮಾನದಲ್ಲಿ ಜಿಲ್ಲಾ ಬೋರ್ಡುಗಳಿಗೆ ಅಸೈನ್‌ಮೆಂಟ್ ಮಾಡಿದ್ದರೂ ಕೊಡಬೇಕಾದ ಭಾಗವನ್ನು ಇನ್ನೂ ಕೊಡದೆ ಇರುವುದು ಬಹಳ ಶೋಚನೀಯ. ಕಾನೂನಿನ ರೀತಿಕೊಡುವುದು ಸರ್ಕಾರದ ಲಕ್ಷಣವಲ್ಲವೇ ? ಅದನ್ನು ಇನ್ನೂ ಕೊಡದೇ ಇದ್ದಾರೆ ! ಇವರನ್ನು ಕೇಳುವವರು ಯಾರು ಇದ್ದಾರೆ ? ಡೆಪ್ಯೂಟಿ ಕಮಿಷನರ್ ನಮ್ಮವರು ಎಂಬ ಮನೋಭಾವದಿಂದ ಸರ್ಕಾರದವರು ಸುಮ್ಮನಿದ್ದಾರೆ, ಎಂದುಕಾಣುತ್ತದೆ. ಕೊಡುವ ದುಡ್ಡನ್ನು ಕೊಡದೇ ಇದ್ದರೆ ಏನು ಅರ್ಥವಾಗುತ್ತದೆ ? ಇದುವರೆಗೂ ಆ ದುಡ್ಡನ್ನು ಕೊಟ್ಟಿಲ್ಲ. ಇದನ್ನು ನಾನು ವಿಷಾದದಿಂದ ಹೇಳಬೇಕಾಗಿದೆ. ಈ ರೀತಿಯ ಮನೋಭಾವದಿಂದ ರಾಜ್ಯಭಾರವನ್ನು ಮಾಡುವುದು ತುಂಬ ತಪ್ಪಾಗುತ್ತದೆ.

ಇನ್ನು ಸ್ಟಾಂಪು ವಿಷಯ. ನಮ್ಮ ಸರ್ಕಾರದವರು ಸ್ಟಾಂಪು ಇಲಾಖೆ ಎಂಬುದು ಒಂದು ವರಮಾನ ಬರುವ ಇಲಾಖೆಯೆಂದು ಅಭಿಪ್ರಾಯಪಟ್ಟಿರುವ ಹಾಗೆ ಕಾಣಿಸುತ್ತದೆ. ಇದು ಇನ್‌ಕಂಟ್ಯಾಕ್ಸ್ ಅಲ್ಲ. ಇದನ್ನು ಕೋರ್ಟ್‌ಫೀಸ್ ಮತ್ತು ವ್ಯಾಲ್ಯುಯೇಷನ್‌ಫೀಸ್ ಎಂದು ವಿಭಾಗಿಸಬಹುದು. ಕೋರ್ಟುಗಳಲ್ಲಿ ಯಾವರೀತಿ ವ್ಯಾಲ್ಯು ಮಾಡುತ್ತಿದ್ದಾರೆಂದರೆ, ಹಿಂದಿನ ಕಾನೂನಿಗೂ, ಈಗಿನ ಕಾನೂನಿಗೂ ಹೋಲಿಸಿ ನೋಡಿದರೆ, ಅಜಗಜಾಂತರ ವ್ಯತ್ಯಾಸವಿದೆ. ಇದರಿಂದ ಬಡವರಿಗೆ

ಸಾಕಷ್ಟು ನ್ಯಾಯ ಸಿಕ್ಕುತ್ತಾ ಇಲ್ಲ. ಇದನ್ನು ಬಡವರಿಗೆ ತೆರಿಗೆಯನ್ನು ವಿಧಿಸುವ ಷೆಡ್ಯೂಲಿನಲ್ಲಿ ಇಟ್ಟುಕೊಂಡಿದ್ದಾರೆ. ಈ ರೀತಿಯಾಗಿ ಒಂದಕ್ಕೊಂದು ಮಿಕ್ಸ್ ಮಾಡಿಕೊಂಡಿದ್ದಾರೆ. ತಾವು ನಿಜವಾದ ರೀತಿಯಿಂದ ಈ ವಿಚಾರವನ್ನು ಆಲೋಚನೆಮಾಡಿ. ನ್ಯಾಯವನ್ನು ದೊರಕಿಸುವ ವಿಚಾರ ವರಮಾನದಲ್ಲಿ ಬರುವುದಿಲ್ಲ. ಜನರಲ್ ಸ್ಟಾಂಪು ಮತ್ತು ಕೋರ್ಟುಫೀಸ್ಟಾಂಪುಗಳನ್ನು ಒಂದು ವರಮಾನದ ರೀತಿ ತೆಗೆದುಕೊಳ್ಳುವುದಲ್ಲ. ಆರೀತಿ ಆಲೋಚನೆ ಮಾಡುವುದೂ ಕೂಡ ಸರಿಯಲ್ಲ. ಸರ್ಕಾರದಲ್ಲಿ ನ್ಯಾಯಾಂಗದ ವ್ಯವಸ್ಥೆಯನ್ನು ಸರಿಯಾಗಿ ಮಾಡುವುದಕ್ಕೆ ಸಾಧ್ಯವಾಗದೆ ಹೋದರೆ, ಅದರಿಂದ ಬರತಕ್ಕ ವರಮಾನವನ್ನು ತೆಗೆದುಕೊಳ್ಳನೆ ಇದ್ದರೂ ಯಾವುದಾದರೂ ಒಂದು ರೀತಿಯಿಂದ ಜನರಿಗೆ ಸಹಾಯ ಮಾಡಬೇಕು. ಅದಕ್ಕೆ ಕೋರ್ಟುಫೀಸು ಸ್ಟಾಂಪ್ ಎಂದು ಕರೆಯುತ್ತಾರೆಯೇ ಹೊರತು ಕೋರ್ಟು ಟ್ಯಾಕ್ಸ್ ಸ್ಟಾಂಪ್ ಅಲ್ಲ. ಅದು ಒಂದು ಫೀಸ್ ಆಗಿದೆಯೇ ಹೊರತು ಟ್ಯಾಕ್ಸ್ ಅಲ್ಲ. ನಾವು ನ್ಯಾಯವಾಗಿ ನೋಡುವುದಾದರೆ, ನಮ್ಮ ಸರ್ಕಾರದವರ ಈ ಬೇಡಿಕೆ ನ್ಯಾಯವಾಗಿಲ್ಲ. ನ್ಯಾಯ ಸಿಕ್ಕಬೇಕಾದರೆ ಟ್ಯಾಕ್ಸ್ ಹಾಕಬಾರದು. Service must be free. ಆದರೆ ಕೆಲವಾರು ಸಂದರ್ಭಗಳಲ್ಲಿ ಈ ಫ್ರೀ ಜಸ್ಟೀಸ್ ಕೊಡುವುದಕ್ಕೆ ಸಾಧ್ಯವಾಗದೆ ಇದ್ದಂತಹ ಸಂದರ್ಭಗಳಲ್ಲಿ ಒಂದು ತರಹದ ಫೀಸನ್ನು ಇಡಿ. ನಾನು ಪ್ರಾಮಾಣಿಕತೆಯಿಂದ ಹೇಳುತ್ತಿದ್ದೇನೆ. ಕೋರ್ಟುಫೀಸನ್ನು ಇಂಟ್ರಡ್ಯೂಸ್ ಮಾಡುವಾಗ ಇದಕ್ಕೆ ಉತ್ಪತ್ತಿ ಬರಲಿ ಎನ್ನುವ ಭಾವನೆಯನ್ನು ಬಿಟ್ಟುಬಿಡಬೇಕು. ಜಸ್ಟೀಸ್ ಕೊಡುವುದಕ್ಕೆ ಸಾಕಾಗುವಷ್ಟು ಎಷ್ಟು ಬೇಕೋ ಅಷ್ಟು ಬರಲಿ ಎಂದು ಮಾಡಬೇಕು. ಹಿಂದೆ ತೆರಿಗೆಗಳ ವಿಚಾರದಲ್ಲಿ ಮಾತನಾಡುವಾಗ ಈ ಬಾಬಿನಲ್ಲಿ ನಿಖರವಾಗಿ ನಷ್ಟವಾಗಿಲ್ಲ ಎಂಬುದಕ್ಕೆ ಅಂಕಿ ಅಂಶಗಳ ಮೂಲಕ ವಿವರವಾಗಿ ತಿಳಿಸಿದ್ದೇನೆ. ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟೀಸ್‌ನಲ್ಲಿ ಈ ಅಂಶವನ್ನು ಒಪ್ಪಿದ್ದಾರೆ. ಆ ಖರ್ಚಿಗೂ ಈ ಖರ್ಚಿಗೂ ಹಿಂದೆ ಸಮನಾಗಿತ್ತು. ಈಗಲೂ ಅಂಕಿ ಅಂಶಗಳನ್ನು ತೋರಿಸುವುದಕ್ಕೆ ತಯಾರಾಗಿದ್ದೇನೆ. ತಾವು ಹೇಳಿದ ರೀತಿಯಲ್ಲಿ ನಾನು ಮಂತ್ರಿಗಳ ಹತ್ತಿರ ಹೋಗಿ ಈ ಬಾಬಿನಲ್ಲಿ ಉತ್ಪತ್ತಿ ಇಷ್ಟಿದೆ, ಖರ್ಚು ಇಷ್ಟಾಗಿದೆ, ನ್ಯಾಯಾಂಗ ಶಾಖೆಗೆ ವರಮಾನ ಹೆಚ್ಚಿಗೆ ಬರುವ ರೀತಿಯಲ್ಲಿ ಟ್ಯಾಕ್ಸ್ ಹಾಕಿದ್ದೀರಿ ಬೇರೆ ಮಾರ್ಗವೇ ಇಲ್ಲವೇ ಎಂದು ತೋರಿಸಿದ್ದೇನೆ. ಆದ್ದರಿಂದ ಸ್ಟಾಂಪು ವಿಚಾರವಾಗಿ ತೆರಿಗೆ ಹಾಕುವುದರಲ್ಲಿ ಬಹಳ ಹುಷಾರಾಗಿರಬೇಕು.

ಇನ್ನೊಂದು ವಿಚಾರ. ಈಗ ಯಾರು ರಿಜಿಸ್ಟ್ರೇಷನ್ ಮಾಡಬೇಕಾಗಿದ್ದರೂ ಒಂದಕ್ಕೆರಡರಷ್ಟು ಫೀಸನ್ನು ಕೊಡುವಂತೆ ಮಾಡಿದ್ದಾರೆ. ಜನರಲ್ ಸ್ಟಾಂಪನ್ನು ಇನ್ನು ಮುಂದೆ ಖರೀದಿ ಮಾಡುವವರನ್ನು ವಿಪರೀತ ತೊಂದರೆಗೆ ಇಟ್ಟಿದ್ದಾರೆ. ಈಗ ಒಂದೊಂದು ಸ್ಟಾಂಪು $1\frac{1}{2}$ ರೂಪಾಯಿಯಿಂದ $2\frac{1}{2}$ ರೂಪಾಯಿಗಳಾಗಿದೆ, ಈಗ ಯಾರಾದರೂ ಜಮೀನನ್ನು ಕೊಂಡುಕೊಳ್ಳ ಬೇಕಾದರೆ, ಈ ರೀತಿ ಹೆಚ್ಚು ಮಾಡುವುದರಿಂದ ಎಷ್ಟು ದುಡ್ಡು ಅವರಿಗೆ ಖರ್ಚಾಗುತ್ತದೆ ಎಂಬುದನ್ನು ತಾವೇ ನೋಡಬಹುದು. ಈಗ ಜಮೀನ್ದಾರರು ಏನು ಮಾಡುತ್ತಾರೆಂದರೆ, ಹೆಚ್ಚು ಲಾಭದ ದೃಷ್ಟಿಯಿಂದಲೇ ಒಂದು ಜಮೀನಿನ ಬೆಲೆ ಹಿಂದೆ ಹತ್ತುಸಾವಿರ ರೂಪಾಯಿಗಳಿದ್ದುದನ್ನು ಈಗ ಇಪ್ಪತ್ತು ಸಾವಿರ ರೂಪಾಯಿಗಳಿಗೇರಿಸಿ ಮಾರುತ್ತಿದ್ದಾರೆ. ಇದರಿಂದ ರೈತನಿಗೆ ಇದನ್ನು ಕೊಂಡುಕೊಳ್ಳಲು ಹೆಚ್ಚು ದಂಡಕೊಡುವುದರ ಜೊತೆಗೆ ಎಷ್ಟು ಹೆಚ್ಚು ರಿಜಿಸ್ಟ್ರೇಷನ್ ಫೀಸು ಕೊಡಬೇಕಾಗುತ್ತದೆಂಬುದನ್ನು ತಾವೇ ಯೋಚಿಸಬೇಕು. ಇದರಿಂದ ದೇಶದ ಸಂಪತ್ತು ಹಾಳಾಗಿ ಹೋಗುತ್ತದೆ ಮತ್ತು ದೇಶದ ಶಕ್ತಿ ಕುಂದಿಹೋಗುತ್ತದೆ.

10 A.M.

ಈ ದೃಷ್ಟಿಯಿಂದ ನಾವು ಯಾವ ಕಾರ್ಯಗಳನ್ನೇ ಮಾಡಲಿ ಅದು ಜನತೆಗೆ ಅನುಕೂಲವಾಗುವಂತೆ ಮಾಡಬೇಕು; ಮತ್ತು ಅದರಿಂದ ಸಮಾಜಕ್ಕೆ ಒಳ್ಳೆಯದಾಗಬೇಕು. ಇವುಗಳೆಲ್ಲವನ್ನೂ ಸರಿಯಾಗಿ ಇಂದು ಆಲೋಚನೆ ಮಾಡಬೇಕಾಗಿದೆ.

ಅಧ್ಯಕ್ಷರು.—ತಮಗೆ ಕಾಲಾವಕಾಶವನ್ನು ನಾನು ಯಾವಾಗಲೂ ಹೆಚ್ಚಾಗಿಯೇ ಕೊಡುತ್ತಿದ್ದೇನೆ. ಏಕೆಂದರೆ ತಾವು ವಿರೋಧ ಪಕ್ಷದ ನಾಯಕರಾಗಿದ್ದೀರಿ. ಆದಕಾರಣ ನಿಮಗೆ ಮಾತ್ರ ನಾನು ಕಾಲಪರಿಮಿತಿಯನ್ನು ಹಾಕಲು ಇಚ್ಛಿಸುವುದಿಲ್ಲ. ತಾವೇ ಮಾತನಾಡುವಾಗ Self-restriction ಹಾಕಿಕೊಂಡು ಮಾತನಾಡಿದರೆ ಸೂಕ್ತವಾಗಿ ಕಾಣುತ್ತದೆ. ಈಗ ತಮಗೆ ಮಾತನಾಡಲು ಇನ್ನೂ ಅವಕಾಶವನ್ನು ಕೊಡುತ್ತೇನೆ. ಈಗ ಸಭೆಗೆ ಅರ್ಧಗಂಟೆ ವಿರಾಮವಿದೆ. ವಿರಾಮಾನಂತರ ತಾವು ಪುನಃ ಮಾತನಾಡಬಹುದು.

The House rose for lunch at two Minutes past Ten of the Clock and reassembled at Thirty Minutes past Ten of the Clock.

[MR. SPEAKER in the Chair.]

ಶ್ರೀ ಕೆ. ಕೆಂಚಪ್ಪ.—ಈಗ ವಾಹನಗಳ ಮೇಲಿನ ತೆರಿಗೆಯ ವಿಚಾರವಾಗಿ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಇತ್ತೀಚೆಗೆ ವಾಹನಗಳ ಮೇಲೆ ವಿಧಿಸಿರತಕ್ಕ ತೆರಿಗೆಗಳು ವಿಪರೀತವಾಗಿ ಹೆಚ್ಚಿಸಿರುವುದರಿಂದ ಮಾಲೀಕರು ವಾಹನಗಳನ್ನು ಇಟ್ಟುಕೊಳ್ಳುವುದೇ ತುಂಬಾ ಕಷ್ಟವಾಗಿದೆ. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ವಾಹನಗಳ ಮೇಲೆ ತೆರಿಗೆಗಳನ್ನು ವಿಧಿಸುವಾಗ Horse Power ಮೇಲೆ ವಿಧಿಸತಕ್ಕ ವಿಧಾನವನ್ನು ಕೈಗೊಂಡಿದ್ದಾರೆ. ಇದರಲ್ಲಿ ಏನು ಆಗಿದೆ ಎಂದರೆ, ಕಮ್ಮಿ ಹಾರ್ಸ್‌ಪವರು ಇರತಕ್ಕ ವಾಹನಗಳಿಗೆ ಸ್ವಲ್ಪ ಕಮ್ಮಿ ತೆರಿಗೆ ಮತ್ತು ಹೆಚ್ಚಿಗೆ ಹಾರ್ಸ್‌ಪವರು ಇರತಕ್ಕ ವಾಹನಗಳಿಗೆ ಸ್ವಲ್ಪ ಹೆಚ್ಚಿನ ತೆರಿಗೆ ಹಾಕತಕ್ಕ ವಿಧಾನವು ಕಂಡುಬರುತ್ತದೆ. ಕಮ್ಮಿ ಹಾರ್ಸ್‌ಪವರು ಇರತಕ್ಕ ವಾಹನಗಳನ್ನು ಉಪಯೋಗಿಸತಕ್ಕವರು ಬಡವರೇ ಆಗಿರುವರು. ಅವರು ಈಗ ಬಹಳ ಕಷ್ಟಕ್ಕೆ ಈಡಾಗಿದ್ದಾರೆ. ಈ ವಾಹನಗಳಿಗೆ ತೆರಿಗೆ ವಿಧಿಸುವುದೊಂದೇ ಅಲ್ಲದೆ, ತೆರಿಗೆಗಳ ಜೊತೆಗೆ ಇನ್ಶೂರೆನ್ಸ್ ಬೇರೆ ಮಾಡಬೇಕಾಗಿ ಬಂದಿದೆ. ಇದೂ ಸಹ ತುಂಬಾ ಕಷ್ಟವಾಗಿದೆ. ಇನ್‌ಷೂರ್ ಮಾಡದೆ ಹೋದರೆ ವಾಹನಗಳ ತೆರಿಗೆಯನ್ನು ತೆಗೆದುಕೊಳ್ಳುವುದೇ ಇಲ್ಲ. ಇವೆಲ್ಲ ವಿಚಾರಗಳನ್ನು ನೋಡುತ್ತ ಹೋದರೆ ಸರ್ಕಾರದಲ್ಲಿ ಹಣದ ಉತ್ಪನ್ನವನ್ನು ಹೆಚ್ಚಿಗೆ ಮಾಡುವ ಮನೋಭಾವವೇ ಕಂಡು ಬರುತ್ತಿದೆ. ಆದರೆ ಬಡ್ಜೆಟನ್ನು ಎಷ್ಟರಮಟ್ಟಿಗೆ Balance ಮಾಡುತ್ತಾರೆ ಮತ್ತು ಯಾವಯಾವ ಬಾಬುಗಳಿಗೆ ಈ ತೆರಿಗೆಯ ಉತ್ಪನ್ನವನ್ನು ಉಪಯೋಗಿಸುತ್ತಾರೆ

(ಶ್ರೀ ಕೆ. ಕೆಂಚಪ್ಪ.)

ಎಂಬುದು ತಿಳಿಯುವುದಿಲ್ಲ, ಕಾನೂನನ್ನು ರಚಿಸುವ ಮತ್ತು ಮಾರ್ಪಾಡುಮಾಡತಕ್ಕ ಅಧಿಕಾರವೇನೋ ತಮಗಿದೆ. ಈ ವಾಹನಗಳಿಂದ ಬರತಕ್ಕ ಉತ್ಪನ್ನವನ್ನು ಆಯಾ ಗ್ರಾಮಪಂಚಾಯ್ತಿಗಳಿಗೂ ಮತ್ತು ಡಿಸ್ಟ್ರಿಕ್ಟು ಬೋರ್ಡುಗಳಿಗೂ, ಗ್ರಾಮ ಪಂಚಾಯ್ತಿ ಮತ್ತು ಡಿಸ್ಟ್ರಿಕ್ಟು ಬೋರ್ಡಿನ ಆಕ್ಟಿನ ಸೆಕ್ಷನ್ 107ರ ಪ್ರಕಾರ ಕೊಡಬೇಕೆಂದಿದೆ. ಅದರ ಪ್ರಕಾರ ಸರಕಾರ ಇದುವರೆಗೆ ಈ ಉತ್ಪನ್ನವನ್ನು ಕೊಡಲೇ ಇಲ್ಲ, ಆ ಸೆಕ್ಷನ್ನು 107 ನ್ನು ಓದುತ್ತೇನೆ. ಅದು ಹೀಗಿದೆ: "107 (1) Such portion of the following taxes namely:

(i) Vehicle Tax;

(ii) road tax on lorries, buses and vehicles;

(iii) Service tax; and

(iv) revenue on registration of immovable properties within the local limits of the District Board, as may be assigned from time to time, by the Government to the District Board shall form part of and be paid into the district fund "1952ನೇ ಇಸವಿಯಿಂದ ಈ ಕಾನೂನಿನಂತೆ ಇದುವರೆಗೆ ಸರಕಾರ ಏನೂ ಸಹಾಯ ಮಾಡಿಲ್ಲ. ಜಿಲ್ಲಾ ಬೋರ್ಡುಗಳಿಗಾಗಲೀ ಪಂಚಾಯ್ತಿಗಳಿಗಾಗಲೀ ಹೀಗೆ ಮೂರು ಕಾಸನ್ನೂ ಕೊಡದೆ ಇರತಕ್ಕದ್ದು ತುಂಬಾ ಶೋಚನೀಯವಾದ ಸಂಗತಿ. ಅಲ್ಲದೇ ಈ ಕಾನೂನನ್ನೂ ಸಹ ನಮ್ಮ ಮಿತ್ರರೇ ಮಾಡಿದ್ದಾರೆ. ಒಂದು ವಿಚಾರವನ್ನು ಇಲ್ಲಿ ನಾನು ಕಳಕಳಿಯಿಂದ ಹೇಳುತೇನೆ. ಇದುವರೆಗೂ ನಡೆದು ಕೊಂಡು ಬಂದಿರತಕ್ಕ ಜಿಲ್ಲಾ ಬೋರ್ಡುಗಳ ಆಡಳಿತದ ವಿಚಾರವನ್ನು ತೆಗೆದುಕೊಂಡರೆ, ಅವುಗಳ ಆಡಳಿತ ಸರಕಾರದ ಆಡಳಿತಕ್ಕಿಂತ ಚೆನ್ನಾಗಿತ್ತು ಎಂದು ಹೇಳುತ್ತೇನೆ ಇದನ್ನು ಮಹಾಜನರಿಂದ ಕೇಳಿ ತಿಳಿದುಕೊಳ್ಳಬಹುದು. ಹಿಂದೆ ಜಿಲ್ಲಾ ಬೋರ್ಡಿನ ಆಡಳಿತಕ್ಕಿದ್ದಷ್ಟು ಗೌರವ ಈಗಿನ ಸರಕಾರದ ಆಡಳಿತಕ್ಕೆ ಇರಲಿಲ್ಲ ಎಂದು ನಾನು ನನ್ನ ಸ್ವಂತ ಅನುಭವದಿಂದ ಹೇಳಬೇಕಾಗಿದೆ. ತಾವು ಏನು ಬೇಕಾದರೂ ಹೇಳಬಹುದು. ಅದು ತಮ್ಮ ಅಭಿಪ್ರಾಯ. ಹಿಂದೆ ಜಿಲ್ಲಾ ಬೋರ್ಡುಗಳಲ್ಲಿ ಎಷ್ಟೆಷ್ಟು ದಕ್ಷತೆಯಿಂದ ಕೆಲಸಗಳನ್ನು ಮಾಡುತ್ತಿದ್ದರೋ ಅದೆಲ್ಲ ಇವತ್ತಿನ ದಿವಸ ಕುಂಠಿತವಾಗುತ್ತಿದೆ ಕೋಟ್ಯಾಂತರ ರೂಪಾಯಿಗಳನ್ನೇನೋ ಖರ್ಚುಮಾಡುತ್ತಿದ್ದಾರೆ, ಮಾಡುತ್ತಿಲ್ಲ ಎಂದು ಹೇಳುತ್ತಿಲ್ಲ. ಆದರೆ ಆಡಳಿತದಲ್ಲಿ ಆಡಳಿತ ಪಕ್ಷ ತುಂಬಾ ಕೈಹಾಕುತ್ತಿದೆ. ಇದರಿಂದಾಗಿ ಸರಕಾರದ ಆಡಳಿತ ಇಂದು ಕುಂಠಿತವಾಗುತ್ತಿದೆ. 1954ನೇ ಇಸವಿಯಿಂದ ಕಾನೂನನ್ನೇನೋ ಬದಲಾವಣೆಮಾಡಿ ಜಿಲ್ಲಾ ಬೋರ್ಡಗಳನ್ನು ವಜಾಮಾಡಿ ಬೇರೊಬ್ಬರಿಗೆ ಅದರ ಆಡಳಿತವನ್ನು ವಹಿಸಿದರು. ಹಾಗೆ ಮಾಡಿದ್ದರಿಂದ ಇದುವರೆಗೆ ಆಗದೆ ಇರತಕ್ಕ ಕೆಲಸಗಳನ್ನು ಎಲ್ಲವನ್ನೂ ಮಾಡಿದ್ದಾರೆ ಎಂದು ನಾನು ಹೇಳಲಾರೆ. ತಾವು ಈ ವಿಚಾರದಲ್ಲಿ ಡೆಪ್ಯುಟೀ ಕಮಿಷನರುಗಳನ್ನು ಕೇಳುವುದಕ್ಕೆ ಸಾಧ್ಯವಿಲ್ಲದಂತಿದೆ. ಜಿಲ್ಲಾ ಬೋರ್ಡುಗಳ ಸುವ್ಯವಸ್ಥಿತ ಆಡಳಿತವನ್ನು ಕಿತ್ತುಹಾಕುವುದಕ್ಕಾಗಿ ಅನುಸರಿಸಿದ ಸರಕಾರದ ನೀತಿಯನ್ನು ನೋಡಿದರೆ, ಆಡಳಿತಪಕ್ಷವು ಈ ಕಾನೂನನ್ನು ದುರುಪಯೋಗಪಡಿಸಿದೆ ಎಂದು ಹೇಳಲು ನಾನು ಹಿಂಜರಿಯುವುದಿಲ್ಲ. ಸರಕಾರ ಅನುಸರಿಸುತ್ತಿರುವ ನೀತಿ ಮತ್ತು ವಿಧಾನ ನೋಡಿದರೆ ಸರಕಾರದ ಮನೋಭಾವನೆಯ ವಿಚಾರದಲ್ಲಿ ಒಂದು ರೀತಿಯ ಅನುಮಾನ ನನಗೆ ಕಾಣುತ್ತದೆ.

ಈಗ taxation on vehicles ಆಯಿತು. ಇನ್ನು 'Other taxes' and Duties, taxes on luxuries, taxes on betting ವಗೈರೆ, ವಗೈರೆ ಸಂಬಂಧವಾಗಿ ತೆರಿಗೆಗಳ ವಿಚಾರ. ನಾವೀಗ ಜೂಜಾಟವನ್ನು ಕೂಡ ಲೈಸೆನ್ಸ್ ಮೂಲಕ ನಡೆಸುತ್ತಿದ್ದೇವೆ. ಇದರಿಂದಾಗಿPrize competition ಮುಂತಾಗಿ chance ಎಂಬುದೇ ಪ್ರಾಮುಖ್ಯವಾಗಿ ಸೋಲು-ಗೆಲ್ಲುವುಗಳನ್ನು ತೀರ್ಮಾನಿಸುವಂಥ, reason or rhimeಗಳಿಗೆ ಅವಕಾಶವಿಲ್ಲದಂಥ ಆಟಗಳಿಗೆ ಅವಕಾಶಕೊಡುವುದಕ್ಕೆ ನಾವು ಹಿಂಜರಿದಿಲ್ಲ. ಇತ್ತೀಚೆಗೆ—ನಾನು ಬಹಳ ವ್ಯಸನದಿಂದ ಹೇಳುತ್ತೇನೆ—ದೇಶದ ನಾನಾ ಭಾಗಗಳಲ್ಲಿ ಕ್ಲಬ್ಬುಗಳೆಂಬ ನಾಮಧೇಯದಿಂದ ಜೂಜಿನ ಮನೆಗಳು ಹುಟ್ಟಿಕೊಂಡಿವೆ. ಎಲ್ಲಿ ನೋಡಲಿ—ಹಳ್ಳಿಗಾಡಿನಲ್ಲಿ ನೋಡಲಿ, ಬೆಂಗಳೂರು ಸಿಟಿಯಲ್ಲಿ ನೋಡಲಿ ಲೆಕ್ಕವಿಲ್ಲದಷ್ಟು ಕ್ಲಬ್ಬುಗಳು! ಜೂಜಾಟದ ಮನೆಗಳನ್ನು ಲೈಸೆನ್ಸ್ ಕೊಟ್ಟು ಸರ್ಕಾರ ನಡೆಸುತ್ತಿರುವುದು ಇವು! ಇದರ ಬಗ್ಗೆ ಸರ್ಕಾರದ ತತ್ವವನ್ನು ನಾವು ಸ್ವಲ್ಪ ಅರಿತುಕೊಳ್ಳಬೇಕಾಗಿದೆ; ಇದರ ಹಿನ್ನೆಲೆಯೇನೆಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಇದುವರೆಗೂ ಹಳ್ಳಿ-ಹಳ್ಳಿಗೂ ಈ ಅನಿಷ್ಟ ತಲೆಹಾಕಿರಲಿಲ್ಲ. ಇವತ್ತಿನ ದಿವಸ ವಿಪರೀತವಾಗಿ ಈ ಅನ್ಯಾಯ ಹಳ್ಳಿಗಳನ್ನು ಆವರಿಸಿಕೊಂಡು ಜನರ ಮನಸ್ಸನ್ನು ದುರ್ವ್ಯಾಪಾರಕ್ಕೆ ಎಳೆದು, ದುಡಿಮೆ ಮಾಡುವ ಜನ ಜೂಜಾಟಕ್ಕೆ ಇಳಿದಿದ್ದಾರೆ!! ಇದನ್ನು ನೋಡಿದರೆ ನಾವು ಎಷ್ಟುಮಟ್ಟಿಗೆ ಜನರನ್ನು ನೀತಿಯಮಾರ್ಗದಲ್ಲಿ, ನ್ಯಾಯಮಾರ್ಗದಲ್ಲಿ ಕೊಂಡೊಯ್ಯುತ್ತಿದ್ದೇವೆನ್ನುವುದು ಅರ್ಥವಾಗುತ್ತದೆ. ಸಂಸ್ಕೃತಿ ಪ್ರಚಾರವೆನ್ನುವುದು, ಲೋಕಕಲ್ಯಾಣ ಕೇಂದ್ರವೆನ್ನುವುದು. ಸಮಾಜ ಕಲ್ಯಾಣ ಮಂಟಪವೆನ್ನುವುದು, ಯುವಕರ ಯೋಗಕ್ಷೇಮ ಸಂಘ ಎನ್ನುವುದು—ಹೀಗೆ ಸಂಸ್ಕೃತ ಪದಗಳನ್ನೇ ದೊಡ್ಡದೊಡ್ಡದಾಗಿ ಉಪಯೋಗಿಸಿ ಒಂದು ಕಡೆ ಸಾರುವುದು, ಇನ್ನೊಂದು ಕಡೆ ಇಂಥ ಕಾರ್ಯಗಳಿಗೆ ಅವಕಾಶಕೊಡುವುದು ಯಾವ ನೀತಿ? ನಿಜವಾಗಿಯೂ ಈ ವ್ಯವಸ್ಥೆಯಿಂದ ನಮ್ಮ ಹಳ್ಳಿಗಾಡಿನ ಜನರ ನೈತಿಕಮಟ್ಟವನ್ನು ಇಳಿಸಿ ಅಧೋಗತಿಗೆ ಅವರನ್ನು ತಳ್ಳುತ್ತಿದ್ದೇವೆ ಈ ದೃಷ್ಟಿಯಿಂದ ನಾನು ಬಹಳ ವ್ಯಸನದಿಂದ ಹೇಳುತ್ತಿದ್ದೇನೆ, ನಿಮ್ಮ ರಾಜ್ಯಭಾರಕ್ರಮದಲ್ಲಿ ಪ್ರತಿಯೊಂದು ವಿಚಾರದಲ್ಲೂ ನೀತಿ, ಧರ್ಮ ಎಂಬುವುಗಳಿಗೆ ಅಭಾವ ಬಂದಿದೆಯಲ್ಲಾ! ಒಂದೇ ಒಂದು ವಿಷಯ ಉದಾಹರಣೆ ತೆಗೆದುಕೊಳ್ಳುವುದಾದರೆ, ಒಬ್ಬರು ಜೂಜಾಟಕ್ಕೆ ಒಂದು ದೊಡ್ಡ ಕಂಪೆನಿಯನ್ನೇ, ದೊಡ್ಡ ವ್ಯವಸ್ಥೆಯನ್ನೇ ಇಟ್ಟುಕೊಂಡಿದ್ದರು. ಅದರ ಸಂಬಂಧದಲ್ಲಿ ಅವರು ಹೆಚ್ಚಿಗೆ ದುಡ್ಡುಕೊಡಬೇಕಾದ ಸಂದರ್ಭ ಬಂದಾಗ ಅವರು ತಪ್ಪಿಸಿಕೊಂಡು ಹೋಗುವುದಕ್ಕೆ ತನ್ನ ಆಸ್ತಿಯನ್ನೇ ಮಾರುತ್ತಿದ್ದರೂ ಕೂಡ ಅದರ ವಿಚಾರದಲ್ಲಿ ಸರ್ಕಾರ ತನ್ನ ಎಡಬೆರಳನ್ನು ಸಹ ಅಲ್ಲಾಡಿಸಲಿಲ್ಲ! ಈ ವಿಷಯ ಇನ್ನು ಸಬ್‌ಜುಡಿಸ್ ಆಗಿರುವುದರಿಂದ ನಾನೇನೂ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಆದರೂ ಆಡಳಿತ ವಿಚಕ್ಷಣೆ ಹೇಗಿದೆ ಎಂಬುದನ್ನು ನಾನು ಹೇಳುತ್ತೇನೆ. ಈಗ ದೊಡ್ಡದಾಗಿ ವಿಚಾರಣೆ ನಡೆಸುತ್ತಿದ್ದೀರಿ. ಇವತ್ತಿನ ದಿವಸ

50-60 ಲಕ್ಷ ರೂಪಾಯಿಗಳಿಗೆ ಒಂದುವೇಳೆ ಡಿಕ್ರಿ ಆದರೂ ಮೂರು ಕಾಸನ್ನು ಕೂಡ ನೀವು ಅವರಿಂದ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲದಂತೆ ಅವರು ತಮ್ಮ ಆಸ್ತಿಯನ್ನೆಲ್ಲಾ ವಿಲೇವಾರಿ ಮಾಡಿಕೊಳ್ಳುವುದಕ್ಕೆ ಬಿಟ್ಟುಬಿಟ್ಟಿರಲ್ಲಾ! ತಾವು ಮನಸ್ಸು ಮಾಡಿದ್ದರೆ ಅವರು ಆಸ್ತಿಯನ್ನು ವಿಲೇವಾರಿ ಮಾಡುವುದನ್ನು ತಡೆಗಟ್ಟುವುದಕ್ಕೆ ಬೇಕಾದಷ್ಟು ಅವಕಾಶವಿತ್ತು. ಆಗ ಏನನ್ನೂ ಮಾಡಲಿಲ್ಲ. ಉದ್ದೇಶಪೂರ್ವಕವಾಗಿಯೇ ಅವರು ತೆಗೆದುಕೊಂಡು ಹೋಗಲೆಂದು ಬಿಟ್ಟುಬಿಟ್ಟಿರಿ ಎಂದು ಅನುಮಾನ ಕಂಡುಬರುತ್ತದೆ. ನಿಮ್ಮನ್ನು ಕೇವಲ ಅಲ್ಲಗಳೆಯುವುದಕ್ಕೆ ನಾನಿದನ್ನು ಹೇಳುತ್ತಿಲ್ಲ. ನಿದರ್ಶನವೊಂದನ್ನು ಕೊಟ್ಟು, ಇಂಥ ನಿದರ್ಶನಗಳ ಮೂಲಕ ತಮ್ಮ ಮನೋಭಾವ ಹೇಗಿದೆಯೆಂಬುದನ್ನು ಸಾರ್ವಜನಿಕರ ತಿಳಿವಳಿಕೆಗಾಗಿ ವ್ಯಕ್ತಪಡಿಸುತ್ತಿದ್ದೇನೆ.

ಹಾಗೆಯೇ ಇನ್ನೊಂದೆರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಎಕ್ಸೈಸ್ ಬಾಬಿನಲ್ಲಿ ಡಿಫಾಲ್ಟರುಗಳನ್ನು ವಿಪರೀತವಾಗಿ ಇಟ್ಟುಕೊಂಡಿರುವುದರ ಉದ್ದೇಶವೇನು? ಇಲ್ಲಿ ಸ್ವಜನಪಕ್ಷಪಾತ ಕಾಣುವುದಿಲ್ಲವೇ? ಅದಿಲ್ಲದಿದ್ದರೆ ಇಷ್ಟು ವರ್ಷ ಹಾಗೆ ಇಟ್ಟುಕೊಂಡಿರುತ್ತಿದ್ದಿರಾ? ಎಷ್ಟೋ ಜನರ ಆಸ್ತಿಪಾಸ್ತಿಗಳನ್ನು ಹರಾಜುಹಾಕುತ್ತಿದ್ದಿರಿ; ಉಗ್ರಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಿರಿ. ನಿನ್ನೆ ಮೊನ್ನೆ ಈ ವಿಚಾರದಲ್ಲಿ interpellation ಬಂದಾಗ ನಾವು ಕೇಳಿದ ಪ್ರಶ್ನೆಗಳ ವಿಷಯದಲ್ಲಿ ತಾವು ತೋರಿದ ಅಸಮಾಧಾನದಮೇಲೆ ನಾನಿದನ್ನು ಹೇಳುತ್ತಿದ್ದೇನೆ. ಸ್ವಜನಪಕ್ಷಪಾತ ತಮ್ಮಲ್ಲಿ ತುಂಬಿ ತುಳುಕಾಡುತ್ತಿದೆಯೆಂದು ಗೊತ್ತಾಗುತ್ತದೆ. ಅವರಿಗೇನಾದರೂ ಉಪಕಾರಮಾಡಬೇಕೆಂಬ ಭಾವನೆಯಿರುವಂತೆ ಕಾಣುತ್ತದೆ. ಇತರ ಎಷ್ಟೋಜನ ತೆರಿಗೆಗಳನ್ನು ಕೊಟ್ಟಿಲ್ಲ. ಅವರ ವಿಚಾರದಲ್ಲಿಯೂ ತಾವು ಉಪೇಕ್ಷೆಮಾಡುತ್ತಿದ್ದೀರಿ. ಪ್ರಶ್ನೆಗಳ ಮೂಲಕ ತಮ್ಮ ಮನೋಭಾವವೇನೆಂಬುದು ಕಂಡುಬಂದಿದೆ. ಈ ಮನೋಭಾವನೆಯನ್ನೇ ಮುಂದುವರಿಸಿಕೊಂಡು ಹೋಗುವುದಾದರೆ ಅನರ್ಥ ಸಂಭವಿಸೀತು. ದೇಶದ ಸಂಪತ್ತು ಈ ರೀತಿ ಹೋಗುವುದಕ್ಕೆ ಅವಕಾಶಕೊಟ್ಟರೆ, ಶಕ್ತಿಗುಂದಿದ ಜನರಮೇಲೆ ತೆರಿಗೆಗಳನ್ನು ಹಾಕಬೇಕಾಗಿ ಬಂದು ದೇಶ ಅಧೋಗತಿಗೆ ಇಳಿಯುತ್ತದೆ. ಈ ರೀತಿ ಬಡಜನರ ಉತ್ಪತ್ತಿಯಿಂದ ದೇಶವನ್ನು ಆಳುವ ಮನೋಭಾವ ಸರಿಯಲ್ಲ. ಹೀಗೆ ತೆರಿಗೆಗಳನ್ನು ಹಾಕುವುದು ಹೋಗಬೇಕು. Taxation has to be the last resort. ಕೊನೆಯ ಗಳಿಗೆಯಲ್ಲಿ ಹಾಕುವಂತಹುದು ಇದು. ನೀವೀಗ ನಡೆಸುತ್ತಿರುವ ಯಾವುದೇ ಕಾಮಗಾರಿಯ ವಿಚಾರನೋಡಿ. ಬರಿಯ ಲುಕ್ಸಾನಿನ ಬಾಬತುಗಳೇ, ಲುಕ್ಸಾನಾಗುವ ವಿಚಾರ ನಾನು ಹೇಳುವುದಿಲ್ಲ. ತಮ್ಮ ಕಾಮಗಾರಿ ನಡೆಸುವ ವಿಚಕ್ಷಣೆಯನ್ನು ನಾನು ಪ್ರಸ್ತಾಪಿಸುತ್ತಿದ್ದೇನೆ. ಹೀಗೆ ಪ್ರತಿಯೊಂದರಲ್ಲೂ ಲುಕ್ಸಾನುಮಾಡಿಕೊಳ್ಳುವುದು, ಪಕ್ಷಪಾತ ಮನೋಭಾವ ತೋರಿಸಿ ಸರಿಯಾಗಿ ಬರಬೇಕಾದ್ದನ್ನು ವಸೂಲು ಮಾಡದಿರುವುದು ಕೊನೆಗೆ ವಿಧಿಯಿಲ್ಲದೆ ಮಹಾಜನರಮೇಲೆ indirect ಆಗಿ ನಾನಾ ತೆರಿಗೆಗಳನ್ನು ಹಾಕಿ ಹಿಂಸೆಗೊಳಿಸಿ ಹಣ ವಸೂಲು ಮಾಡಿ ರಾಜ್ಯಭಾರ ಮಾಡುವುದು ತಮ್ಮಲ್ಲಿ ಕಂಡುಬರುತ್ತಿದೆ. ಇನ್ನು ಹೆಚ್ಚಿಗೆ ಹೇಳಲಾರೆ. ದಯವಿಟ್ಟು ತಾವು ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಸರಿಪಡಿಸದೆ ಇದ್ದರೆ, ಇದಕ್ಕೆ ವಿರೋಧವಾಗಿ ಪ್ರತಿಭಟನೆ ಈ ಸಭೆಯಲ್ಲೇ ಅಲ್ಲ ಹೊರಗಡೆಯಿಂದಲೂ ವಿಪರೀತ ಪ್ರತಿಭಟನೆ ಬರುತ್ತದೆಂದು ತಮಗೆ ಎಚ್ಚರಿಕೆ ಕೊಡುತ್ತಾ ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

[MR. DEPUTY SPEAKER in the Chair]

*Sri MAHMOOD SHARIFF (Broadway).—Mr. Speaker, Sir, the Demand made under State Excise and the various suggestions made thereunder show that the people's minds in Mysore as in other places have been sufficiently exercised over the policy of Prohibition. There are those who may claim that as this policy has been very weakly pursued, more stringent measures should be undertaken for the successful implementation of Prohibition; there are others who admit that as our expectations in this behalf have not been fulfilled, we will have to revert to our former policy of leaving the whole thing to the sweet will and pleasure of the individual. it is further contended that, human weakness being what it is, there is no need to impose our will upon them; it is further contended that, as the Legislation in this behalf has proved to be a very ill-conceived measure, it has to be scrapped and there is no necessity of pursuing the matter any further. There are those who contend that for the advantage of a few people it is not necessary to tax people who are in the majority. These are some of the arguments that have been advanced to show the futility of pursuing the matter any further ultimately when schemes of colossal nature involving expenditure are on the anvil.

It is this consideration that has made the various States constitute committees in order to give their advice in the matter and these committees have made their recommendations. some for, some against and some for exercising greater vigilance in the matter. But it seems to me, after examining all aspects of the question, that our thoughts are still in a nebulous condition and that there are not very definite conclusions taken in the matter. So far as prohibition policy is concerned, it is a very topical thing, a subject which has been exercising the imagination of the reformer as well as the law-giver and the dire consequences flowing out of this have been apparent with the result that even a western power like America

(SRI MAHMOOD SHARIFF).

wanted to promulgate a legislation in this behalf, but vested interests proved a handicap in the successful implementation of this policy. But the greatest exponent, of this policy in the modern days has been Mahatma Gandhi, the Father of the Nation. Now under many considerations, the framers of the Indian Constitution made prohibition a directive principle with the result that many States in India have introduced prohibition, some partly and some wholly. So far as Mysore is concerned, it has been given to me, it has been a privilege as a matter of fact to have a hand in drafting the Bill in connection with the prohibition policy and subsequently it was given to me to see that it was enacted in to law and it was given to me to supervise the activities of this department for about two to three years. Instead of scrapping the policy altogether, it seems to me that it will have to be implemented in a fuller measure than before. It appears there are so many reasons as to why this policy should be pursued and there are so many reasons also according to which it must be scrapped out altogether. Some people say that it has failed altogether. After having examined the whole position, I feel that although it is futile to say that it has fully succeeded, it has not fully failed. It may be that in some places the policy of prohibition has completely failed; it may be so. It may be argued that it is so difficult to wean away addicts from the drink habit, but you must know that one who is accustomeu to drink habit can be persuaded to give up this social evil. With resoluteness we can do so. We have to see that our younger generation on which the country has to rely for progress and advancement, is going to take it seriously. Therefore, there is no need for people to apprehend that, so far as the policy of prohibition is concerned, it has totally failed and it must be put a stop to. Now how is it possible for us to see that it is more successfully implemented? So far as the policy is concerned, as a matter of fact we did manage our affairs, but we saw after some time that it was not successful and therefore we entrusted the matter to the Police. Hon'ble Members may remember that two or three days back a very interesting debate was raised about the sins of omission and commission of the Police Department. It was said that so far as the Police were concerned, they had not conducted them selves satisfactorily by reason of the fact that they were corrupt minded, that there was remissness in the discharge of duty and that so many thefts had not been detected. All these things are true and it will take some time for us to see that our Police conduct themselves in the same patriotic manner, conduct themselves in the same way as the British policemen are doing. Therefore, after an examination of the whole thing, I feel that the Police people—I do not want to cast any reflection on them—have not been sufficiently acting in the manner they should. In this matter what I would say is, that there must be faith in the efficacy of the thing. Unless we have faith in whatever we want to do and unless we feel that what we do is right, nothing is going to be achieved. I may also point out that propaganda is very necessary. Temperance society should be established and sufficient money has to be given to them. Drunkards are very hardened persons. They must be persuaded tactfully to give up the evil habit. There are so many people who say that there is need for scrapping the unsuccessful policy of prohibition which has resulted in the loss of a substantial amount of money which is badly needed for development works. So far as old Mysore State is concerned—I can talk about old Mysore,—we did lose Rs. 3 cores; but anyhow so far as that money is concerned, it is a vicious money. Therefore, I do not want to see that the policy is scrapped altogether. I feel that effective steps must be taken and strong measures should be taken to implement the policy in a better manner than it has been till now.

ಶ್ರೀ ಕೆ. ಎಚ್. ವೆಂಕಟರೆಡ್ಡಿ (ಗೌರಿ ಬಿದನೂರು).—ಸ್ವಾಮಿ, ಈಗ ನಮ್ಮ ಮುಂದಿಟ್ಟಿರ ತಕ್ಕ ಈ ಎಕ್ಸೈಜ್ ಡಿಮ್ಯಾಂಡ್ ಮನವಿಯ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸಬೇಕೆಂದು ಅಪೇಕ್ಷೆ ಪಡು

ತ್ತೇನೆ. ನನಗೆ ತಾವೀಗ ಕೊಟ್ಟಿರತಕ್ಕ ಕಾಲ ಕೇವಲ ಹತ್ತು ನಿಮಿಷ ಮಾತ್ರ......

ಉಪಾಧ್ಯಕ್ಷರು.—ಹತ್ತು ನಿಮಿಷವಲ್ಲ-೧೫ ನಿಮಿಷ ಗಳು.

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಇರಬಹುದು. ನಾನು ಸಭೆಯಲ್ಲಿರಲಿಲ್ಲವಾದ್ದರಿಂದ ಈ ವಿಚಾರ ನನಗೆ ಗೊತ್ತಿರಲಿಲ್ಲ. ಆದರೆ ಈ ಅವಧಿಯಲ್ಲಿ ನಾನು ತಿಳಿಸ ಬೇಕೆಂದಿರುವ ವಿಚಾರಗಳನ್ನೆಲ್ಲಾ ತಿಳಿಸಲು ಸಾಧ್ಯ ವಿಲ್ಲವಾದ್ದರಿಂದ ನಾನೀಗ ಒಂದೆರಡು ಮುಖ್ಯಾಂಶ ಗಳನ್ನು ಮಾತ್ರ ತಿಳಿಸುತ್ತೇನೆ. ಈಗ ನಮ್ಮ ಮೈಸೂರು ರಾಜ್ಯದಲ್ಲಿ ಪಾನನಿರೋಧವನ್ನು ಜಾರಿಗೆ ತಂದಿದ್ದಾರೆ. ಅದು ಯಾವ ರೀತಿಯಲ್ಲಿ ಎಂದರೆ— ಒಬ್ಬ ಗಂಡಸಿಗೆ ಒಂದು ಕಡೆಯ ಮೀಸೆಯನ್ನು ಬಿಟ್ಟು-ಇನ್ನೊಂದು ಕಡೆಯ ಮೀಸೆಯನ್ನು ಬೋಳಿಸಿದ ಹಾಗೆ ಇದನ್ನು ಜಾರಿಗೆ ತಂದಿದ್ದಾರೆ. ಸರ್ಕಾರದವರು ಒಂದು ಕಡೆಯಲ್ಲಿ ಹೆಂಡ ಸಾರಾಯಿಗಳ ಮಾರಾಟ ವನ್ನು ನಿಷೇಧಿಸಿ, ಇನ್ನೊಂದು ಕಡೆಯಲ್ಲಿ ಇವುಗಳ ಮಾರಾಟಕ್ಕೆ ಅವಕಾಶ ಕೊಟ್ಟಿದ್ದಾರೆಂದರೆ ಇನ್ನು ದೇಶದಲ್ಲಿ ಇದಕ್ಕಿಂತಲೂ ಅನ್ಯಾಯ ಬೇರೊಂದಿದೆಯೇ ಎಂದು ಕೇಳುತ್ತೇನೆ? ಈಗ ನಮ್ಮ ಕೋಲಾರ ಜಿಲ್ಲೆ ಯಲ್ಲಿ ಹೆಂಡ ಸಾರಾಯಿಗಳ ಮಾರಾಟವನ್ನು ನಿಲ್ಲಿಸಿ ಪಕ್ಕದ ಬೆಂಗಳೂರು ಜಿಲ್ಲೆಯಲ್ಲಿ ಅವುಗಳ ಮಾರಾಟ ನಡೆಸುತ್ತಿದ್ದಾರೆ. ಈ ದಿವಸ ಆ ಕೋಲಾರ ಜಿಲ್ಲೆಯ ದೊಡ್ಡ ಮನುಷ್ಯರು ಬೆಂಗಳೂರಿಗೇ ಬಂದು ಇಲ್ಲಿಂದ ಕುಡಿದು ಅಲ್ಲಿಗೆ ವಾಪಸ್ಸು ಹೋಗುತ್ತಿದ್ದಾರೆ. ಈ ವಿಚಾರ ಸರ್ಕಾರದವರಿಗೆ ಗೊತ್ತಿದೆ. ಆದರೂ ಇದನ್ನು ತಡೆಗಟ್ಟುವುದಕ್ಕೆ ಅವರಿಂದ ಸಾಧ್ಯವಿಲ್ಲ. ಇವರು ಹೀಗೆ ಮಾಡುವುದಕ್ಕಿಂತ ದೇಶಾದ್ಯಂತವೂ ಒಂದೇ ರೀತಿಯಲ್ಲಿ ಕುಡಿಯುವುದನ್ನಾದರೂ ಜಾರಿಗೆ ತರಲಿ; ಇಲ್ಲವೆ ದೇಶಾದ್ಯಂತವೂ ಅದನ್ನು ಸಂಪೂರ್ಣ ವಾಗಿ ನಿಲ್ಲಿಸಲಿ ಎಂದು ಹೇಳುತ್ತೇನೆ. ಈ ವಿಷಯ

11 A.M.

ವಾಗಿ ನಾನು ತಮ್ಮ ಮುಂದೆ ಹೇಳಬೇಕೆಂದಿರುವುದೇ ನೆಂದರೆ, ಎಕ್ಸೈಜ್‌ನಲ್ಲಿ ಗಾಂಜಾ ಒಂದು ಮುಖ್ಯ ವಾದದ್ದು. ಮೊದಲಿನಿಂದಲೂ ನಮ್ಮ ಗೌರೀಬಿದ ನೂರು ತಾಲ್ಲೂಕಿನಲ್ಲಿ ಇದನ್ನು ಎಷ್ಟೋ ವರ್ಷಗಳಿಂದ ಬೆಳೆಯುತ್ತಾ ಇದ್ದಾರೆ. ಗಾಂಜಾ ಹೇಗೆ ಬೆಳೆಯು ತ್ತಾರೆ, ಏನು, ಎನ್ನುವುದು ಈ ಸಭೆಯಲ್ಲಿ ಎಷ್ಟೋ ಜನಕ್ಕೆ ಗೊತ್ತಿಲ್ಲ. ಅದನ್ನು ಮಾತ್ರ ಹೇಳುತ್ತೇನೆ. ಎರಡು ವರ್ಷ, ಮೂರು ವರ್ಷಕ್ಕೆ ಒಂದು ಸಲ ಗಾಂಜಾ ಬೆಳೆಯುವುದಕ್ಕೆ ನಮ್ಮ ಸರ್ಕಾರದವರು ಲೈಸೆನ್ಸ್ ಕೊಡುತ್ತಾರೆ. ಅದನ್ನು ನಮ್ಮ ಗೌರೀ ಬಿದನೂರು ತಾಲ್ಲೂಕಿನವರಿಗೆ ಮಾತ್ರ ಕೊಡುತ್ತಾರೆ. ಇದಕ್ಕೆ ಕಾರಣವೇನೆಂದರೆ, ಅಲ್ಲಿ ಗಾಂಜಾ ಬೆಳೆಯು ವುದಕ್ಕೆ ಜಮೀನು ಬಹಳ ಚೆನ್ನಾಗಿದೆ ಎಂದು ಯಾವ ಕಾಲದಲ್ಲೋ ಯಾರೋ ಹೇಳಿದರಂತೆ. ಅದೇ ರೀತಿ ಈಗಲೂ ನಮ್ಮ ತಾಲ್ಲೂಕಿನಲ್ಲಿ ಗಾಂಜಾ ಬೆಳೆಯು ವುದಕ್ಕೆ ಲೈಸೆನ್ಸ್ ಕೊಡುತ್ತಾ ಇದ್ದಾರೆ. ಗಾಂಜಾ ಲೈಸೆನ್ಸ್ ತೆಗೆದುಕೊಂಡ ಮೇಲೆ ಐದು ಅಥವಾ ಆರು ತಿಂಗಳು ಬೆಳೆಯಾಗುತ್ತದೆಯಲ್ಲಾ ಆಗ ಎಕ್ಸೈಜ್ ನವರು ಪೋಲೀಸ್‌ನವರನ್ನು ಅದಕ್ಕೆ ಕಾವಲು ಹಾಕು ತ್ತಾರೆ. ಕಾವಲು ಹಾಕಿದರೂ ಕೂಡ ತಯಾರು ಮಾಡುವ ಕಾಲದಲ್ಲಿ ಎಷ್ಟು ಸಾವಿರ ಸೇರು ಬ್ಲಾಕ್ ಮಾರ್ಕೆಟ್‌ನಲ್ಲಿ ಹೋಗುತ್ತಾ ಇದೆ ಎನ್ನುವುದು ಸರ್ಕಾರ ದವರ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಬಂದಿರದಿದ್ದರೆ, ಬರೆದುಕೊಂಡು ಬಂದಿದ್ದೇನೆ; ಎಕ್ಸೈಜ್ ಮಿನಿಸ್ಟರ್ ಅವರಿಗೆ ಅವರ ಆಫೀಸಿನಲ್ಲಿ ಕೊಡುತ್ತೇನೆ. ಮೊನ್ನೆ ತಾನೆ ಪೋಲೀಸ್ ಡಿಮ್ಯಾಂಡಿನ ಮೇಲೆ ಮಾತ ನಾಡುವಾಗ ಹೋದ ವರ್ಷ ಜೂನ್ ತಿಂಗಳಿನಲ್ಲಿ ಒಂದು ಕೇಸು ಹಿಡಿದಿದ್ದರು ಎಂದು ಹೇಳಿದ್ದೆ. ಅದು ಜೂನ್ ಅಲ್ಲ, 28-4-1956ರಲ್ಲಿ ಸುಮಾರು 50 ಸಾವಿರ ರೂಪಾಯಿ ಬೆಲೆ ಬಾಳುವ ಗಾಂಜಾ ಹಿಡಿದಿದ್ದರು. ಅಂಥ ಇನ್ನೂ ನಾಲ್ಕು-ಐದು ನಿದರ್ಶನಗಳಿವೆ. ಅವನ್ನು ಎಕ್ಸೈಜ್ ಮಿನಿಸ್ಟರವರಿಗೆ ಕೊಡುತ್ತೇನೆ. ಗೌರೀಬಿದನೂರು ತಾಲ್ಲೂಕಿನಲ್ಲಿ ಈ ಗಾಂಜಾ ಬ್ಲಾಕ್ ಮಾರ್ಕೆಟ್ ಆಗುತ್ತಾ ಇದೆ ಎಂಬ ಒಂದು ದೊಡ್ಡ ಗಲಾಟೆ ಇದೆ. ಹಿಂದೆ ಒಂದು ಸಲ ನಮ್ಮ ತಾಲ್ಲೂಕಿನ ಮುಖ್ಯಸ್ಥರಾದ ಶ್ರೀ ನಾಗಯ್ಯರೆಡ್ಡಿಯವರು ಗಾಂಜಾ ಬೆಳೆಯುವುದಕ್ಕೆ ಅವಕಾಶಕೊಡಕೂಡದು ಎಂದು ಒಂದು ದೊಡ್ಡ ಗಲಾಟೆ ಹಚ್ಚಿದ್ದರು. ಆದರೂ ಕೂಡ ಹಿಂದಿನ ಸರ್ಕಾರದವರು ಇದಕ್ಕೆ ನಮ್ಮ ತಾಲ್ಲೂಕಿನಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಕೊಟ್ಟಮೇಲೆ ಎಷ್ಟು ಸಾವಿರ ಸೇರು ಬ್ಲಾಕ್ ಮಾರ್ಕೆಟ್‌ನಲ್ಲಿ ಹೋಗಿದೆ ಎಂಬುದನ್ನು ಸರ್ಕಾರದವರು ಗಮನಕ್ಕೆ ತಂದುಕೊಳ್ಳಬೇಕು. ಎರಡನೆಯದಾಗಿ ಈ ವರ್ಷವೂ ಕೂಡ ಕೊಡಬೇಕೆಂದು ಪ್ರಪೋಸಲ್ ಇದೆಯಂತೆ, ಸರಿಯಾಗಿ ಗೊತ್ತಿಲ್ಲ. ಒಂದು ವೇಳೆ ಹಾಗಿದ್ದರೆ, ನಾನು ಹೇಳುತ್ತೇನೆ: ಚಿತ್ರ ದುರ್ಗ, ಬಳ್ಳಾರಿ ಅಥವಾ ಹೈದರಾಬಾದು ಆ ಕಡೆ ಎಲ್ಲಾದರೂ ಬೆಳೆಸಬಹುದು. ಗೌರಿಬಿದನೂರನ್ನು ಬಿಟ್ಟು ಎಲ್ಲೂ ಬೆಳೆಸುವುದಕ್ಕೆ ಸಾಧ್ಯವಿಲ್ಲ ಎಂದು ಯಾರಾದರೂ ಹೇಳಿದರೆ ಖಂಡಿತ ನಾನು ಚಾಲೆಂಜ್ ಮಾಡುತ್ತೇನೆ ಎಲ್ಲಾದರೂ ಆಕಡೆ ಜಮೀನು ಕೊಡಿ, ಗೌರಿಬಿದನೂರಿನಲ್ಲಿ ಮಾತ್ರ ಖಂಡಿತ ಕೊಡಬೇಡಿ ಎಂದು ಸಲಹೆ ಮಾಡುತ್ತೇನೆ. ಇನ್ನೊಂದು ವಿಷಯ. ಗಾಂಜಾ ಕೊಟ್ಟ ವರ್ಷ ಡಿಪೋವಿನಲ್ಲಿ ಎಷ್ಟು ಸೇರು ಗಾಂಜಾ ಖರ್ಚಾಗಿದೆ; ಗಾಂಜಾ ಲೈಸೆನ್ಸ್ ಕೊಡದೇ ಇರುವ ವರ್ಷ ಎಷ್ಟು ಖರ್ಚಾಗಿದೆ ಎಂಬ ವಿಷಯವನ್ನು ಸರ್ಕಾರದವರು ನೋಡಬೇಕು. ಡಿಪೋವಿನಲ್ಲಿ ಆರು ಸಾವಿರ ಎಂಟು ಸಾವಿರ ಸೇರು ಖರ್ಚಾದರೆ, ನಾಲ್ಕು ಸಾವಿರ, ಐದು ಸಾವಿರ ಸೇರು ರೈತರು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿರುತ್ತಾರೆ ಎಂದು ಖಂಡಿತವಾಗಿ ಹೇಳುತ್ತೇನೆ. ನಾನೂ ಎರಡು ವರ್ಷ ಬೆಳೆದಿದ್ದೇನೆ. ನಾನು ಬೆಳೆಯುವುದಕ್ಕೆ ಮುಂಚೆ ಸರ್ಕಾರಕ್ಕೆ ಎಕರೆ ಒಂದಕ್ಕೆ ಐದುಮಣ ಕೊಡುತಿದ್ದರು. ಆದರೆ ನನಗೆ ಕೊಟ್ಟಮೇಲೆ 15 ಮಣಕ್ಕೆ ಏರಿಸಿಕೊಟ್ಟೆ. ಬೇಕಾದರೆ ನೋಡಬಹುದು. ಸರ್ಕಾರದವರು ಇದನ್ನೆಲ್ಲಾ ಯೋಚನೆ ಮಾಡಬೇಕು. ಲೈಸೆನ್ಸ್ ಕೊಡುವಾಗ ಯಾರ ದಾಕ್ಷಿಣ್ಯಕ್ಕೋ ಗಾಂಜಾ ಲೈಸೆನ್ಸ್ ಕೊಟ್ಟು ಎಕ್ಸೈಜ್ ಖಾತೆನಲ್ಲಿ ಬರುವ ದುಡ್ಡನ್ನು ಹಾಳು ಮಾಡುತ್ತಾ ಇರುವುದು ಬಹಳ ಅನ್ಯಾಯ. ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ಹೈದರಾಬಾದು, ಚಿತ್ರ ದುರ್ಗ, ಬಳ್ಳಾರಿ, ಈ ಪ್ರದೇಶಗಳಲ್ಲಿ ಎಲ್ಲಾದರೂ ಗಾಂಜಾ ಬೆಳೆಯುವುದಕ್ಕೆ ಲೈಸೆನ್ಸ್‌ಕೊಟ್ಟು ಪರೀಕ್ಷೆ ಮಾಡಿ, ಸರ್ಕಾರದವರಿಗೇ ಗೊತ್ತಾಗುತ್ತದೆ. ಎಕ್ಸೈಜ್ ಮಿನಿಸ್ಟರು ಹೊಸಬರು; ಇಲ್ಲಿ ಗಾಂಜಾ ಹೇಗೆ ಆಗುತ್ತಾ ಇದೆ ಎನ್ನುವುದು ಅವರಿಗೆ ಗೊತ್ತಿದೆಯೋ ಇಲ್ಲವೋ. ಹಳಬರೂ ಇದ್ದಾರೆ. ಅವರೆಲ್ಲರಿಗೂ ಈ ವಿಷಯ ಗೊತ್ತಿದೆ, ಅವರಾದರೂ ಪರಿಶೀಲನೆಮಾಡಿ ವಿವರವಾಗಿ ನೋಡಿ, ಈ ಸಲವಾದರೂ ನಮ್ಮ ಗೌರಿಬಿದನೂರು ತಾಲ್ಲೂಕಿಗೆ ಗಾಂಜಾ ಬೆಳೆಯು ವುದಕ್ಕೆ ಅವಕಾಶಕೊಡದ ಹಾಗೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಒಂದೇ ಒಂದು ವಿಚಾರ. ಪೋಲೀಸ್‌ನವರೇನೋ ಕಷ್ಟಪಟ್ಟು 10-20-30-40-

(ಶ್ರೀ ಕೆ. ಎಚ್. ವೆಂಕಟರೆಡ್ಡಿ)

50 ಸಾವಿರ ರೂಪಾಯಿ ಬೆಲೆ ಬಾಳುವ ಗಾಂಜಾ ಹಿಡಿಯುತ್ತಾರೆ. ಆದರೆ ಇದರಲ್ಲಿ ಸರ್ಕಾರದವರು ಇಂಟರ್‌ಫಿಯರ್‌ಮಾಡುತ್ತಾರೋ ಅಥವಾ ದೊಡ್ಡ ದೊಡ್ಡ ಲೀಡರ್‌ಗಳು ಇ ಟರ್‌ಫಿಯರ್ ಮಾಡುತ್ತಾರೋ ಗೊತ್ತಿಲ್ಲ. ಆ ಕೇಸು ಪತ್ತೆ ಇಲ್ಲದ ಹಾಗೆ ಹೊರಟು ಹೋಗುತ್ತದೆ. ಒಂದು ಉದಾಹರಣೆ ಆಗಲೇ ಹೇಳಿದ್ದೇನೆ. ಮಾನ್ಯ ಹೋಂ ಮಿನಿಸ್ಟರ್ ಅವರು ಅದನ್ನು ಗಮನಕ್ಕೆ ತಂದುಕೊಳ್ಳಬೇಕು. 50 ಸಾವಿರ ರೂಪಾಯಿ ಗಾಂಜಾ ಜೊತೆಗೆ ಐದು—ಆರು ಜೊತೆ ಗಾಂಜಾ ರೊಟ್ಟಿಗಳನ್ನು ಕೂಡ ಹಿಡಿದಿದ್ದರು. ಆ ಕೇಸು ಏನಾಯಿತು ಎನ್ನುವುದು ಯಾರಿಗೂ ಗೊತ್ತಿಲ್ಲದ ಹಾಗೆ ಮಾಯವಾಗಿದೆ. ಇನ್ನು ಮುಂದಾದರೂ ಈ ರೀತಿ ದೇಶದಲ್ಲಿ ನಡೆಯದೇ ಇರುವಂತೆ ಮಾಡಬೇಕೆಂದು ಹೇಳುತ್ತೇನೆ.

ಕೊಟ್ಟ ಕೊನೆಯದಾಗಿ ಈ ಸಲವಾದರೂ ನಮ್ಮ ತಾಲ್ಲೂಕಿನಲ್ಲಿ ಗಾಂಜಾ ಬೆಳೆಯುವುದಕ್ಕೆ ಅವಕಾಶ ಕೊಡದೆ ಇನ್ನೆಲ್ಲಾದರೂ ಬೆಳೆದರೆ ಸರ್ಕಾರಕ್ಕೆ ಬರುವ ದುಡ್ಡು ಸರಿಯಾಗಿ ಬರುತ್ತದೆ. ಹಾಗೆ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ವೈ. ವೀರಪ್ಪ (ಹೊಳೇನರಸೀಪುರ).—ಮಾನ್ಯ ಅಧ್ಯಕ್ಷರೇ, ಈ ಎಕ್ಸೈಜ್ ಬಾಬಿನ ಡಿಮ್ಯಾಂಡಿನ ವಿಷಯವಾಗಿ ಮಾತನಾಡುತ್ತಾ, ನಾನು ಕೆಲವು ಅಂಶಗಳನ್ನು ಸೂಚನೆ ಮಾಡಬೇಕೆಂದು ಬಯಸುತ್ತೇನೆ. ಯಾವ ಒಳ್ಳೆಯ ಸರ್ಕಾರಕ್ಕೇ ಆಗಲಿ, ಆ ದೇಶದ ಪ್ರಜೆಗಳ ವಿದ್ಯಾಭ್ಯಾಸ, ಆರೋಗ್ಯ ಮತ್ತು ಆರ್ಥಿಕ ಹಿತವನ್ನು ಸಾಧಿಸುವುದು ಮುಖ್ಯ ಗುರಿಯಾಗಿದೆ. ಅದೇ ರೀತಿ ಈಗ ನಮ್ಮ ಮಾನ್ಯ ಸ್ನೇಹಿತರು ಕಾಂಗ್ರೆಸ್ಸಿಗರು ಆಡಳಿತದಲ್ಲಿ ಇದ್ದಾರೆ, ಸಂತೋಷ. ಮಹಾತ್ಮ ಗಾಂಧಿಯವರ ತತ್ತ್ವವನ್ನೂ ಪರಿಪಾಲಿಸುತ್ತೇವೆ ಎಂದು ದೇಶ ದೇಶಕ್ಕೇ ಮೂಲೆ ಮೂಲೆಗೂ ಸಾರುತ್ತಾರೆ, ಅದೂ ಸಂತೋಷ. ಮತ್ತು ತೀವ್ರವಾಗಿ ಚುನಾವಣೆಯ ಕಾಲದಲ್ಲಿ ಈ ಪ್ರಭಾವವನ್ನು ಎಂದರೆ ಮಹಾತ್ಮಾ ಗಾಂಧೀಯವರ ತತ್ತ್ವವನ್ನು ಹೇಳುತ್ತಾರೆ; ಅದೂ ಸಂತೋಷ. ಆದರೆ ಈ ವಿಷಯವನ್ನು ನಾವು ಮತ್ತು ನಮ್ಮ ಸರ್ಕಾರದ ಪಕ್ಷದವರೂ ಕೂಡ ನಿರ್ವಂಚನೆಯಿಂದ ಪರಿಶೀಲನೆ ಮಾಡಬೇಕಾಗಿದೆ. ನನ್ನ ಹಾಗೆ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ಹಿಂದೆಯೂ, 1947-48 ರಿಂದ ಇಲ್ಲಿಯವರೆಗೂ ಮಾತನಾಡಿದ್ದಾರೆ. ಅನೇಕ ಸಲಹೆಗಳು ಬಂದಿವೆ. ಅಗ್ಗೆ ಸರ್ಕಾರದಲ್ಲಿದ್ದಂಥ ಮಂತ್ರಿಗಳು ಕೂಡ ಸೂಕ್ತವಾದ ಜವಾಬನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿಯತನಕ ಸರ್ಕಾರವನ್ನು ನಡೆಸತಕ್ಕ ನಮ್ಮ ಮಾನ್ಯ ಮಿತ್ರರು ಎಷ್ಟರಮಟ್ಟಿಗೆ ಇದರ ಗುರಿಯನ್ನು ಸಾಧಿಸಿದ್ದಾರೆ ಎಂಬ ಅಂಶವನ್ನು ಪರಿಶೀಲಿಸಿದರೆ ನಿಜವಾಗಿಯೂ ಪರಿಸ್ಥಿತಿ ಶೋಚನೀಯವಾಗಿದೆ. ಕೇಂದ್ರ ಸರ್ಕಾರದವರೂ ಕೂಡ ರಾಜ್ಯಾಂಗದ ಒಂದು ಮುಖ್ಯ ಗುರಿ, ಮೂಲಸಿದ್ಧಾಂತವನ್ನು ಅನುಸರಿಸಿ ಇದನ್ನು ನಿರ್ಮೂಲ ಮಾಡಬೇಕು, ಮಾದಕ ಪದಾರ್ಥಗಳನ್ನು ಕೊಡುವುದನ್ನು ನಿಲ್ಲಿಸಬೇಕು; ಇದರ ಪರಿಣಾಮ ಜನತೆಯ ಮೇಲೆ ಮತ್ತು ಜನತೆಯ ಆರೋಗ್ಯ ಮತ್ತು ಆರ್ಥಿಕ ಪರಿಸ್ಥಿತಿಯ ಮೇಲೆ ಹೆಚ್ಚು ಹೆಚ್ಚು ಪರಿಣಾಮವಾಗುತ್ತದೆ ಎಂಬ ಧ್ಯೇಯದಿಂದ ಈ ಪಾನನಿರೋಧವನ್ನು ಜಾರಿಯಲ್ಲಿ ತರಬೇಕೆಂಬ ಒಂದು ಅಂಶವನ್ನು ರಾಜ್ಯಾಂಗದಲ್ಲಿ ಅಳವಡಿಸಿದ್ದಾರೆ.

ಆದರೆ ಸರ್ಕಾರದವರು ರಾಜ್ಯಾಂಗಕ್ಕೆ ಎಷ್ಟರಮಟ್ಟಿಗೆ ಬೆಲೆಕೊಟ್ಟಿದ್ದಾರೆಂಬ ಅಂಶವನ್ನು ನೋಡಿದರೆ, ನಿಜವಾಗಿ ಏನೂ ಕೊಟ್ಟಿಲ್ಲವೆಂದು ಕಾಣುತ್ತದೆ. ಜವಾಬುಗಳನ್ನು ಕೊಡುವಾಗ ಮಾನ್ಯ ಮಂತ್ರಿಗಳು ಹೇಳುವ ರೀತಿಯನ್ನು ನೋಡಿದರೆ ಅದು ಬಹಳ ಲಘುವಾಗಿರುತ್ತದೆ. ಪ್ರತಿಯೊಂದು ಬಾಬಿನ ವಿಷಯದಲ್ಲಿಯೂ, ಇಲ್ಲಿಯವರೆಗೆ ಆಗಿರುವ ನನ್ನ ಅನುಭವವನ್ನು ನೋಡಿದರೆ, ಅಷ್ಟು ಸಮಂಜಸವಾದ ಜವಾಬುಗಳನ್ನು ಮಾನ್ಯ ಮಂತ್ರಿಗಳು ಕೊಡುತ್ತಿಲ್ಲ. ಅನೇಕರು, ಹಿಂದೆ ಈ ವಿಷಯದಲ್ಲಿ ಸರ್ಕಾರದವರು ಗಮನವನ್ನು ಕೊಟ್ಟಿಲ್ಲ; ಇದರಿಂದ ಜನತೆಯ ಮೇಲೆ ದುಷ್ಪರಿಣಾಮವಾಗುತ್ತಿದೆ ಎಂದು ಹೇಳಿದಾಗ, ಕೇಂದ್ರ ಸರ್ಕಾರದವರು ಅಗರ್‌ವಾಲ್ ಕಮಿಟಿ ಎಂದು ಒಂದು ತಜ್ಞರ ಕಮಿಟಿಯನ್ನು ಮಾಡಿದರು. ಅವರೂ ರಾಷ್ಟ್ರದಲ್ಲಿ, ಅಂಕಿ ಅಂಶಗಳನ್ನು ಶೇಖರಿಸಿಕೊಂಡು ಸರ್ಕಾರಕ್ಕೆ ಒಂದು ಮನವಿ ಮಾಡಿದರು. ಪಾನನಿರೋಧ, prohibition ಎಂಬ process ಕೊನೆಯಪಕ್ಷ 1958ನೆಯ ವರ್ಷದೊಳಗಾಗಿ ದೇಶಾದ್ಯಂತ ಜಾರಿಗೆ ಬರಲೇಬೇಕು ಎಂಬ ಸೂಚನೆಯನ್ನು ಕೊಟ್ಟರು. ಆದರೆ ಈಗಿರುವ ಪರಿಸ್ಥಿತಿಯನ್ನು ನೋಡಿದರೆ 1958 ರೊಳಗೆ ಅಲ್ಲ 2000 ಇಸವಿ ಬಂದರೂ ಕೂಡ ಇದಾಗುವುದಿಲ್ಲವೆಂದು ನನಗೆ ಗೊತ್ತಾಗುತ್ತದೆ. ಈ ಬಗ್ಗೆ ಸರ್ಕಾರದವರನ್ನು ಕೇಳಿದರೆ ಅವರು ಇದು ಸರಿಯಾದ ಸಮಯವಲ್ಲ; ಈಗ ಪಾನನಿರೋಧವನ್ನು ಪೂರ್ತಿಯಾಗಿ ಜಾರಿಗೆ ತಂದರೆ ನಮಗೆ ಬರುವ ಆದಾಯ ಕಡಮೆಯಾಗುತ್ತದೆ, ಕೂಡಲೆ ಪಾನನಿರೋಧವನ್ನು ಜಾರಿಗೆ ತಂದರೆ ಬಹಳ ತೊಂದರೆಯಾಗುತ್ತದೆ ಎಂದು ಹೇಳುತ್ತಾರೆ. ಜನಗಳಪರವಾಗಿ ಸರ್ಕಾರವನ್ನು ಹೊತ್ತುಕೊಂಡು ನಾವು ಆಡಳಿತ ಮಾಡುತ್ತೇವೆ, ಜನರ ಹಿತವನ್ನು ಪರಿಪಾಲನೆ ಮಾಡುತ್ತೇವೆ, ಹೊಸದಾದ ರಾಜ್ಯ ಕಟ್ಟುತ್ತೇವೆ, ಸರ್ವೋದಯ ತತ್ತ್ವವನ್ನು ಸರ್ವತೋಮುಖವಾಗಿ ಸಾರುತ್ತೇವೆ ಎಂದು ಹೇಳುತ್ತೀರಿ. ಆದರೆ ಕಾರ್ಯತಃ ಹಾಗೆ ನಡೆಯುತ್ತಿಲ್ಲ. ಮೊನ್ನೆಯ ದಿವಸ ಪೋಲೀಸ್ ಖಾತೆಯ ಮಾನ್ಯ ಮಂತ್ರಿಗಳು ಶ್ರೀಮಾನ್ ಪುಟ್ಟರಾಮಯ್ಯನವರಿಗೆ ನಿಮ್ಮ ಕೈಯಲ್ಲಿ ಆಡಳಿತ ಕೊಟ್ಟರೆ ಸದಾರಮೆ ನಾಟಕವಾಗುತ್ತದೆ ಎಂದು ಹೇಳಿದರು. ನಿಮ್ಮ ಕೈಯಲ್ಲಿ ಸಾಧ್ಯವಿಲ್ಲದೆ ಇದ್ದರೆ ನಮ್ಮ ಕೈಗೆ ಕೊಡಿ ಆಗ ಹೇಗೆ ಆಡಳಿತ ನಡೆಯುತ್ತದೆ ಎಂಬುದು ಗೊತ್ತಾಗುತ್ತದೆ. (ನಗು) ಇದು ಕೇವಲ ನಗಲಿಕ್ಕೆ ಹೇಳುವಮಾತಲ್ಲ. ಪ್ರತಿಯೊಬ್ಬರೂ ಜವಾಬ್ದಾರಿಯುಳ್ಳ ಮನುಷ್ಯರಾಗಿದ್ದೇವೆ. ನಾವು ಹೇಗೆ ಮಾಡುತ್ತೇವೆಂದರೆ ನಿಮ್ಮ ಹಾಗೆ ಭಾಷಣಗಳನ್ನು. . . .

ಶ್ರೀ ಸಿ. ಎಂ. ಪೂಣಚ್ಚ (ಒಳಾಡಳಿತ ಮತ್ತು ಕೈಗಾರಿಕೆಯ ಶಾಖೆಗಳ ಮಂತ್ರಿಗಳು).—'ನಮಗೆ' ಎಂದರೆ ಪ್ರಜಾಸೋಷಿಯಲಿಸ್ಟ್ ಪಕ್ಷವೆಂದು ಹೇಳುತ್ತೀರಾ ?

Sri Y. VEERAPPA.—It may be something. It depends on the political atmosphere. What it would be need not be said now. We may form a coalition government.

Sri C. M. POONACHA.—I would like to know whether the Hon'ble Member refers on a party level that if Congress is not able to manage affairs, it should be left in the hands of the P.S.P., of which I presume the Hon'ble member is one. Does he mean

that? If that is so, I have an answer ready.

Sri Y. VEERAPPA.—I do not want to yield.

ಆದುದರಿಂದ ನಾವುಗಳು ಇಲ್ಲಿಗೆ ಸದಾರಮೆಯ ನಾಟಕದ ಪ್ರಸ್ತಾಪ ಮಾಡುವುದಕ್ಕೆ ಬಂದಿಲ್ಲ. ನಿಜವಾಗಿಯೂ ಕೂಡ ನಾವು ಜನಗಳ ಪ್ರತಿನಿಧಿಗಳಾಗಿ ಬಂದಿದ್ದೇವೆ. ನಾವುಗಳು ಇಲ್ಲಗೆ ಬಂದಿರತಕ್ಕದು ಜನರ ಕಷ್ಟ ಸುಖಗಳನ್ನು ಸರ್ಕಾರಕ್ಕೆ ನಿವೇದನೆ ಮಾಡಿ ತನ್ಮೂಲಕ ಅವರಿಗೆ ಅನುಕೂಲಗಳನ್ನು ಒದಗಿಸಿಕೊಡಬೇಕು ಎಂಬ ದೃಷ್ಟಿಯಿಂದ. ಸರ್ಕಾರದವರು ಪಾನನಿರೋಧವನ್ನು ಪೂರ್ತಿಯಾಗಿ ಜಾರಿಗೆ ತರದೆ ಇರುವುದಕ್ಕೆ ಕಾರಣ, ಅದು ಜಾರಿಯಲ್ಲಿದ್ದರೆ ಚುನಾವಣೆಗಳ ಕಾಲದಲ್ಲಿ ಅನುಕೂಲವಾಗುವುದಿಲ್ಲ. ಪಾನ ಮಾಡುವುದಕ್ಕೆ ಅವಕಾಶವಿದ್ದರೆ ಅದರಿಂದ ಸ್ವಲ್ಪ stimulate ಆಗಬಹುದು. ಇದರಿಂದ ಓಟರುಗಳ ಮನಸ್ಸಿನ ಮೇಲೆ ಸ್ವಲ್ಪ ಪರಿಣಾಮವಾಗಿ, ಅವರಿಗೆ stimulate ಆಗಿ ಕುಡಿದ ಅಮಲಿನಲ್ಲಿ ಇರುವಾಗ ವೋಟುಗಳನ್ನು ಪಡೆಯುವುದು ಸುಲಭ ಸಾಧ್ಯವೆಂಬ ದೃಷ್ಟಿಯಿಂದ ಪಾನನಿರೋಧವನ್ನು ಪೂರ್ತಿಯಾಗಿ ಜಾರಿಗೆ ತರದೆ ಇದ್ದಾರೆ ಎಂಬ ಶಂಕೆ ಬರುತ್ತದೆ. ನನ್ನ ಕ್ಷೇತ್ರದಲ್ಲಿ ಆದ ಅನುಭವವನ್ನು ಹೇಳುತ್ತೇನೆ. ಒಬ್ಬ ಸೇಂದಿ ಕಂಟ್ರಾಕ್ಟರನ ಹಿತೈಷಿಗಳು ನನಗೆ ವೋಟು ಮಾಡಿದ್ದಕ್ಕೋಸ್ಕರ, ಅವನು 'ನೀವು ವೀರಪ್ಪನವರಿಗೆ ಓಟು ಮಾಡಿದಿರಿ, ನನಗೆ ಒಬ್ಬ ಕಾಂಗ್ರೆಸ್ ವ್ಯಕ್ತಿಯಿಂದ ಬರತಕ್ಕ 25,000 ರೂಪಾಯಿಗಳ ಸೇಂದಿ ಕಡ ಇನ್ನೂ ಬಂದಿಲ್ಲ. ಅದನ್ನು ಇನ್ನು ಯಾವ ರೀತಿ ವಸೂಲ್ಮಾಡಿಕೊಳ್ಳಬೇಕೋ ಎಂದು ಹೇಳಿದನೆಂದು ತಿಳಿದು ಬಂತು. ಸೇಂದಿಯನ್ನು, ಓಟರುಗಳಿಗೆ ಕುಡಿಸಿ, ಅವರ ಜ್ಞಾನ ತಪ್ಪಿಸಿ ಅಥವಾ ಒಂದು ವ್ಯಾಮೋಹವನ್ನು ಹೆಚ್ಚಿಸಿ ವೋಟುಗಳನ್ನು ಗಳಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಂಬ ಶಂಕೆ ನನಗಿದೆ. ಎಲ್ಲರೂ ಈ ರೀತಿಯಾಗಿ ಮಾಡುತ್ತಾರೆಂದು ಸರ್ವೇ ಸಾಮಾನ್ಯವಾಗಿ ಹೇಳುತ್ತಿಲ್ಲ.

ಎರಡನೆಯದು ಸೇಂದಿ ಅಂಗಡಿಗಳನ್ನಿಟ್ಟಿರುವ ರೀತಿ ಮತ್ತು ಸ್ಥಳಗಳು ಹೇಗಿವೆ ಎಂದರೆ, ಅವುಗಳ ವ್ಯವಸ್ಥೆ ಹೇಗಿದೆ ಎಂದರೆ, ದೇವಸ್ಥಾನದ ಪಕ್ಕದಲ್ಲಿ ಅಂಗಡಿಗಳನ್ನು ಇಟ್ಟುಕೊಂಡಿದ್ದಾರೆ. ಹೆಂಗಸರು ಮಕ್ಕಳು ದೇವಸ್ಥಾನಗಳಿಗೆ ಹೋಗಿ ಬರುವುದಕ್ಕೆ ತೊಂದರೆಯಾಗಿದೆ. ಇವುಗಳನ್ನು ದೂರ ಹಾಕಿ ಎಂದು ಹೇಳಿದರೂ ಸಹ ಸರ್ಕಾರದವರು ಇದಕ್ಕೆ ನಿಗಾ ಕೊಟ್ಟಿಲ್ಲ. ಮಾನ್ಯ ಮಂತ್ರಿಗಳು ಪ್ರವಾಸ ಹೋದಾಗ ಸಹ ಅನೇಕರು ಈ ವಿಷಯಗಳನ್ನು ಅವರ ಗಮನಕ್ಕೆ ತಂದಿದ್ದಾರೆ. ಅವರೂ ನೋಡಿರಬಹುದು. ಆದರೂ ಸಹ ಅದಕ್ಕೆ ಗಮನ ಕೊಟ್ಟಿಲ್ಲ. ಕೆಲವು ಕಡೆ ಊರಿನ ಮಧ್ಯೇ ಈ ಅಂಗಡಿಗಳಿವೆ. ಯಾರಾದರೂ ಒಬ್ಬ ಮನುಷ್ಯ ಬಂದು ಕುಡಿದು ಮತ್ತನಾಗಿ ಪೇಟೆಯಲ್ಲಿ ಹೋಗುತ್ತಿರಬೇಕಾದರೆ ಅಥವಾ ಜ್ಞಾನ ತಪ್ಪಿದರೆ ಅಥವಾ ಅವನು ಕುಡಿದಿರುವ ಅಮಲಿನಲ್ಲಿ ಏನೇನೋ ಮಾತನಾಡುತ್ತಿದ್ದರೆ, indecent behaviour ಎಂದು ಚಾರ್ಜ್ ಷೀಟ್ ಹಾಕಿ ಅನ್ಯಾಯವಾಗಿ ಅವನನ್ನು ಕೋರ್ಟಿಗೆ ತರುತ್ತಾರೆ. ಒಂದು ಅಂಗಡಿಯನ್ನು ತೆರೆದು ಅದರಲ್ಲಿ ಅಕ್ಕಿಯನ್ನು ಏಕೆ ಇಟ್ಟಿದ್ದೀರಿ? ಸಣ್ಣಕ್ಕಿ, ದಪ್ಪಕ್ಕಿ, ಕೋರ್ಸ್ ಅಕ್ಕಿ ಹೀಗೆ ಏಕೆ ಇಟ್ಟುಕೊಂಡಿದ್ದೀರಿ? ಅಕ್ಕಿಯನ್ನು ಅಂಗಡಿಯಲ್ಲಿ ಇಟ್ಟ ಮೇಲೆ temptation ಆಗುತ್ತದೆ. It is left to my choice to puchase Coimbatore sanna or coarse rice or some other rice. ಹಾಗೆಯೇ ನನ್ನ ಸ್ನೇಹಿತರು ಹೇಳಿದ ಹಾಗೆ, ಉದಾಹರಣೆಗೆ ಹೇಳಬೇಕಾದರೆ, ಹೊಳೆನರಸೀಪುರ ತಾಲ್ಲೂಕಿನಲ್ಲಿ ಸೇಂದಿ ಅಂಗಡಿಗಳನ್ನಿಟ್ಟು wet area ಎಂದು ಹೇಳುತ್ತೀರಿ. ಅದರ ಪಕ್ಕದಲ್ಲಿರುವ ಅರಕಲಗೂಡು ತಾಲ್ಲೂಕಿನಲ್ಲಿ ಪಾನ ನಿರೋಧವನ್ನು ಜಾರಿಗೆ ತಂದು dry area ಎಂದು ಹೇಳುತ್ತಿದ್ದೀರಿ. ಪಕ್ಕದ ತಾಲ್ಲೂಕಿನಿಂದ ಒಬ್ಬ ಮನುಷ್ಯ ಹಿಂದಿನಿಂದ, ಬಹುಕಾಲದಿಂದ ಬಂದಂಥ ಒಂದು ಅಭ್ಯಾಸದಿಂದ ಹೊಳೆನರಸೀಪುರ ತಾಲ್ಲೂಕಿಗೆ ಬಂದು ಕುಡಿದರೆ, ಅರಕಲಗೂಡು ತಾಲ್ಲೂಕಿನವರು ಅವನ ಮೇಲೆ ಕೇಸು ಹಾಕುವುದು ಯಾವ ಧರ್ಮ ಎಂದು ಕೇಳಬೇಕಾಗಿದೆ. ಈ ಬಾಬಿನಿಂದ ಏನೇನು ಅನ್ಯಾಯ, ಅಪಘಾತಗಳಾಗಿವೆ ಮತ್ತು ಜನರ ನೈತಿಕ ಮಟ್ಟ ಎಷ್ಟು ಕುಗ್ಗಿದೆ ಎಂದರೆ, ಎಲ್ಲೆಲ್ಲಿ ಪಾನ ನಿರೋಧವನ್ನು ಜಾರಿಯಲ್ಲಿ ತಂದರೋ ಅಲ್ಲೆಲ್ಲ tonic bottles introduce ಆಗಿವೆ. ಅದಕ್ಕೆ Inspector General of Police ಅವರು ಪರ್ಮಿಟ್ ಕೊಡುತ್ತಾರೆ. ಇದರಲ್ಲಿ ಆಲ್ಕೊಹಾಲ್ ಎಷ್ಟಿರುತ್ತದೆಂದರೆ ಸುಮಾರು ಶೇಕಡ 70-80ರಷ್ಟು ಇರುತ್ತದೆ. ಇದರಿಂದ ಅನೇಕ ತೊಂದರೆಗಳಾಗಿವೆ. ಇಂಥ ಟಾನಿಕ್‌ಗಳನ್ನು ಕುಡಿದು ಎಷ್ಟೋ ಜನ ಸತ್ತು ಹೋಗಿದ್ದಾರೆ. ಇಂಥ ಪರಿಸ್ಥಿತಿ ಇದ್ದಾಗ್ಗೂ ಕೂಡ ಸರ್ಕಾರದವರು ಇಂಥ ವಿಚಾರಗಳಿಗೆ ಗಮನ ಕೊಡದೆ ಜನಗಳಿಗೆ ಬಹಳ ಅನ್ಯಾಯ ಮಾಡುತ್ತಿದ್ದಾರೆಂದು ಹೇಳಬಹುದು. ಬೆಂಗಳೂರಿನಲ್ಲಿ Khoday Laboratory ಇದೆ. ಅದರಲ್ಲಿ alcoholic tonics ತಯಾರು ಮಾಡುತ್ತಾರೆ. ಇಂಥ ಟಾನಿಕ್‌ಗಳಿಗೆ ಮಹಾತ್ಮ ಗಾಂಧಿ ಟಾನಿಕ್, ಕೃಷ್ಣ ಟಾನಿಕ್, ಎಂದು ಅನೇಕ ನಾಯಕರ ಮತ್ತು ದೇವರ ಹೆಸರುಗಳನ್ನು ಇಟ್ಟು ಜನಗಳಿಗೆ ಅನ್ಯಾಯ ಮಾಡುತ್ತಿದ್ದಾರೆಂದು ನಾನು ಸರ್ಕಾರದವರ ಗಮನಕ್ಕೆ ತರಲು ಇಷ್ಟಪಡುತ್ತೇನೆ.

ಮೊನ್ನೆತಾನೆ ಪ್ರಶ್ನೋತ್ತರ ಕಾಲದಲ್ಲಿ, ಅಬ್ಕಾರಿ ಬಾಬಿನಲ್ಲಿ defaulters ಎಷ್ಟು ಜನರಿದ್ದಾರೆ, ಯಾರು ಯಾರು ಇದ್ದಾರೆ ಎಂದು ಕೇಳಿದ್ದಕ್ಕೆ ಅಬ್ಕಾರಿ ಮಂತ್ರಿಗಳು ಅಂಥ defaulters ಹೆಸರುಗಳನ್ನು ಹೇಳುವುದಕ್ಕೆ ಆಗುವುದಿಲ್ಲವೆಂದು ಹೇಳಿದರು. Defaulters ಎಷ್ಟು ವರ್ಷಗಳಿಂದ ಇದ್ದಾರೆಂದರೆ, 20 ವರ್ಷಗಳಿಂದ ಇದ್ದಾರೆಂದು ಹೇಳಿದರು. Excise Manual ಪ್ರಕಾರ ಯಾರಾದರೂ ಒಬ್ಬನು defaulter ಆಗಿದ್ದರೆ ಅವನು ಪುನಃ ಬಿಡ್ ಮಾಡುವುದಕ್ಕೆ ಅವಕಾಶವಿಲ್ಲ. ಆದುದರಿಂದ defaulters ಹೆಸರು ಹೇಳದೆ ಇದ್ದರೆ, ಬಹುಶಃ defaulters ಯಾರಿದ್ದಾರೆಯೋ ಅವರಿಗೇ ಪುನಃ ಸೇಂದಿ ಅಂಗಡಿಗಳ ಕಂಟ್ರಾಕ್ಟ್ ಕೊಟ್ಟಿದ್ದಾರೆಂದು ಹೇಳಬೇಕಾಗುತ್ತದೆ. ಅಥವಾ ಆ ರೀತಿ defaultersಗೆ ಪುನಃ ಕಂಟ್ರಾಕ್ಟ್ ಕೊಟ್ಟಿದ್ದಾರೆಂದು ಕಡ್ಡಾಯವಾಗಿ ನಂಬಬೇಕಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರದವರ ಧೋರಣೆಯನ್ನು ನೋಡಿದರೆ ನಮಗೆ ಇನ್ನೂ ಒಂದು ಶಂಕೆ ಬರುತ್ತದೆ. ಏನೆಂದರೆ ಈಗ ನಮ್ಮ ದೇಶದಲ್ಲಿ ಸೇಂದಿ ಕಂಟ್ರಾಕ್ಟರುಗಳ ಒಂದು ಗುಂಪು ಇದೆ ಎಂದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಾಗಿದೆ. ಈ ಗುಂಪಿನವರು ಕೂಡ ರಾಜ್ಯಾಡಳಿತವನ್ನು ಕಟ್ಟಿಕೊಂಡು, ರಾಜ್ಯದ ನಿತ್ಯ ಆಡಳಿತ ವಿಚಾರಗಳಲ್ಲಿ ಕೂಡ ಕೈ ಹಾಕುತ್ತಿದ್ದಾರೆ ಎಂದು ಸಹ ತಿಳಿದು ಬಂದಿದೆ. ಈ ದೃಷ್ಟಿಯಿಂದ ಸುಖೀರಾಜ್ಯ ಮಾಡುತ್ತೇವೆ, ಸರ್ವೋದಯ ತತ್ತ್ವವನ್ನು ಪ್ರಚಾರ ಮಾಡುತ್ತೇವೆ, ಎಂದು ಹೇಳುವಾಗ ದುಷ್ಪರಿಣಾಮಕಾರಿಯಾದ ಪಾನ ಮಾಡುವ ಪದ್ಧತಿಯನ್ನು

(SRI Y. VEERAPPA.)

ಸಂಪೂರ್ಣವಾಗಿ ತಪ್ಪಿಸುವ ಸಲುವಾಗಿ ಪಾನನಿರೋಧದ ನೀತಿಯನ್ನು ನೀವು ಸರಿಯಾಗಿ ಮತ್ತು ಜಯಪ್ರದವಾಗಿ ಆಚರಣೆಗೆ ತರದೆ ಇದ್ದರೆ ನಿಜವಾಗಿಯೂ ನಿಮಗೂ ನಾಚಿಕೆ ಮತ್ತು ನಮ್ಮ ಸಮಾಜಕ್ಕೂ ನಾಚಿಕೆ ಎಂದು ಅನಿವಾರ್ಯವಾಗಿ ಹೇಳಬೇಕಾಗಿದೆ.

ಹರಾಜಿನ ವಿಚಾರದಲ್ಲಿ, ಬಹುಶಃ ಒಂದು ನಿದರ್ಶನವನ್ನು ಹೇಳಿದರೆ ಅದು subjudice ಆಗುವುದಿಲ್ಲವೆಂದು ಭಾವಿಸುತ್ತೇನೆ. ಹರಾಜಿನಲ್ಲಿ ಅನ್ಯಾಯವಾಯಿತೆಂದು ಒಬ್ಬ ಕಂಟ್ರಾಕ್ಟರು ಸುಪ್ರೀಂ ಕೋರ್ಟಿಗೆ ಅಪೀಲು ಹೋದರು ಎಂಬ ವಿಷಯವನ್ನು ಪತ್ರಿಕೆಗಳಲ್ಲಿ ಓದಿದ್ದೇನೆ. ಸುಪ್ರೀಂ ಕೋರ್ಟಿನ ನ್ಯಾಯಾಧೀಶರು, ಅನ್ಯಾಯ ನಡೆದಿದೆ, ಆದರೆ ಏನು ಮಾಡುವುದು, ಕಾಲಾವಧಿ ಮುಗಿದು ಹೋಗಿದೆ, ಆದುದರಿಂದ ನೀನು ಸುಮ್ಮನೆ ಇರುವುದು ಒಳ್ಳೆಯದು ಎಂದು ಹೇಳಿದರು. ಏಕೆಂದರೆ ಇಷ್ಟರೊಳಗೆ limitation ಆಯಿತು, ನಿಮ್ಮ ಪರವಾಗಿ ತೀರ್ಮಾನ ಕೊಟ್ಟರೂ ನಿಮಗೆ ಪ್ರಯೋಜನವಾಗುವುದಿಲ್ಲ, ನಿಮ್ಮ ಉದ್ದೇಶ ನೆರವೇರುವುದಿಲ್ಲ; ನಿಮಗೇನೊ ಅನ್ಯಾಯವಾಗಿದೆ ಎಂದು ಅಭಿಪ್ರಾಯಪಟ್ಟರು ಎಂದು ಓದಿದ್ದೇನೆ. ಸರ್ಕಾರದವರು ಜವಾಬ್ದಾರಿಯನ್ನು ಇಟ್ಟುಕೊಂಡಿರಬೇಕಾಗಿದ್ದರೆ, ಇಂಥ ಲೋಪದೋಷಗಳು ಕಂಡುಬಂದರೆ, ಜನಗಳಿಗೆ ಸರ್ಕಾರದಲ್ಲಿ ನಂಬಿಕೆ ಕಡಮೆಯಾಗುತ್ತದೆ. ಆದುದರಿಂದ ಸರ್ಕಾರದವರು ಈ ವಿಷಯಕ್ಕೆ ತೀಕ್ಷ್ಣವಾಗಿ ಗಮನಕೊಟ್ಟು ಸಂಪೂರ್ಣ ಪಾನನಿರೋಧವನ್ನು ಜಾರಿಗೆ ತರಬೇಕು; ಇಲ್ಲದೆ ಇದ್ದರೆ ಜನಗಳಿಗೆ ತೊಂದರೆಯಾಗುತ್ತದೆ ಎಂದು ಹೇಳುತ್ತೇನೆ.

ಇದೇ ಸಂದರ್ಭದಲ್ಲಿ ಪಾನನಿರೋಧವನ್ನು ಪೂರ್ತಿಯಾಗಿ ಜಾರಿಗೆ ತಂದರೆ ನಮಗೆ ಆದಾಯ ಕಡಮೆಯಾಗುತ್ತದೆ ಎಂದು ಹೇಳಿದರು. ಒಂದು ಕಡೆ ಅನೇಕ ತೆರಿಗೆಗಳನ್ನು ಹೊರಿಸುತ್ತಿದ್ದಾರೆ. ಹೀಗೆ ತೆರಿಗೆಗಳನ್ನು ಹೆಚ್ಚಾಗಿ ಹೊರಿಸಿದ ಮೇಲೂ ಪಾನನಿರೋಧವನ್ನು ಜಾರಿಗೆ ತರದೆ ಇದ್ದರೆ ಯಾವ ಧರ್ಮ! ಒಂದು ಕಡೆ prohibition policy ಹೇಳುತ್ತಾರೆ, ಮತ್ತೊಂದು ಕಡೆ ಹಣದ ಮುಗ್ಗಟ್ಟಿದೆ ಎಂದು ಹೇಳುತ್ತಾರೆ. ಹೀಗೆ ಎರಡನ್ನೂ ಇಟ್ಟುಕೊಂಡು ನಾವು ಪೇಚಾಡುತ್ತಿದ್ದರೆ ನಮ್ಮ ಕಾರ್ಯವು ಯಾವಾಗಲೂ ಸರಿ ಹೋಗುವುದಿಲ್ಲ, ಜಯ ಪ್ರದವಾಗುವುದಿಲ್ಲ. ಆದುದರಿಂದ ಮಹಾತ್ಮ ಗಾಂಧೀಜಿಯವರು ಹಾಕಿಕೊಟ್ಟ ತತ್ತ್ವ ಅಲ್ಲದೆ ರಾಜ್ಯಾಂಗದಲ್ಲಿ ಅಳವಡಿಸಿರುವ ಒಂದು ಮೂಲ ತತ್ತ್ವವನ್ನನುಸರಿಸಿ ಜಾಗ್ರತೆಯಾಗಿ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಈ ವರ್ಷ ಹರಾಜು ಆದದ್ದು ಒಂದು ವೈಶಿಷ್ಟ್ಯ. ವರ್ಷೇ ವರ್ಷೇ ಹರಾಜಿನಿಂದ ಬರತಕ್ಕಂಥ ಆದಾಯವು 1955-56ರವರೆಗೆ ಸರಿಯಾಗಿ ಬರುತ್ತಿತ್ತು. ಈ ವರ್ಷದ ಹರಾಜು ನೋಡಿದರೆ ಅದೊಂದು ವೈಶಿಷ್ಟ್ಯವಾಗಿದೆ. ಸರ್ಕಾರ ಏನೇನು ಕಾನೂನುಗಳನ್ನು ಮಾಡಿದೆಯೋ ಅವುಗಳಿಗೆ ಅನುಗುಣವಾಗಿ ಕೆಲಸವಾಗುತ್ತಿಲ್ಲ. ಲೋಪದೋಷಗಳು ಇರುವುದರಿಂದ ಅನ್ಯಾಯವಾಗುತ್ತಿದೆ, ಹಾನಿಯಾಗುತ್ತಾ ಇದೆ. ಎಕ್ಸೈಜ ಹರಾಜಿನಿಂದ ಸರ್ಕಾರಕ್ಕೆ ಲಾಭ ಬರುತ್ತಿತ್ತು; ಗಾಂಜಾ, ಟಾಡೀ ಹರಾಜಿನಿಂದ ಹೆಚ್ಚು ಉತ್ಪತ್ತಿ ಬರುತ್ತಿತ್ತು. ಆದರೆ ಈಗ 37½ ಲಕ್ಷ ರೂಪಾಯಿ ಹಾನಿಯಾಗಿದೆ. ಈ ವಿಷಯದ ಬಗ್ಗೆ ಸರ್ಕಾರದವರು ಸರಿಯಾದ ನಿಗಾ ತೆಗೆದುಕೊಂಡು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಸದಸ್ಯರೊಬ್ಬರು ತತ್ತ್ವ ಮೂಲ ಸಿದ್ಧಾಂತಗಳ ಬಗ್ಗೆ ಹೇಳಿದರು. ಅದನ್ನು ಗಮನಕ್ಕೆ ತೆಗೆದುಕೊಂಡು ಅದಕ್ಕೆ ಬೆಲೆ ಕೊಟ್ಟು ಅದರಂತೆ ನಡೆದರೆ ಜನರಿಗೆ ತೊಂದರೆಯಾಗುವುದಿಲ್ಲ. ಸ್ಟಾಂಪು ಬಾಬಿನಲ್ಲಿ ಪದೇ ಪದೇ ನಾವು ಹೇಳಿದ್ದೇವೆ. ದಿನದಿನಕ್ಕೆ ಅದು ಹೆಚ್ಚಾಗುತ್ತಿದೆ. ಇದು ಜನ ಸಾಮಾನ್ಯರ ಮೇಲೆ ಭಾರ ಬೀಳುತ್ತದೆ. ಜನರಿಗೆ ತೊಂದರೆಯಾಗುತ್ತದೆ. ಇದರಿಂದ ಜನರಿಗೆ ಸೌಕರ್ಯವಾಗಿಲ್ಲ. ಆದಾಯವನ್ನು ಹೆಚ್ಚು ಮಾಡಿಕೊಳ್ಳುವದಕ್ಕೆ ಇದು ಮಾರ್ಗವಲ್ಲ.

ವೆಹಿಕಲ್ಸ್ ಟಾಕ್ಸಿನ ವಿಚಾರದಲ್ಲಿಯೂ ಸದಸ್ಯರು ಹೇಳಿದ್ದಾರೆ. ಒಂದು ಮಸೂದೆಯೂ ಸಹ ನಮ್ಮ ಮುಂದೆ ಈಗ ಬರಲಿದೆ. ನಿಜವಾಗಿಯೂ ಆಶಾದಾಯಕವಾಗಿ ಆಗಬಹುದು ಎಂದು ಎಷ್ಟರ ಮಟ್ಟಿಗೆ ನಾವು ನಿರೀಕ್ಷಿಸಿದ್ದೆವೋ ಅಷ್ಟು ಆಗಿಲ್ಲ. ಒಟ್ಟಿನಲ್ಲಿ ಈ ಎಕ್ಸೈಜ್ ಡಿಮ್ಯಾಂಡನ್ನು ಕಾಯಾ ವಾಚಾ ಮನಸಾ ನಾವು ಓಟು ಮಾಡುವುದಕ್ಕೆ ಆಗುವುದಿಲ್ಲ. ಯಾಕೆಂದರೆ ಇದರಲ್ಲಿ ಲೋಪದೋಷಗಳು ಬಹಳ ಇವೆ. ಮದ್ಯಪಾನ ನಿರೋಧವು ಜಯಪ್ರದವಾಗದೆ ಇರುವುದರಿಂದ ಈ ಬೇಡಿಕೆಗೆ ಸಮ್ಮತಿ ಕೊಡುವದಕ್ಕೆ ಲಾಯಖಾದ ಬಾಬು ಇದಾಗಿರುವುದಿಲ್ಲವೆಂದು ಹೇಳಿ ಮಾತನಾಡಲು ಅವಕಾಶ ಕೊಟ್ಟಿದುದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ಸಿಟಿ).—ಸ್ವಾಮಿ, ಈಗ ಸಭೆಯ ಮುಂದೆ ಇರುವ ಬೇಡಿಕೆಯ ಮೇಲೆ ನಡೆದ ಚರ್ಚೆಯಲ್ಲಿ ಕೆಲವು ಮಾನ್ಯ ಸದಸ್ಯರು ಏನನ್ನು ಹೇಳಿದ್ದಾರೋ ಅದನ್ನು ನಾನು ಕೇಳಿದ್ದೇನೆ. ತೆರಿಗೆಯ ಹೊರೆ ಹೆಚ್ಚಾಗುತ್ತಿದೆ ಎಂದು ಒಬ್ಬ ಮಾನ್ಯ ಸದಸ್ಯರು ಹೇಳಿದರು. ಹಾಗೆಯೇ ಹೇಳುತ್ತಾ 14ನೆಯ ಲೂಯಿಯ ಉದಾಹರಣೆಯನ್ನು ವಿವರಿಸಿದರು. ಈಗಿನ ಪ್ರಜಾಪ್ರಭುತ್ವದ ಕಾಲದಲ್ಲಿ, ಅದರಲ್ಲಿಯೂ ಕೂಡ ನಮ್ಮ ರಾಜ್ಯದಲ್ಲಿ ಸರ್ವಸಾಮಾನ್ಯವಾಗಿ ಎಲ್ಲ ಪ್ರಜೆಗಳಿಗೂ ಸುಖ ಸಂಪತ್ತು ದೊರೆಯಬೇಕೆಂದು ಹೇಳತಕ್ಕಂಥ ಕಾಲದಲ್ಲಿ ಖರ್ಚಿನ ಬಾಬುಗಳು ಹೆಚ್ಚಾಗಿವೆ. ಆ ದೃಷ್ಟಿಯಿಂದ ತೆರಿಗೆಗಳನ್ನು ವಿಧಿಸಲೇ ಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಇಂದು ಅಂಥ ನಿರಂಕುಶ ಪ್ರಭುತ್ವ ಪರಿಸ್ಥಿತಿಯಿಲ್ಲ. ತೆರಿಗೆಗಳನ್ನು ಹಾಕುವುದು ಅಭಿವೃದ್ಧಿ ಕಾರ್ಯಗಳಿಗಾಗಿ. ಹೆಚ್ಚು ತೆರಿಗೆಹಾಕಿದರೆ ಏಕೆ ಹೆಚ್ಚು ತೆರಿಗೆ ಬೀಳುತ್ತದೆ ಎಂಬುದನ್ನು ಜನರು ತಿಳಿದುಕೊಂಡಿರುವದರಿಂದಲೇ ತೆರಿಗೆಗಳನ್ನು ಕೊಡುತ್ತಿದ್ದಾರೆ. ಸಾಮಾನ್ಯವಾಗಿ ಮಾಡಿರತಕ್ಕಂಥ ಅಭಿವೃದ್ಧಿಯ ಕಾರ್ಯಗಳ ಬಗ್ಗೆ ನಮ್ಮ ಸರ್ಕಾರದವರೂ ಕೇಂದ್ರ ಸರ್ಕಾರದವರೂ ಪದೇ ಪದೇ ಹೇಳುತ್ತಲೇ ಇದ್ದಾರೆ. ತೆರಿಗೆ ಹೆಚ್ಚು ಹಾಕಿದ ಮಾತ್ರಕ್ಕೆ ಕ್ರಾಂತಿಯಾಗಿ ಬಿಡುವುದಿಲ್ಲ. ಕ್ರಾಂ ಆಗಬಹುದೆಂದು ಸಹ ನಾನು ಭಾವಿಸುವುದಿಲ್ಲ. ಈ ಬೇಡಿಕೆಯ ವಿಚಾರದಲ್ಲಿ ತೆರಿಗೆಯು ಜಾಸ್ತಿಯಾಗಿಲ್ಲವೆಂದು ನಾನು ಹೇಳುತ್ತೇನೆ.

ಈಗ ಸ್ಟಾಂಪು ಮತ್ತು ಎಕ್ಸೈಜು ಡ್ಯೂಟಿಯ ವಿಚಾರದಲ್ಲಿ ನಮಗೆ ಆದಾಯ 1,32,474 ರೂಪಾಯಿ ಬರುತ್ತದೆ. ಸರ್ವಿಸ್ ಕಾಸ್ಟ್ ಅಷ್ಟೇ ಆಗುತ್ತಿದೆ ಎಂದು ಹೇಳಲಾಗಿದೆ. ಲೆಕ್ಕಹಾಕಿ ನೋಡಿದರೆ ಸ್ಟಾಂಪಿನಿಂದ ಬರುವ ಆದಾಯ ಅಡ್‌ಮಿನಿಸ್ಟ್ರೇಷನ್ ಆಫ್ ಜಸ್ಟಿಸ್ ಮತ್ತು administration of stampsಗೆ ಆಗುವ ಖರ್ಚಿಗಿಂತ ಜಾಸ್ತಿ ಇರುತ್ತದೆ. ಆದ್ದರಿಂದ

ಇನ್ನು ಹೆಚ್ಚಿಗೆ ತೆರಿಗೆ ಹಾಕಿದರೆ ತೊಂದರೆಯಾಗುತ್ತದೆ.

ಸಾಮಾನ್ಯವಾಗಿ ನ್ಯಾಯವನ್ನು ಆದಷ್ಟು ಮಟ್ಟಿಗೆ ಕಡಿಮೆ ಖರ್ಚಿನಲ್ಲಿ ದೊರಕಿಸಿಕೊಡಬೇಕು ಎಂಬ ತತ್ವವನ್ನು ನಾನು ಒಪ್ಪಿಕೊಳ್ಳುತ್ತೇನೆ. Justice is not made cheap but justice has become cheap. ಆದರೆ ನ್ಯಾಯಾಡಳಿತದ ಖರ್ಚು ಹೆಚ್ಚಾಗಿರುವದರಿಂದ ಇದರ ಪರಿಣಾಮ ಜನತೆಯ ಮೇಲೆ ಯಾವ ರೀತಿಯಾಗಿ ಆಗುತ್ತದೆ ಎಂಬುದನ್ನು ವಿಚಾರಮಾಡಬೇಕಾಗಿದೆ. ಕೋರ್ಟಿನಲ್ಲಿ ಆಗುವ ಖರ್ಚನ್ನು ತೆರಲಾರದೆ ವ್ಯವಹಾರಗಳನ್ನು ಪಂಚಾಯಿತಿಗಳ ಮೂಲಕ ತೀರ್ಮಾನಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ, ತಮ್ಮ ತಮ್ಮಲ್ಲಿಯೇ ನ್ಯಾಯವನ್ನು ತೀರ್ಮಾನ ಮಾಡಿಕೊಳ್ಳುವುದು ಅಷ್ಟು ಸುಲಭವಲ್ಲವಾದುದರಿಂದ ಇತ್ತೀಚಿಗೆ ಕ್ರಿಮಿನಲ್ ಕೇಸೆಸ್ ಹೆಚ್ಚಾಗಿವೆ. ಹಳ್ಳಿಗಳಲ್ಲಿ ಈ ನ್ಯಾಯವನ್ನು ಬಗೆಹರಿಸಿಕೊಳ್ಳಲು ಅವರಲ್ಲಿ ಶಕ್ತಿ ಇಲ್ಲದೇ ಇರುವುದರಿಂದ ಕೋರ್ಟಿಗೆ ಬರಬೇಕಾಗುವದು. ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟಿಸ್‌ಗೆ ಸಂಬಂಧಿಸದ ಖರ್ಚು ಕಡಮೆಯಾಗಬೇಕಾಗಿದ್ದರೆ ಈ ವಿಚಾರದಲ್ಲಿ ಎಕಾನಮಿ ಎಂದರೆ ಮಿತವ್ಯಯ ಮಾಡಲು ಅವಕಾಶವಿದೆ. ಆದುದರಿಂದ ಮಿತವ್ಯಯ ಮಾಡಿ ಖರ್ಚು ಕಡಮೆಯಾಗುವಂತೆ ಮಾಡಬೇಕು. ಇದರಿಂದ ಸ್ಟಾಂಪು ಖರ್ಚು ಕಡಿಮೆಯಾಗಲು ಅನುಕೂಲವಾಗುವುದು.

11-30 A.M.

ಈ ಮೋಟಾರ್ ವಾಹನಗಳ ಬಾಬಿನಲ್ಲಿ ಜನಗಳಿಗೆ ತೊಂದರೆಯಾಗುತ್ತಿದೆಯೆಂದು ನಾವು ಪದೇ ಪದೇ ಸರ್ಕಾರಕ್ಕೆ ಹೇಳುತ್ತಿದ್ದೇವೆ. ಇಂಟರ್ ಸ್ಟೇಟ್ ಟ್ರಾನ್ಸ್‌ಪೋರ್ಟ್‌ಗಳನ್ನು ಏರ್ಪಾಡು ಮಾಡಿಕೊಡಿ ಎಂದು ಹೇಳುತ್ತಿದ್ದೇವೆ. ಅದು ಆಗುತ್ತದೆಯೋ ಇಲ್ಲವೋ, ಸರ್ಕಾರದವರು ಒಪ್ಪುತ್ತಾರೋ ಇಲ್ಲವೋ ಎನ್ನುವ ಅನುಮಾನ ಬಂದಿದೆ. ನಾವು ಮೈಸೂರಿನಿಂದ ಕೊಯಮತ್ತೂರಿಗೆ ಹೋಗುವ ಲೈನನ್ನು ಜಾಗ್ರತೆ ಮಾಡಬೇಕೆಂದು ಪದೇ ಪದೇ ಕೇಳುತ್ತಿದ್ದೇವೆ. ಮೈಸೂರಿನಿಂದ ಕೊಯಮತ್ತೂರು ಮತ್ತು ಊಟಿಗೆ ಹೋಗುವ ಜನಗಳು ಮಧ್ಯೇಕಾಡಿನಲ್ಲಿ ವಾಹನಗಳನ್ನು ಬದಲಾಯಿಸಬೇಕಾಗಿದೆ. ಎಷ್ಟೋ ಕಡೆಗಳಲ್ಲಿ ಟ್ರಾನ್ಸ್‌ಪೋರ್ಟ್ ಸಿಕ್ಕುವುದಿಲ್ಲ. ಆಗ ಕಾಡಿನಲ್ಲೇ ಇರುವ ಪರಿಸ್ಥಿತಿ ಬರುತ್ತದೆ. ಊಟಿಗೆ ಹೋಗುವ ಜನಗಳಿಗೆ ಅನೇಕ ಸಂದರ್ಭಗಳಲ್ಲಿ ಇದರಿಂದ ತೊಂದರೆಯಾಗುತ್ತದೆಂಬುದನ್ನು ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಅದನ್ನು ಏಕೆ ಮಾಡಲಿಲ್ಲವೋ ಗೊತ್ತಾಗಲಿಲ್ಲ. ನಮ್ಮಲ್ಲಿ ಟ್ರಾನ್ಸ್‌ಪೋರ್ಟನ್ನು ನ್ಯಾಷನಲೈಸ್ ಮಾಡಬೇಕೆಂದು ಹೇಳುತ್ತಿದ್ದಾರೆ. ಸಂಸ್ಥಾನದಲ್ಲಿ ಟ್ರಾನ್ಸ್‌ಪೋರ್ಟ್ ಇಲಾಖೆಯವರಿಂದ ಮಾಡಿಸುವುದಕ್ಕಾಗದಿದ್ದರೆ ಪ್ರೈವೇಟ್ ಆಪರೇಟರ್ಸ್‌ಗಳಿಂದ ಇಂಟರ್ ಸ್ಟೇಟ್ ಟ್ರಾನ್ಸ್‌ಪೋರ್ಟ್ ನಡೆಸುವುದಕ್ಕೆ ಏನು ಕಷ್ಟ?

ಶ್ರೀ ಸಿ. ಎಂ. ಪೂಣಚ್ಚ.—ಮಾನ್ಯ ಸಭೆಯ ಅವಗಾಹನೆಗೆ ಒಂದು ವಿಚಾರವನ್ನು ತಿಳಿಸಬೇಕಾಗಿದೆ. ಮೈಸೂರಿನಿಂದ ಊಟಿಗೆ ಹೋಗುವ ಲೈನಿನ ವಿಚಾರದಲ್ಲಿ ಈಗಾಗಲೇ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಮೈಸೂರಿನಿಂದ ಕೊಯಮತ್ತೂರಿಗೆ ಒಂದು ಲೈನ್ ಹಾಕಬೇಕೆಂದು ಸರ್ಕಾರದ ಆಲೋಚನೆಯಲ್ಲಿದೆ. ಅದೇ ಪ್ರಕಾರ ಮೈಸೂರಿನವರಿಗೂ,. ಆಂಧ್ರದವರಿಗೂ ಇನ್ನೂ ಚರ್ಚೆ ನಡೆಯುತ್ತಿದೆ. ಶೀಘ್ರದಲ್ಲೇ ಆ ಬಗ್ಗೆಯೂ ತೀರ್ಮಾನವನ್ನು ಕೈಗೊಳ್ಳುತ್ತೇವೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಬಹಳ ಸಂತೋಷದ ವಿಚಾರ. ಆದರೆ ನನಗೆ ತಿಳಿದಿರುವ ಹಾಗೆ 8-10 ವರ್ಷಗಳಿಂದಲೂ, ಮೈಸೂರಿನಿಂದ ಕೊಯಮತ್ತೂರಿಗೆ ಲೈನ್ ಹಾಕಬೇಕೆಂದು ಸರ್ಕಾರವನ್ನು ಕೇಳುತ್ತಿದ್ದಾರೆ. ಅದು ಏಕೆ ಆಗುತ್ತಾ ಇಲ್ಲವೋ ನನಗಂತೂ ತಿಳಿಯಲಿಲ್ಲ. ಮೈಸೂರಿನವರು ತೀವ್ರತೆಯಿಂದ ಮಾಡಬಹುದು ಎಂದು ನಾನು ತಿಳಿದುಕೊಂಡಿದ್ದೆ. ಇನ್ನಾದರೂ ವಿಳಂಬಕ್ಕೆ ಅವಕಾಶಕೊಡದೆ ಈ ಲೈನನ್ನು ಜಾಗ್ರತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಿಂದ ಬರತಕ್ಕ ಉತ್ಪತ್ತಿಯಲ್ಲಿ ಲೋಕಲ್ ಬಾಡಿಗಳಿಗೂ ಕೂಡ ನಿಗದಿಯಾದ ಒಂದು ಗ್ರಾಂಟ್ ಕೊಡಬೇಕು. ಕೊಡಬೇಕಾಗಿರುವ ಗ್ರಾಂಟನ್ನು ಈಗ ಸ್ಥಳೀಯ ಸಂಸ್ಥೆಗಳಿಗೆ, ಕಾರ್ಪೊರೇಷನ್ನಿಗೆ ಮತ್ತು ಮುನಿಸಿಪಾಲಿಟಿಗಳಿಗೆ ಕೊಡುತ್ತಾ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಮೈಸೂರು, ಬೆಂಗಳೂರು ಮುಂತಾದ ಸ್ಥಳಗಳಿಂದ ಹೋಗಿಬರತಕ್ಕ ಬಸ್ ಸರ್ವಿಸ್‌ಗಳು ಮತ್ತು ಸಿಟಿ ಬಸ್ಸುಗಳು ಸಹ ಬೇಕಾದಷ್ಟು ಇವೆ. ಅವು ಸ್ಥಳೀಯ ಸಂಸ್ಥೆಗಳ ರಸ್ತೆಗಳ ಮೇಲೆ ಓಡಾಡುತ್ತವೆ. ಸ್ಥಳೀಯ ಸಂಸ್ಥೆಗಳಿಗೆ ರಸ್ತೆ ಮೇಂಟೈನ್ ಮಾಡುವುದಕ್ಕೋಸ್ಕರ ನಿಗದಿಯಾದ ಪ್ರಮಾಣದಲ್ಲಿ ಈ ಬಾಬಿನಲ್ಲಿ ಬರತಕ್ಕ ಆದಾಯದ ಒಂದು ಭಾಗವನ್ನು ಕೊಡಬೇಕೆಂದು ಹೇಳುತ್ತೇನೆ. ಈ ಮಧ್ಯೇ ಅಡ್ಮಿನಿಸ್ಟ್ರೇಷನ್ ಆಫ್ ರೋಡ್ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ಸರ್ಕಾರದವರು ಸರಿಯಾಗಿ ಕೆಲಸ ಕಾರ್ಯಗಳು ನಡೆಯುವ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದು ಒಳ್ಳೆಯದೆಂದು ನಾನು ಹೇಳುತ್ತೇನೆ. S.T.A. ಮತ್ತು R.T.A. ಸಂಸ್ಥೆಗಳು ಸಮರ್ಪಕವಾಗಿ ಕೆಲಸ ಮಾಡುತ್ತಾ ಇಲ್ಲ. ಅಲ್ಲಿ ಕಾನೂನುಗಳನ್ನು ತಿಳಿದ ಜನಗಳು ಇಲ್ಲ. ಈ ಒಂದು ಮೋಟಾರ್ ಆಕ್ಟನ್ನು ಓದಿದರೆ ಸಾಕಾಗುವುದಿಲ್ಲ. ಲಾ ತಿಳಿದವರನ್ನು ಹಾಕಬೇಕ.

ಒಬ್ಬ ಸದಸ್ಯರು.—ಲಾ ತಿಳಿದಿರುವವರನ್ನು ಹಾಕಿದರೆ ಲಾ ದಲ್ಲಿ ಅಡ್ಮಿನಿಸ್ಟ್ರೇಷನ್ ಮಾಡುವ ಪರಿಸ್ಥಿತಿ ನಮ್ಮ ದೇಶದಲ್ಲಿ ಚೆನ್ನಾಗಿರುತ್ತದೆ. ಅದನ್ನು ಆದಷ್ಟು ಜಾಗ್ರತೆ ಬದಲಾಯಿಸಬೇಕೆಂದು ನನ್ನ ಸಲಹೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ರೋಡ್ ಟ್ರಾನ್ಸ್‌ಪೋರ್ಟಿನಲ್ಲಿ ತಕ್ಕಮಟ್ಟಿಗೆ ಓವರ್ ಲೋಡಿಂಗ್ ಕಡಮೆಯಾಗಿದೆ. ಬಸ್ಸುಗಳನ್ನು ಹೆಚ್ಚಿಸಬೇಕು. ಹೆಚ್ಚಿಗೆ ಮಾಡಲು ಅವಕಾಶವಿದೆ. ಈ ಡಿಮ್ಯಾಂಡಿನ ವಿಚಾರದಲ್ಲಿ ಇಷ್ಟು ಹೇಳುತ್ತೇನೆ.

ಕಡೆಯದಾಗಿ ಎಕ್ಸೈಜ್ ಬಾಬಿನಲ್ಲಿ ನಾನು ಎರಡು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಈಗಾಗಲೇ ನನ್ನ ಅನೇಕ ಮಿತ್ರರು ಮಾತನಾಡಿದ್ದಾರೆ. ಈ ಪಾನನಿರೋಧ ಏನಿದೆ ಅದು ವಿಫಲವಾಗಿದೆ ಎಂದು ಹೇಳಿದ್ದಾರೆ. ಆದರೆ ಅದು ಪೂರ್ತಿಯಾಗಿ ವಿಫಲವಾಗಿದೆ ಎಂದು ಎಲ್ಲರೂ ಒಪ್ಪಿಕೊಳ್ಳುವ ಪರಿಸ್ಥಿತಿ ಇನ್ನೂ ಬರಲಿಲ್ಲ. ವಿಫಲವಾಗುವ ಮಾರ್ಗದಲ್ಲಿದೆ ಎಂದು ನಾನು ಹೇಳುತ್ತೇನೆ. ವಿಫಲವಾಗುವುದಕ್ಕೆ ಅನೇಕ ಕಾರಣಗಳಿವೆ. ನಮ್ಮ ದೇಶದಲ್ಲಿ ಒಂದು ಪಾನನಿರೋಧ ಪಾಲಿಸಿಯನ್ನು ಪೂರ್ಣವಾಗಿ ಜಾರಿಗೆ ತರದೆ ಇರುವುದು ಅದೂ ಒಂದು ಕಾರಣ.

ಎರಡನೆಯದಾಗಿ ಯಾರ ಕೈಯಲ್ಲಿ ಪಾನನಿರೋಧವನ್ನು ಜಾರಿ ಮಾಡುವ ಶಾಖೆಯನ್ನು ಕೊಟ್ಟಿದ್ದೇವೋ

(ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್).

ಆ ಶಾಖೆಯ ಜನರಲ್ಲಿ ಸಾಕಷ್ಟು ದಕ್ಷತೆ ಇಲ್ಲವೆಂದು ನಾನು ಹೇಳುತ್ತೇನೆ. ಕಾರಣವೇನೆಂದರೆ, ಈ ಪ್ರೊಹಿಬಿಷನ್ ಕಾನೂನನ್ನು ಜಾರಿಗೆ ತರುವುದಕ್ಕೆ ಜನಗಳಲ್ಲಿಯೂ ಸತ್ಯಸಂಧತೆ ಕಡಮೆಯಾಗಿದೆ. ಅವರು ಅಧಿಕಾರಿಗಳೊಡನೆ ಸೇರಿಕೊಳ್ಳುವುದರಿಂದ ಮೇಲಿನಿಂದ ಕೆಳಗಿನವರೆಗೂ ಇರತಕ್ಕ ಅಧಿಕಾರಿಗಳಲ್ಲಿ ಕೇವಲ ಹಂಚಿಕೆ ನಡೆಯುತ್ತಿದೆ. ಅದು ಒಂದು ಗೃಹ ಕೈಗಾರಿಕೆ ಆಗುತ್ತಿದೆ. ಇದೆಲ್ಲ ಹೇಗೆ ನಡೆಯುತ್ತದೆ ಎಂದು ಯೋಚನೆ ಮಾಡಬೇಕು. ಟಿಂಚರ್ ಮತ್ತು ಟಾನಿಕ್ ಎಂದು ಲೈಸನ್ಸ್ ತೆಗೆದುಕೊಂಡು ಎಷ್ಟೋ ಹಾವಳಿ ಮಾಡುತ್ತಿದ್ದಾರೆ. ಅದನ್ನು ಅಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಅದರಲ್ಲಿ ಶೇಕಡ 72 ಆಲ್ಕೋಹಾಲ್ ಇರುತ್ತದೆ. ಅದನ್ನು ಟಿಂಚರ್ ಆಲ್ಕೋಹಾಲ್ ಎಂದು ಕರೆಯುತ್ತಾರೆ. ಸರ್ಕಾರದವರು ಅದಕ್ಕೆ ಗಮನ ಕೊಡುತ್ತಿಲ್ಲವೆಂದು ನಾನು ವ್ಯಸನದಿಂದ ಹೇಳಬೇಕಾಗಿದೆ. ಅಷ್ಟು ಉತ್ತಮ ಫಲ ಬಾರದೆ ಇರುವುದಕ್ಕೆ ಇದೂ ಒಂದು ಕಾರಣ. ಆಮೇಲೆ ಬಾರ್ಡರುಗಳಲ್ಲಿ ಸ್ಮಗ್ಲಿಂಗ್ ವಿಪರೀತವಾಗಿ ಆಗುತ್ತಿದೆ. ಬಾರ್ಡರು ಅಂಗಡಿಗಳನ್ನು ಹಾಕುವುದಕ್ಕೆ ಅವಕಾಶ ಕೊಡಬಾರದು ಎಂದು ನಾನು ಹೇಳುತ್ತೇನೆ. ಬಾರ್ಡರುಗಳ ಅಂಗಡಿಗಳಲ್ಲಿ ಸುಲಭವಾಗಿ ಕಡಮೆ ಬೆಲೆಯಲ್ಲಿ ಮದ್ಯಪಾನವನ್ನು ತೆಗೆದುಕೊಳ್ಳುತ್ತಾರೆ. ಆದ್ದರಿಂದ ತಾವು ಯಾವ ಉದ್ದೇಶದಿಂದ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಇದ್ದೀರೋ ಆ ಉದ್ದೇಶ ಈರೀತಿ ಮಾಡುವುದರಿಂದ ನೆರವೇರುತ್ತಾ ಇಲ್ಲ. ಇದರಿಂದ ಏನಾಗಿದೆ ಎಂದರೆ ನಮ್ಮ ಸರ್ಕಾರಕ್ಕೆ ಬರುವ ಆದಾಯ ಕಡಮೆಯಾಗಿದೆ. ಆದರೆ ಕುಡಿಯತಕ್ಕ ಜನರು ಕುಡಿದೇ ಕುಡಿಯುತ್ತಿದ್ದಾರೆ. ದುಡ್ಡಿದ್ದವರು ದೂರ ಹೋಗಿ ಕುಡಿಯುತ್ತಾರೆ. ದುಡ್ಡಿಲ್ಲದವರು ಕಳ್ಳಭಟ್ಟಿ ಸಾರಾಯನ್ನು ಇಳಿಸಿ ಕುಡಿಯುತ್ತಾರೆ. ಟಿಂಚರನ್ನೂ ಕುಡಿಯುವುದಕ್ಕೆ ಷುರು ಮಾಡಿದ್ದಾರೆ. ಹೀಗಾಗಿ ಒಂದು ಕಡೆ ಸರ್ಕಾರದ ಆದಾಯ ಕಡಮೆಯಾಗಿ ಮತ್ತೊಂದು ಕಡೆ ನಮ್ಮ ಜನಗಳ ಆರ್ಥಿಕಾಭಿವೃದ್ಧಿಯೂ ಆಗಿಲ್ಲ. ಜನಗಳ ಆರೋಗ್ಯ ಉತ್ತಮವಾಗಿಲ್ಲ, ಕೆಡುತ್ತಿದೆ. ಸಂಸ್ಥಾನಾದ್ಯಂತ ಪಾನನಿರೋಧವನ್ನು ಯಶಸ್ವಿಗೊಳಿಸಲು ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಅದು ಏನು ಕೆಲಸ ಮಾಡುತ್ತಿದೆಯೋ ನನಗಂತೂ ಅರ್ಥವಾಗುತ್ತಿಲ್ಲ. ಆ ಸಮಿತಿಯು ದಕ್ಷತೆಯಿಂದ ಕೆಲಸ ಮಾಡುವಂತೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾ ಇದ್ದಾರೋ ಇಲ್ಲವೋ, ಅದು ಸಭೆ ಸೇರುತ್ತದೆಯೋ ಇಲ್ಲವೋ ಎಂದು ನನಗೆ ಅನುಮಾನವಾಗಿದೆ. ಶಕ್ತಿ ಇದ್ದಲ್ಲಿ ಪೂರ್ಣ ಪಾನನಿರೋಧ ಮಾಡಲು ಪ್ರಯತ್ನಿಸಬೇಕು. ಹಾಗೆ ಸಾಧ್ಯವಿಲ್ಲದಿದ್ದರೆ ನನ್ನ ಒಂದು ಸಲಹೆಯನ್ನು ಪರಿಶೀಲಿಸಲಿ ಎಂದು ಹೇಳುತ್ತೇನೆ. ಆ ಬಾಬಿನಲ್ಲಿ ಬರತಕ್ಕ ಹಣ ಅಷ್ಟು ಒಳ್ಳೆಯದಲ್ಲ. ಅದನ್ನು ಉಪಯೋಗಿಸಬಾರದು ಎಂದು ಹೇಳುವುದರಲ್ಲಿ ಏನೂ ಅನುಮಾನವಿಲ್ಲ. ಟಾಡಿ ಏನಿದೆ ಅದನ್ನು ಯಾರು ಬೇಕಾದರೂ ಕುಡಿಯಲಿ ಎಂದು ಫ್ರೀ ಲೈಸನ್ಸ್ ಮಾಡಿದರೆ ಬಹುಶಃ ಕಳ್ಳಭಟ್ಟಿ ಸಾರಾಯಿ ಇಳಿಸುವುದು ನಿಂತುಹೋಗಬಹುದು. ಆದ್ದರಿಂದ ಕುಡಿಯುವ ಜನಗಳಿಗೆ ತೊಂದರೆಯಾಗುವುದಿಲ್ಲ. ಟಾಡಿ ದೇಹಕ್ಕೆ ಅಷ್ಟು ಕೆಟ್ಟ ಮಾದಕ ವಸ್ತುವಲ್ಲ ಎಂದು ತಿಳಿಯುತ್ತೇನೆ. ಟಾಡಿಯನ್ನು ಬಿಟ್ಟುಬಿಡಿ, ಬಾಕಿ ಮಾದಕ ವಸ್ತುಗಳ ಮೇಲೆ ಹೆಚ್ಚಿನ ತೆರಿಗೆ ಹಾಕಿ; ಅವುಗಳ ಮೇಲೆ ಹೆಚ್ಚಿನ ನಿರ್ಬಂಧವನ್ನು ಹಾಕಿ. ಆಗ ಹೆಚ್ಚಿನ, ಉತ್ತಮ ದರ್ಜೆಯಲ್ಲಿ ವ್ಯವಸ್ಥೆ ನಡೆಸುವುದಕ್ಕೆ ಅವಕಾಶವಾಗುತ್ತದೆ. ಜನಗಳು ಎಕಾನಮಿಕ್ ಸ್ಟ್ಯಾಂಡರ್ಡ್ ಕಡಮೆ. ಹಾಗಿದ್ದರೂ ಜನಗಳಿಂದ ವಸೂಲು ಮಾಡತಕ್ಕ ತೆರಿಗೆ ಜಾಸ್ತಿಯಾಗಿದೆ. ಈ ನನ್ನ ಸಲಹೆಗಳನ್ನು ಸರ್ಕಾರದವರು ಸೂಕ್ತ ರೀತಿಯಲ್ಲಿ ಪರಿಶೀಲಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Sri M. C. NARASIMHAN.—Mr. Speaker, Sir, as I have got seven points to be dealt with, I shall be very brief in my remarks.

Firstly, talking about stamp duty, I have already submitted the other day that stamp duties are designed to see that justice is denied to the common man. It is supported on the plea that the cost of administration of justice must be met by the revenue out of stamp duty. This is really a retrograde principle, especially when we are declaring that our goal is a Welfare State, let alone a Socialist State. Even a *laissez faire* State will not think in terms of recovering the entire cost of administration of justice from out of the stamp duty. Even if you look to the past history, you will find that it is nowhere admitted as a sound principle that the cost of administration of justice should be recovered from stamp duty. Administration of justice is one of the most elementary and primary duties of any State, even of the most irresponsible and dictatorial State. When we are declaring that our goal is a Welfare State, I cannot understand how this principle can be advocated. On the contrary, I feel that there is a case for reduction of stamp duties and for enlarging the scope of exemption. So far as the lower income group is concerned, I have already made a suggestion the other day and I do not wish to refer to it again.

The other question is about registration fees. The Taxation Enquiry Commission has suggested that it should be on the basis of service at cost. So far as registration is concerned, we are actually earning about Rs. seven crores. Where is the sanctity for the Taxation Enquiry Commission's principle ? We draft in the name of the Taxation Enquiry Commission and of Dr. John Mathai, etc.

Sri T. MARIAPPA (Minister for Finance).—Is it Rs. seven crores ?

Sri M. C. NARASIMHAN.—I am sorry. It is about Rs. 21 lakhs minus 13·5 lakhs. The Taxation Enquiry Comission definitely said that it should be service at cost. Are we having service at cost? If we compare the figures of the old Mysore State, it will be seen that the cost of administration under this head was Rs. 5·7 lakhs. The cost of administration has more than doubled in new Mysore but the revenues have not doubled. I do not understand how this can be squared up.

Sri T. MARIAPPA.—If the Hon'ble Member speaks so rapidly, it will be difficult for us to follow him.

Sri M. C. NARASIMHAN.—If the Hon'ble Minister can persuade the Speaker to give me more time, I shall be slow. As it is, I have to cover seven points. Even the suggestion to split the Demand into two was not agreed to. Therefore, I have to be rather fast.

Coming to the Betting Tax, it has been changed so often. The present revenues are far less than what they were before. I think we were getting nearly Rs. 18 and odd lakhs, but now there is a reduction in the revenue. I think even when the rate of tax was also the same some time previously and yet there is a considerable fall in revenue.

So far as Entertainment Tax and all those items coming under that head including Show Tax are concerned, I may bring to the notice of the Hon'ble Minister concerned, that there are so many cases where stamps are not properly affixed as a result of which there is loss of revenue. So far as the Show Tax is concerned, it has been discussed quite often and it has been pointed out that the principle of taxing the seat and not the revenue from the cinema show is a retrograde one and is not based on sound principle. Whatever may be the justification, it is not a sound principle, for the simple reason that we are not taxing revenue but inanimate things like seats.

So far as the old Mysore State was concerned, the sales tax realisation was only 75 per cent of the demand. What is the reason for this said state of affairs? Why is it that we are not able to recover at least 80 per sent of the tax due? There is a proportionate deterioration in the earnings so far as sales tax is concerned. One reason I might advance for this sad state of affairs is the inability, refusal and unwillingness of the Government to proceed against the tax defaulters.

Another aspect which should be borne in mind—and that applies to income tax legislation also is that there must be a separate category of sales tax machinery. What are we doing now? The revenue officers are transferred to sales tax administration. This leads to a lot of confusion. Secondly, there is necessity for strengthening the Intelligence Section in regard to sales tax if that is possible. Since it is purchase at one point and sale at another point, we must devise some counter-checks of the type enunciated by prof. Nicolos Kaldor in relation to income tax. I am not going into the details. I am only making a suggestion. I would submit that, so far as the people in charge of the administration of sales tax are concerned, their pay scales should be so fixed as to enable them not to fall victims to the blandishments of traders

Then, I come to the Electricity Duty, There is a lot of agitation against the implementation of the Thacker Committee Report. One of them was about fixing the levy on the basis of rated horse power instead of on the actual consumption. It might be all right if it is levied in the case of new users to whom notice has been given. But if it is insisted upon to switch over to the rated horse power in the case of those who had hitherto been charged on some other basis it becomes very difficult. So, the levy ought to be changed.

I now come to the pet subject of prohibition. When we take up the question of prohibition for discussion, it becomes a bit difficult because emotional and *a priori* considerations are advanced which are irrelevant for any objective and rational discussion. Particularly, Gandhiji's name is brought in by Congressmen. The difficulty really is, are they prepared to follow what all Gandhiji said? I shall recall

(SRI M. C. NARASIMHAN)

one particular instance where he was prepared to correct when it was shown to him that the policy advocated by him was leading to the defeat of the purpose of that very policy. Gandhiji was prepared to acknowledge "Himalayan blunders". In 1937-38, so far as the satyagraha against the Sardar Veerwala in Rajkot was concerned, did he not not come forward and say that it was a Himalayan blunder? Now, are the Congressmen prepared to acknowledge Himalayan blunders when these are shown to them on the basis of facts, enquiry reports and all that? Rajkumari Amrit Kaur has come out with a statement for repealing prohibition. Incidentally, Congress people say that prohibition is going to increase the morale of the people. But take the statement of Smt. Rajkumari Amrit Kaur. She did not come out with the truth all these seven years during which period she was a Minister at the Centre and she was forced to suppress the truth. If this is so in the case of veteran Gandhiite like Smt. Amrit Kaur what is the fate of the ordinary labourer in Kolar Gold Fields?

SRI N. RACHIAH (Hunsur-Scheduled Castes).—On a point of order, Sir. The Hon'ble Member is referring to an Hon'ble Member belonging to the Parliament Congress Party who has opposed the prohibition policy. I may bring to your kind notice, Sir, that it is the accepted policy of the Congress both at the Centre and in the States that prohibition should be introduced in the best interests of the moral, economic and educational uplift of the country. I may also bring to the notice of the Chair . . .

MR. SPEAKER.—I cannot allow it.

SRI N. RACHIAH.—He is referring to the Kerala Government but even in Kerala . . .

MR. SPEAKER.—I cannot allow it.

SRI M. C. NARASIMHAN.—I shall answer all the points. The other day, one member was suggesting that the punishment must be increased. In China, prior to Communists coming to power, those who were opium addicts it appears were shot down. Is it being suggested by Congressmen that this sort of punishment should be brought into force here? It is admittedly a suggestion born out of despair, born out of failure of a social reform. If not the increase of a penal punishment could have been suggested by Congress Members. I do not think Gandhiji would have countenanced the suggestion to increase the penal punishment. Sir, this suggestion of increasing the penalty looks to me rather strange Death penalty to the dog for its crooked tail cannot straighten the tail. No single Enquiry Committee which has gone into this question has supported the view that prohibition is a success. There was an Enquiry Committee in Madhya Pradesh in 1950-51; in Andhra in 1954; then again in the United Provinces at the instance of the Prime Minister Pandit Jawaharlal Nehru there was a fact-finding Committee report. What did all these Reports say? Did they say that it was a success? Every one of them without a single exception said that prohibition was a total failure. The other day, the Hon'ble Home Minister has spoken in Chitaldrug saying that it was a failure. He was prepared to admit it.

SRI C. M. POONACHA.—I am afraid my friend is misquoting me.

SRI G. SIVAPPA (Chitaldrug).—The Hon'ble Member has referred to the speech made by the Home Minister at Chitaldrug. I was there and I can say that he has not stated that prohibition has failed. He is making an incorrect statement.

SRI M. C. NARASIMHAN.—Sir, I am not a Congressman, and so I did not attend that meeting. But it has appeared in Tai Nadu which is a paper of the Congress Party. Coming to the next argument advanced that prohibition leads to economic uplift, does it really lead to economic uplift? No, the contrary is the truth. The Bombay School of Economic and Sociology made a through sociological study in 1951-52. There are facts given by them. Nearer home, in Dharwar and in Thana they have made investigations. The average debt of an addict family was Rs. 357; whereas in the case of a non-addict

family, the average debt was Rs. 498. The average income of an addict family was Rs. 1,376 ; but the average income of a non-addict family was Rs. 982. The Agricultural Enquiry Committee with which I am rather familiar also have come to the same conclusion. So far as the loss of revenue all over India in the First Five Year Plan period was concerned, it was of the order of Rs. 120 crores. Is this a small revenue to be lightly treated and ignored ? They urge in the name of the poor people that prohibition should be continued. In the name of helping a few poor people, taxes are introduced on a larger number of poor people. One must have an elastic conscience to say that it helps the poor while imposing taxes on those very poor in order to make good the very deficit due to revenue losses consequent on prohibition. My suggestion is scrap prohibition or hold an enquiry into the whole affair.

Sri G. SIVAPPA.—What has Kerala done ? Have they abolished prohibition ?

Sri M. C. NARASIMHAN.—If the Hon'ble Minitter is prepared to follow Kerala in every respect, I am prepared to submit what all Kerala has done. You definitely said that you were not prepared to follow Kerala.

Sri T. MARIAPPA.—There is nothing new in Kerala.

Sri M. C. NARASIMHAN.—An economic argument is advanced that the moneys spent on liquor could be used for productive purposes when there is prohibition. It has not succeeded in an under-developed economy. The amount of money spent on liquor cannot be transferred. I need not go into the other aspects of how it is a total failure. There is illicit distillation on a large scale in Kolar Gold Fields.

My own personal experience is that it is a total failure. Nowhere in the State was there a better opportunity for prohibition to suceced than in Kolar Gold Fields. It is a small area with the most efficient police. Yet it has failed there. In Madhya Pradesh in a town called Buldhana prohibition was withdrawn. I do not know why such a concession should not be shown in respect of a town like Kolar Gold Fields where production is affected adversely. When prohibition was withdrawn in Buldhana, in United Provinces, the Congressmen there did not protest against it. They kept quiet. Even the A.I.C.C. did not say anything about it. The Home Minister wants us to wait for the next generation to see its fruits. Another Home Minister may come and say that we have to wait for the generation next. What a tragedy we are in for ? Congressmen say that prohibition is going to lead to economic upliftment and all that sort of thing. But still, we have to wait for another generation. Then somebody else might come and say that we have to wait for the next generation. Article 47 of the Constitution is also drawn in for the purpose of justifying prohibition. I must say that in the Directive Principles there are a number of other directives which the State has not accepted or has not implemented. There is the directive principle regarding living wage. What has been done in regard to that ? The State refuses to implement the same. Article 47 was designed with a view to promote public health. It was not done with a view to promote morals. You cannot legislate for morals. Even when Cromwell was prepared to push those who were drnink and addicts, he was not prepared to close down liquor shops. He permitted liquor shops to continue but at the same time he was for penal punishment against offenders. This only means that you cannot legislate for virtue. That is exactly what is being attempted by Congressmen in pursuit of the will-O'-the wisp of prohibition.

Sri K. MALLAPPA (Mercara).—My friend Sir Narasimhan was referring to China. I want to ask him whether opium eating has been legalised

Sri M. C. NARASIMHAN.—So far as China is concerned, I cannot give any information since I have not gone there and since the Home Minister has denied me a passport. Prior to Communist regime in China, they used to shoot down the opium eaters.

*ಶ್ರೀ ಕೆ. ಎಲ್. ನರಸಿಂಹಯ್ಯ (ಹೆಬ್ಬೂರು).—ಸ್ವಾಮಿ, ವಾಹನಗಳ ಮೇಲಿನ ತೆರಿಗೆಗಳ ವಿಚಾರದಲ್ಲಿ ಮೊದಲನೆಯದಾಗಿ 17,83,500 ರೂಪಾಯಿಗಳ

(ಶ್ರೀ ಕೆ. ಎಲ್. ನರಸಿಂಹಯ್ಯ.)

ಡಿಮ್ಯಾಂಡ್ ಏನಿದೆ ಅದನ್ನು ಅನುಮೋದನೆ ಮಾಡುತ್ತಾ ಎರಡು ವಿಷಯಗಳನ್ನು ಹೇಳಬೇಕೆಂದು ನಾನು ನಿಂತಿದ್ದೇನೆ. ಮೊದಲು ವಾಹನಗಳ ವಿಚಾರದಲ್ಲಿ ಪ್ರತಿಯೊಂದು ಜಿಲ್ಲೆಗೂ ಕೂಡ ಆರ್. ಟಿ. ಎ. ಸಮಿತಿಯೊಂದಿತ್ತು. ಈಗ ವಿಲೀನೀಕರಣವಾದ ಮೇಲೆ ಮೂರು ಜಿಲ್ಲೆಗಳನ್ನು ಒಟ್ಟಿಗೆ ಸೇರಿಸಿ ಒಂದು ಆರ್. ಟಿ. ಎ. ಸಮಿತಿಯನ್ನು ಹೊಸದಾಗಿ ಮಾಡಿದ್ದಾರೆ. ಹಾಗೆ ಮಾಡಿರುವ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಅಂತಹದೊಂದಿದೆ. ಚಿತ್ರದುರ್ಗ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಿಂದ ಎಲ್ಲರೂ ಬೆಂಗಳೂರಿನಲ್ಲಿರುವ ಆಫೀಸಿಗೆ ಬರಬೇಕಾಗಿದೆ. ಅಲ್ಲಿ ಕುಡಿಯುವುದಕ್ಕೆ ಸ್ವಲ್ಪ ನೀರು ಸಹ ಇಲ್ಲದಿರುವ ಕಡೆ ಆಫೀಸಿದೆ. ಅಲ್ಲಿಗೆ ಹೋಗುವ ಜನರಿಗೆ ಅಸಾಧ್ಯವಾದ ತೊಂದರೆಯಿದೆ. ಅಧಿಕಾರವನ್ನು ವಿಕೇಂದ್ರೀಕರಣ ಮಾಡುತ್ತೇವೆಂದು ಒಂದು ಕಡೆ ಹೇಳುವುದು ಇನ್ನೊಂದುಕಡೆ ಎಲ್ಲ ಅಧಿಕಾರವನ್ನೂ ಒಂದೇಕಡೆ ಕೇಂದ್ರೀಕೃತಮಾಡುವುದು, ಈ ತತ್ತ್ವ ಸರಿಯಲ್ಲ. ಅಧಿಕಾರವನ್ನು ವಿಕೇಂದ್ರೀಕರಣ ಮಾಡಿದರೆ ಬರುವ ಆದಾಯ ಜಾಸ್ತಿಯಾಗಲು ಅವಕಾಶವಿದೆ. ಈಗ ಉದಾಹರಣೆಗೆ ಒಂದು ಬಸ್ಸು 80 ಮೈಲಿ ಒಂದು ದಿವಸಕ್ಕೆ ಓಡಾಡಿದರೆ ಸೀಟಿಂಗ್ ಛಾರ್ಜ್ ಇಷ್ಟು ಎಂದಿದೆ. 160 ಮೈಲಿ ಓಡಾಡಿದರೂ ಅದಕ್ಕೂ ಅಷ್ಟೇ ಛಾರ್ಜ್ ಇದೆ. ನಮ್ಮ ಸಂಸ್ಥಾನದಲ್ಲಿ ಬೇಕಾದಷ್ಟು ಖಾನಗಿ ಬಸ್ಸುಗಳು ಓಡಾಡುತ್ತಿವೆ. ಎಲ್ಲಕ್ಕೂ ಒಂದೇ ದರವಿದೆ. ಅದನ್ನು ಒಂದು ರೀತಿ ಬದಲಾವಣೆ ಮಾಡಿ 80 ಮೈಲಿಗಳಿಗಿಷ್ಟು, 160 ಮೈಲಿ ಓಡಾಡುವುದಕ್ಕಿಷ್ಟು ಎಂದು ಗೊತ್ತುಮಾಡಿದರೆ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತದೆ.

12 NOON

ಇದರಿಂದ ಆದಾಯ ಬರುವುದರಲ್ಲಿ ಏನೂ ಸಂದೇಹವಿಲ್ಲ. ದುಡ್ಡು ಇಲ್ಲವೆಂದು ಹೇಳುವುದಕ್ಕೆ ಏನೂ ಕಾರಣವಿಲ್ಲ. ಜಿಲ್ಲೆಗೆ ಒಂದೊಂದು ಕಮಿಟಿಯನ್ನು ಮಾಡಿದರೆ ಒಳ್ಳೆಯದು. ನಿನ್ನೆಯ ದಿವಸ ನನ್ನ ಮಾನ್ಯ ಸ್ನೇಹಿತರಲ್ಲೊಬ್ಬರು ಡಿವಿಜನಲ್ ಕಮಿಷನರ್ ಆಫೀಸನ್ನು ರದ್ದುಮಾಡಬೇಕೆಂದು ಹೇಳಿದರು. ಜಿಲ್ಲೆಗೆ ಒಂದೊಂದರಂತೆ ಕಮಿಟಿಗಳನ್ನು ರಚಿಸದೆ ಹೋದರೆ ಜನಗಳಿಗೆ ಬಹಳ ಕಷ್ಟವಾಗುತ್ತದೆ. ಈಗ ಸಾಮಾನ್ಯವಾಗಿ ಚಿತ್ರದುರ್ಗ ಜಿಲ್ಲೆಯಿಂದ 120 ಮೈಲಿಯಲ್ಲಿರುವ ಬೆಂಗಳೂರಿಗೆ ಬಂದು ಎರಡು ದಿವಸಗಳೋ, ಮೂರು ದಿವಸಗಳೋ ಇಲ್ಲಿ ಕಾದು ಲೈಸನ್ಸ್ ಪಡೆಯಬೇಕಾದರೆ ಬಹಳ ಕಷ್ಟ. ಏನೋ ಮದುವೆಯ ಕಾರ್ಯವೆಂದು ಹೇಳಿದರೆ ಅಂತಹ ಕಾಲದಲ್ಲಿ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿಗೆ ಲೈಸನ್ಸ್ ಕೊಡಲು ಅವಕಾಶವನ್ನು ಕೊಟ್ಟಿದ್ದಾರೆ. ಅದು ಸಾಲದು. ಇನ್ನು ಬೆಂಗಳೂರು ವಿಚಾರವಾಗಿ ಹೇಳುತ್ತೇನೆ. ಇಲ್ಲಿನ ಅಧಿಕಾರಿಗಳು ಟೆಕ್ನಿಕಲ್ ಎಕ್ಸ್‌ಪೀರಿಯನ್ಸ್ ಇರುವವರಾಗಬೇಕು. ಇಲ್ಲದಿದ್ದರೆ ಕೆಲಸ ಚೆನ್ನಾಗಿ ನಡೆಯುವುದಿಲ್ಲ. 20-30 ಸಾವಿರ ರೂಪಾಯಿಗಳನ್ನು ತಂದು ಪರ್ಮಿಟ್ ತೆಗೆದುಕೊಂಡು ಹೋಗುವುದು ಕಷ್ಟವಾಗುತ್ತದೆ. ಆದ್ದರಿಂದ ಜಿಲ್ಲೆಗೆ ಒಂದರಂತೆ ಬಸ್ ಪರ್ಮಿಟ್ಟುಗಳನ್ನು ಕೊಡುವ ಆಫೀಸನ್ನು ಏರ್ಪಾಡು ಮಾಡಬೇಕು. ಈಗ ಪ್ರೈವೇಟ್ ಬಸ್ಸುಗಳು ಎಷ್ಟೋ ಓಡಾಡುತ್ತಿವೆ. ಆ ಬಸ್ಸುಗಳು ಓಡಾಡುವುದಕ್ಕೆ ತಕ್ಕಂತೆ ತೆರಿಗೆಯನ್ನು ವಿಧಿಸುತ್ತಾ ಇಲ್ಲ. ಇನ್ನು ಸ್ಪೆಷಲ್ ಟ್ರಿಪ್‌ಗಳನ್ನು ಓಡಿಸುತ್ತಾರೆ. ಇದರಿಂದ ಸರ್ಕಾರಕ್ಕೆ ಉತ್ಪತ್ತಿ ಬರುವುದು ಕಡಮೆ. ಇದಕ್ಕೆ ರೋಡ್ ಸೆಸ್ ಇಲ್ಲ. ಇದನ್ನು ನಿಗದಿ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇನ್ನು ಸರ್ಕಾರೀ ಬಸ್ಸುಗಳ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಇದಕ್ಕೆ ಒಂದು ಕಾರ್ಪೊರೇಷನ್ನನ್ನು ಮಾಡಬೇಕೆಂದು ಹೇಳುತ್ತಿದ್ದಾರೆ. ಅದನ್ನು ಎಂದು ಮಾಡುತ್ತಾರೋ, ಅದನ್ನು ನೋಡತಕ್ಕ ಭಾಗ್ಯ ನಮಗೆ ಇದೆಯೋ ಇಲ್ಲವೋ ಎನ್ನುವ ಅನುಮಾನವಿದೆ. ಈಗ ಟ್ರಾನ್ಸ್‌ಪೋರ್ಟನ್ನು ಕಾರ್ಪೊರೇಷನ್ನಾಗಿ ಮಾಡುತ್ತೇವೆ ಎಂದು ಹೇಳುತ್ತಾರೆ. ಅದರ ಈಗಿನ ಆಡಳಿತದ ಕ್ರಮವನ್ನು ನೋಡಿದರೆ, ಇನ್ನೆಷ್ಟು ದಿವಸಗಳೊಳಗೆ ಸರಿಹೋಗುತ್ತದೋ ನೋಡಬೇಕು ಎಂದು ನನಗನ್ನಿಸುತ್ತದೆ. ಈಗ ಹೊಸದಾಗಿ ಡಿವಿಷನಲ್ ಮ್ಯಾನೇಜರ್ ಆಫೀಸುಗಳನ್ನು ಮಾಡಿದ್ದಾರೆ. ಎರಡು ಡಿವಿಷನಲ್ ಮ್ಯಾನೇಜರುಗಳ ಹುದ್ದೆಗಳನ್ನು ಕೊಟ್ಟಿದ್ದಾರೆ. ಅವರು ಒಂದು ಕಡೆ ಮ್ಯಾನೇಜರಾಗಿ ಕೆಲಸಮಾಡುವುದು, ಇನ್ನೊಂದು ಕಡೆ ಟ್ರಾಫಿಕ್ ಸೂಪರ್‌ವೈಜರಾಗಿ ಕೆಲಸಮಾಡುವುದು, ಇದರಿಂದ ಸ್ವಲ್ಪಮಟ್ಟಿಗೆ ಅತೃಪ್ತಿ, ಅಸಮಾಧಾನವುಂಟಾಗಿ ಕೆಲಸ ಚೆನ್ನಾಗಿ ಆಗುತ್ತಿಲ್ಲ. ಆದ್ದರಿಂದ ಡಿವಿಜನಲ್ ಮ್ಯಾನೇಜರ ಹುದ್ದೆಗಳನ್ನು ಕೂಡಲೇ ಮಾಡಲು ತಕ್ಕ ವ್ಯವಸ್ಥೆ ಮಾಡಬೇಕು. ಈಗ ಬಸ್ಸುಗಳಲ್ಲಿ ಆಗುತ್ತಿರುವ ಓವರ್‌ಲೋಡಿಂಗನ್ನು ತಪ್ಪಿಸುವುದಕ್ಕೋಸ್ಕರ ಬಹಳ ಪ್ರಯತ್ನಪಟ್ಟಿದ್ದಾರೆ. ಅದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ಆದರೆ ಸರ್ಕಾರದ ಬಸ್ಸುಗಳಲ್ಲಿ ಪ್ರಯಾಣ ಮಾಡುವವರ ಕಷ್ಟವನ್ನು ನಾನು ನೋಡಿದ್ದೇನೆ. ಮಂತ್ರಿವರ್ಯರು ಯಾವಾಗಲಾದರೂ ಮರೆಮಾಚಿಕೊಂಡು ಬಸ್ಸಿನಲ್ಲಿ ಸಂಚಾರ ಮಾಡಿದರೆ ಅಲ್ಲಿ ಎಷ್ಟು ಕಷ್ಟವಿದೆಯೆಂಬುದು ಗೊತ್ತಾಗುತ್ತದೆ. ಯಾವಾಗಲಾದರೂ ಒಬ್ಬ ಪ್ರಯಾಣಿಕ ಒಂದು ಹಾಸಿಗೆಯನ್ನೋ, ಒಂದು ಟ್ರಂಕನ್ನೋ ಅಥವಾ ಸಾಮಾನುಗಳನ್ನೋ ತೆಗೆದುಕೊಂಡುಹೋದರೆ ಅವನ್ನು ತೂಕ ಮಾಡಬೇಕು. ಒಂದು ಪೌಂಡ್ ಏನಾದರೂ ಜಾಸ್ತಿ ಇದ್ದರೆ ಅದಕ್ಕೆ ದುಡ್ಡು ಕೊಡಬೇಕು. ದಯವಿಟ್ಟು ಇಂತಹ ಕಿರುಕುಳವನ್ನು ಜಾಗ್ರತೆ ತಪ್ಪಿಸಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ. ಪ್ರೈವೇಟ್ ಬಸ್ಸುಗಳು ಸಂಚಾರಮಾಡುವ ಕಡೆಗಳಲ್ಲಿರುವ ರಸ್ತೆಗಳು ಸರಿಯಾಗಿಲ್ಲವಾದ್ದರಿಂದ ಪ್ಯಾಸೆಂಜರುಗಳಿಗೆ ಬಹಳ ತೊಂದರೆಯಾಗಿದೆ. ಪೋಲೀಸ್ ಅಧಿಕಾರಿಗಳು, ಎಗ್ಸಿಕ್ಯೂಟಿವ್ ಆಫೀಸರುಗಳು, ಇಂಜನಿಯರುಗಳು ತಿರುಗಾಡುವ ಕಡೆ ಲೈಸನ್ಸ್ ಕೊಡಬಹುದು ಎಂದು ಕಮಿಟಿಯೊಳಗೆ ಹೇಳುತ್ತಾ ಇದ್ದುದನ್ನು ನಾನು ಕೇಳಿದ್ದೇನೆ. ಡಿಸ್ಟ್ರಿಕ್ಟು ಬೋರ್ಡಿನಿಂದ ನಿರ್ಮಿತವಾದ ರಸ್ತೆಗೆ ಸರಿಯಾದ ಮೇಂಟನೆನ್ಸ್ ಇಲ್ಲದೇ ಹೋದರೆ, ಬಸ್ ಓಡಾಡುವ ರಸ್ತೆ ಶೀಘ್ರದಲ್ಲಿಯೇ ಕೆಟ್ಟುಹೋಗುತ್ತದೆ. ಡಿಸ್ಟ್ರಿಕ್ಟು ಬೋರ್ಡಿಗೆ ಕೊಡುವ ಫಂಡ್ಸನ್ನು ಕೊಡದಿರುವುದರಿಂದ ರಸ್ತೆಗಳು ಹಾಳಾಗಿ ಹೋಗಿವೆ. ಸರ್ಕಾರದವರು ಕೊಡತಕ್ಕ ಫಂಡ್ಸಿನಿಂದ ಜಿಲ್ಲಾಬೋರ್ಡಿನ ರಸ್ತೆಗಳನ್ನೂ, ಮುನಿಸಿಪಲ್ ರಸ್ತೆಗಳನ್ನೂ, ಕಾರ್ಪೊರೇಷನ್ ರಸ್ತೆಗಳನ್ನೂ ಸರಿಪಡಿಸಬೇಕೆಂದು ಹೇಳಿದ್ದಾರೆ. ಆದರೆ ನಮ್ಮ ಸ್ನೇಹಿತರಿಗೆ ಗ್ರಾಮಪಂಚಾಯಿತಿ ಬೋರ್ಡಿನ ರಸ್ತೆಗಳು ಕಣ್ಣಿಗೆ ಕಾಣಲಿಲ್ಲವೆಂದು ಕಾಣುತ್ತದೆ. ಏಕೆಂದರೆ ಅವರು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸಿನಿಂದ ಬಂದವರು. ನಾನಾದರೋ ಗ್ರಾಮಪಂಚಾಯಿತಿಯಿಂದ ಬಂದವನು. ಪ್ರತಿಯೊಂದು ಗ್ರಾಮದಲ್ಲೂ ರಸ್ತೆಗಳನ್ನು ನಿರ್ಮಾಣ ಮಾಡಬೇಕು. ಜನಗಳು ರಸ್ತೆಯ ಪಕ್ಕದಲ್ಲಿ ಬೆಳಗಿ

ನಿಂದ ಸಂಜೆಯವರೆಗೂ ಕಾದುಕೊಂಡು ಕುಳಿತರೂ ಬಸ್ಸುಗಳಲ್ಲಿ ಸೀಟುಗಳು ಸಿಕ್ಕುವುದೇ ಕಷ್ಟ. ಕುಳಿತುಕೊಳ್ಳುವುದಕ್ಕೆ ಸರಿಯಾದ ಸ್ಥಳಾನುಕೂಲವಿಲ್ಲ. ಬಸ್ ಷೆಲ್ಟರ್‌ಗಳನ್ನು ಪ್ರತಿಯೊಂದು ಬಸ್ ನಿಲ್ದಾಣದಲ್ಲಿಯೂ ಕಟ್ಟಿಸಿಕೊಡಲು ತಕ್ಕ ವ್ಯವಸ್ಥೆಯನ್ನು ತೀವ್ರವಾಗಿ ಕೈಕೊಳ್ಳಬೇಕು. ಹಿಂದೆ ಅದಕ್ಕೆ ಒಂದು ಸ್ಕೀಂ ಇತ್ತು. ಆ ಸ್ಕೀಂ ಈಗ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ಸಂಬಂಧಪಟ್ಟ ಮಾನ್ಯ ಮಂತ್ರಿಗಳು ತಿಳಿಸಿದರೆ ಒಳ್ಳೆಯದು.

ಕಡೆಯದಾಗಿ ಈ ಎಕ್ಸೈಜು ಬಾಬಿನ ವಿಷಯದಲ್ಲಿ ವಿಪುಲವಾಗಿ ಚರ್ಚೆಯಾಗಿದೆ. ಅದರಲ್ಲಿ ನಿಜವಾಗಿಯೂ ಇನ್ನೂ ಹೆಚ್ಚಿಗೆ ಚರ್ಚೆಯಾಗಬೇಕಾದ ಪ್ರಮೇಯವೂ ಇದೆ. ಪ್ರೋಹಿಬಿಷನ್ ವಿಚಾರ ಈಗ ಹೇಗಿದೆಯೆಂದರೆ—ಒಂದುಕಡೆ ಮೀಸೆ ಇಟ್ಟುಕೊಂಡಿರುವುದು, ಇನ್ನೊಂದು ಕಡೆ ಮೀಸೆ ಬಿಟ್ಟಿರುವುದು—ಆಗಿದೆ. ಇದನ್ನು ಪೂರ್ತಿಯಾಗಿ ತೆಗೆಯುವುದಕ್ಕೆ ಏನು ಕಷ್ಟವಿದೆ? ಸರ್ಕಾರದಲ್ಲಿ ಈ ವಿಷಯ ಪ್ರತಿ ವರ್ಷವೂ ಅಸೆಂಬ್ಲಿಯ ಮುಂದೆ ಬಂದರೆ, ಏನು ಹೇಳುತ್ತಾರೆಯೆಂದರೆ, ಮುಂದಿನ ವರ್ಷ ಯೋಚನೆಮಾಡೋಣ, ಎಂದು ಹೇಳುತ್ತಾರೆ. ನಾವು ಈಗಲಾದರೂ ಧೈರ್ಯವಾ ಕಾಲು ಇಡೋಣ. ಪಾನನಿರೋಧವನ್ನು ಸಂಪೂರ್ಣವಾಗಿ ತೆಗೆದುಹಾಕೋಣ. ಈಗ ತೆರಿಗೆಗಳನ್ನು ಜಾಸ್ತಿ ಮಾಡೋಣ. ಹಣ ಖರ್ಚಾಗುತ್ತದೆ ಎಂದು ಹೆದರಬೇಕಾಗಿಲ್ಲ. ಹಣ ಖರ್ಚು ಮಾಡಿದರೂ ಜನರಿಗೆ ಆದಾಯ ಬರುತ್ತದೆ. ಈ ಪಾನನಿರೋಧವನ್ನು ಇಡೀಯ ಸಂಸ್ಥಾನದಲ್ಲೆಲ್ಲಾ ಜಾರಿಗೆ ತರಬೇಕು. ಒಂದು ವರ್ಷ ಮೂರು ಡಿಸ್ಟ್ರಿಕ್ಟುಗಳಲ್ಲಿ ಜಾರಿಗೆ ತರುವುದು, ಇನ್ನೊಂದು ವರ್ಷ ಒಂದು ತಾಲ್ಲೂಕಿನಲ್ಲಿ ಜಾರಿಗೆ ತರುವುದು, ಈ ರೀತಿ ಮಾಡುವುದು ಸರಿಯಿಲ್ಲ. ಅದನ್ನು ಪೂರ್ತಿಯಾಗಿ ತೆಗೆದುಹಾಕಬೇಕು. ನಮ್ಮ ಸರ್ಕಾರದವರು ಹೆಚ್ಚುಶ್ರಮ ವಹಿಸಿ ಇದನ್ನು ಆದಷ್ಟು ಜಾಗ್ರತೆಯಾಗಿ ಜಾರಿಗೆ ತರುವಂತೆ ವ್ಯವಸ್ಥೆ ಮಾಡಬೇಕು. ಈಗ ಏನಾಗಿದೆಯೆಂದರೆ ಬಡಬಗ್ಗರು ಕುಡಿಯುವುದನ್ನೇ ಬಿಟ್ಟುಬಿಟ್ಟಿದ್ದಾರೆ. ಅಕಲಾಯವಾಗಿ ಓಡಾಡುತ್ತಿರುವವರು ಮದ್ಯಪಾನ ಯಾವ ಜಿಲ್ಲೆಯಲ್ಲಿ ತಯಾರಾಗುತ್ತಿದೆಯೋ ಅಲ್ಲಿ ಹೋಗಿಯಾದರೂ ಕುಡಿಯುತ್ತಾರೆ. ನಮ್ಮ ಬಡ ಬಗ್ಗರು ಇವೊತ್ತಿನ ದಿವಸ ಸುಖವಾಗಿದ್ದಾರೆ. ಹಿಂದುಳಿದ ಪಂಗಡದವರು ಈಗ ಈ ಮದ್ಯಪಾನವನ್ನು ಬಲವಂತದಿಂದ ತಪ್ಪಿಸಿದುದರಿಂದ ಮನೆ ಮಠಗಳನ್ನು ಕಟ್ಟಿಕೊಳ್ಳುವ ಶಕ್ತಿ ನಮಗೆ ಬಂದಿದೆ ಎಂದು ಹೇಳುತ್ತಿದ್ದಾರೆ. ದುರ್ವ್ಯಾಪಾರದಿಂದ ಸಂಪಾದನೆ ಮಾಡಿರುವವರು ಕುಡಿಯುತ್ತಿದ್ದಾರೆ. ಬಡವರು ಕುಡಿಯುತ್ತಾ ಇಲ್ಲ. ಇದು ಬಹಳ ಸಂತೋಷವಾದ ವಿಚಾರ. ಇದರ ಮೇಲೆ ಸುಂಕ ಜಾಸ್ತಿಮಾಡುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಇದರ ವರಮಾನವನ್ನು ತೆಗೆದುಕೊಂಡರೆ ಇವೊತ್ತಿನ ದಿವಸ ಬಡಜನರಿಗೆಲ್ಲಾ ಜಮೀನುಗಳನ್ನು ಅತ್ಯಲ್ಪ ಬೆಲೆಯಲ್ಲಿ ದೊರಕಿಸಿಕೊಡಬಹುದು. ನಾನು ಏನು ಹೇಳುತ್ತೇನೆ ಎಂದರೆ, ಈ ವರ್ಷ ಅಕ್ಟೋಬರ್ 3ನೆಯ ತಾರೀಖಿನೊಳಗೆ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆತರಬೇಕು. ಇಲ್ಲದಿದ್ದರೆ ಮುಂದಿನವರ್ಷ ಅಕ್ಟೋಬರ್ 3ನೆಯ ತಾರೀಖಿನೊಳಗೆ ಸಂಸ್ಥಾನಾದ್ಯಂತ ಪೂರ್ಣವಾಗಿ ಈ ಪಾನನಿರೋಧವನ್ನು ಮೊದಲು ಜಾರಿಗೆ ತರಬೇಕು. ಇದರಲ್ಲಿ ನಮ್ಮ ಸರ್ಕಾರದವರು ಸ್ವಲ್ಪ ಕುಂಟು ಹೆಜ್ಜೆಯನ್ನು ಇಡುತ್ತಿದ್ದಾರೆ. ಈಗ ಸಂಬಳ ಕೊಡುವುದರಲ್ಲಿ ಎರಡು ಸಾವಿರ ಮೂರುಸಾವಿರ ರೂಪಾಯಿಗಳು ಒಬೊಬ್ಬರಿಗೆ ಖರ್ಚಾಗುತ್ತಿದೆ. ಅದು ಕುಂಟು ಹೆಜ್ಜೆ ಇಲ್ಲವೇ? ದೇಶಕ್ಕೆ ಉಪಯೋಗವಾಗುವ ವಿಚಾರದಲ್ಲಿ ನಾವು ಏಕೆ ಕುಂಟಿಕೊಂಡು ಹೋಗಬೇಕು? ಇಡೀಯ ಸಂಸ್ಥಾನದಲ್ಲೆಲ್ಲಾ ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ತಕ್ಕ ಏರ್ಪಾಡನ್ನು ಕೂಡಲೇ ಸರ್ಕಾರದವರು ಮಾಡಬೇಕು. ಸ್ಟೇಟ್ ಲೆವಲ್‌ನಲ್ಲಿ ಒಂದು ಕಮಿಟಿ ಇದೆಯೆಂದು ಹೇಳಿದರು. ಆ ಕಮಿಟಿಯವರು ಎಲ್ಲಾ ಕಡೆಯೂ ಸುತ್ತಿ ಈ ವಿಚಾರದ ಬಗ್ಗೆ ಜನಗಳ ಅಭಿಪ್ರಾಯವೇನೆಂಬುದನ್ನು ತಿಳಿದುಕೊಂಡಿದ್ದಾರೋ ಇಲ್ಲವೋ ಎಂಬ ಅನುಮಾನ ನನಗೆ ಬಂದಿದೆ. ಇಂತಹ ಕಮಿಟಿಗಳಿಗೆ ಪಾನನಿರೋಧದಿಂದ ಜನರಿಗಾದ ಪರಿಣಾಮಗಳನ್ನು ಕಂಡುಹಿಡಿಯುವುದಕ್ಕಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಇದಕ್ಕೆ ಒಂದು ಹೋಲಿಕೆಯನ್ನು ನಾನು ಕೊಡುತ್ತೇನೆ. ಹಿಂದೆ ಆಹಾರದ ರೇಷನ್ನು ಬಂದಿದ್ದ ಕಾಲದಲ್ಲಿ ನಮ್ಮ ಎಷ್ಟೋ ಹಳ್ಳಿಯವರಿಗೆ ರೇಷನ್ನು ಏನೆಂಬುದು ಗೊತ್ತಿರಲಿಲ್ಲ. ಕ್ರಮೇಣ ರೇಷನ್ನಿನಿಂದ ಎಷ್ಟು ಅನುಕೂಲವಾಯಿತು ಎಂಬುದನ್ನು ತಿಳಿದುಕೊಂಡರು. ಹಾಗೆಯೇ ಜನರು ವಿರೋಧವಾಗಿದ್ದಾರೆ ಎನ್ನುವ ನೆಪದಿಂದ ಪಾನನಿರೋಧವನ್ನು ಬಿಟ್ಟು ಹಾಕತಕ್ಕದ್ದು ಸರಿಯಿಲ್ಲ.

ಮಾನ್ಯ ಸ್ನೇಹಿತರು ಗಾಂಜಾ ಗಿಡಗಳನ್ನು ಬೆಳೆಯಲು ಲೈಸನ್ಸನ್ನು ಕೊಟ್ಟಿದ್ದಾರೆ ಎಂದು ಹೇಳಿದರು. ಮಲೆನಾಡಿನಲ್ಲಿ ಕಾಫಿ ಗಿಡಗಳನ್ನು ಬೆಳೆದ ಹಾಗೆ, ನಮ್ಮ ಕ್ಷೇತ್ರದಲ್ಲಿ ಗಾಂಜಾ ಗಿಡಗಳನ್ನು ಬೆಳೆಯುವುದಕ್ಕೆ ಅವಕಾಶವಿದೆ. ಆದರೆ ಇದನ್ನು ಬೆಳೆಯುವುದಕ್ಕೆ ನಮ್ಮ ಕಡೆಗಳಲ್ಲಿ ಕೋತಿಗಳ ಹಾವಳಿ ಹೆಚ್ಚಾಗಿದೆ. ಈ ಕೋತಿಗಳ ಹಾವಳಿಯನ್ನು ತಪ್ಪಿಸಿದರೆ ಈಗ ಬರುತ್ತಿರುವ ಉತ್ಪನ್ನಕ್ಕಿಂತ ಹೆಚ್ಚಿನ ಉತ್ಪನ್ನ ಬರುತ್ತದೆ ಎಂದು ಹೇಳಬಹುದು.

ಕಡೆಯದಾಗಿ ಸ್ಟಾಂಪಿನ ವಿಚಾರವಾಗಿ ಹೇಳಬೇಕೆಂದಿದ್ದೇನೆ. ಈ ಸ್ಟಾಂಪು ಡ್ಯೂಟಿಗಳನ್ನು ಸ್ವಲ್ಪ ಜಾಸ್ತಿ ಮಾಡಬೇಕು. ಹೀಗೆ ಮಾಡುವುದರಿಂದ ಕೋರ್ಟಿಗೆ ಬರುವವರು ಕಡಮೆಯಾಗುತ್ತಾರೆ ಎಂದು ಹೇಳಬಹುದು. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳುತ್ತೇನೆ. ಈಗ ಈ ದರಗಳು ಬಹಳ ಕಡಮೆಯಿರುವುದರಿಂದ, ಬಡ ಜನರಿಗೆ ಅನುಕೂಲವಾಗಿದೆ ಎನ್ನುವ ಮನೋಭಾವ ಬಂದಿದೆ. ಏಕೆಂದರೆ ಸ್ಟಾಂಪಿನ ಖರ್ಚು ಏನೂ ಅಷ್ಟು ಹೊರೆಯಾಗಿಲ್ಲ, ಅದರಿಂದ ಅನುಕೂಲವಾಗುತ್ತದೆ ಎನ್ನುವ ಮನೋಭಾವ ಬರುತ್ತದೆ. ಇದಕ್ಕೆ ತಕ್ಕ ಹಾಗೆ ಈಗ ಇರುವ ಲಾಯರುಗಳೂ ಕೂಡ ಸಹಾಯಕರಾಗಿದ್ದಾರೆ. ಅದರಿಂದ ಅವರಿಗೆ ಕೇಸುಗಳು ಜಾಸ್ತಿಯಾಗಿ ಬರಲನುಕೂಲವಾಗಿದೆ. ಒಂದೊಂದು ವೇಳೆ ಸ್ಟಾಂಪೇನು ಬಹಳ ದುಬಾರಿಯಿಲ್ಲ; ಎಂಟು ಆಣೆ ಅಥವಾ 12 ಆಣೆ ತಾನೇ ಬೀಳುವುದೆಂಬ ಭಾವನೆಯಿಂದ ಬಡ ಜನಗಳೂ ಕೂಡ ಈ ಲಾಯರುಗಳ ಸಹಾಯದಿಂದ ಕೋರ್ಟಿಗೆ ಬರಲನುಕೂಲವಾಗಿದೆ. ಆದರೆ ಈಗ ಈ stamp duty ಯನ್ನು ಜಾಸ್ತಿಮಾಡುವುದರಿಂದ ಬಹುಮಟ್ಟಿಗೆ ಕೋರ್ಟಿಗೆ ಬರುವ ವ್ಯಾಜ್ಯಗಳು ಕಡಮೆಯಾಗುತ್ತವೆ. ಈಗ ಬಳ್ಳಾರಿಯಲ್ಲೇ ಒಂದು ರೀತಿಯಾದ ಸ್ಟಾಂಪಿನ ಕರಗಳಿವೆ; ಮತ್ತು ಇತರ ಕಡೆಗಳಲ್ಲಿ ಬೇರೆ ರೀತಿಯಾಗಿವೆ. ಇವೆಲ್ಲವನ್ನೂ ನೋಡಿ ಈಗ ಒಂದು uniform ಆದ stamp duty ಯನ್ನು ತರಲು ಪ್ರಯತ್ನಿಸಿರುವುದರಿಂದ ಇದನ್ನು ಯಾರೂ ವಿರೋಧಿಸಬಾರದು. ಈ ಕಾರಣ ಇದನ್ನು ಎಲ್ಲರೂ ಒಪ್ಪಬೇಕು ಎಂದು ಹೇಳುತ್ತಿದ್ದೇನೆ.

(ಶ್ರೀ ಕೆ. ಎಲ್ ನರಸಿಂಹಯ್ಯ.)

ಆದರೆ ಈ ಸ್ಟಾಂಪ್‌ಕರದ ವಿಷಯದಲ್ಲಿ ಸೊಸೈಟಿಗಳಿಗೆ exemption ಕೊಡಬೇಕು. ಇವುಗಳಿಗೆ ಹೆಚ್ಚಿನ ಹೊರೆಹಾಕಬಾರದು. ಹೊಸದಾಗಿ ಸಾಲಗಳನ್ನೇನಾದರೂ ತೆಗೆದುಕೊಳ್ಳಲು ಸಾಹುಕಾರರುಗಳ ಹತ್ತಿರ ಹೋದರೆ ಹೆಚ್ಚಿನ ಖರ್ಚುಗಳು ಬರುತ್ತವೆ. ಆದರೆ ಸೊಸೈಟಿಗಳ ಮುಖಾಂತರ ಈಗ ಜನಗಳಿಗೆ ಸಾಲ ದೊರೆಯುವುದರಿಂದ ಬಹಳ ಅನುಕೂಲವಾಗಿದೆ. 1947 ನೆಯ ಇಸವಿಯಿಂದಲೂ ಈ ರೀತಿಯಾಗಿ ಸಾಲಗಳು ಸೊಸೈಟಿಯಿಂದ ದೊರೆಯುತ್ತಿರುವುದರಿಂದ ಬಡ ಜನಗಳಿಗೆ ಬಹಳ ಸಹಾಯವಾಗಿದೆ. ಅದರಲ್ಲೂ ಈಗ ಮೂರು ವರ್ಷಗಳಿಂದೀಚೆಗೆ ಸರಕಾರದಿಂದ ಬೇಕಾದಷ್ಟು ಸಾಲಗಳು ವ್ಯವಸಾಯದ ಖರ್ಚಿಗಾಗಿ ಮತ್ತು ಇತರ ಬಾಬುಗಳಿಗಾಗಿ ದೊರೆಯುತ್ತವೆ ಎಂಬುದು ಜನಜನಿತವಾಗಿದೆ. ಅದರಲ್ಲೂ ಈ ಸೊಸೈಟಿಗಳಿಂದ ಶೇಕಡ 90ರಷ್ಟು ಸಾಲಗಳು ಸಿಕ್ಕುತ್ತಿವೆ. ಆದುದರಿಂದ Stamp Duty ಯನ್ನು ಈ Land Mortgage Bank ಮತ್ತು ಈ Co-operative Society ಗಳಿಗೆ ರಿಯಾಯಿತಿ ದರಗಳನ್ನು ಕೊಡಬೇಕೆಂದು ಸಲಹೆ ಮಾಡುತ್ತಿದ್ದೇನೆ. ಇದರಿಂದ ಸರಕಾರಕ್ಕೆ ಹೆಚ್ಚಿನ ಹೊರೆ ಬೀಳುತ್ತದೆ ಎಂದು ಹೇಳಬಹುದು. ದೇಶಕ್ಕೆ ಒಳ್ಳೆಯದಾಗುವ ಕೆಲಸಕ್ಕೆ ಖರ್ಚು ಹೆಚ್ಚಾದರೂ ಅದನ್ನು ಮಾಡಬೇಕು. ಇದರಿಂದ ಜನಗಳಿಗೆ ಅನುಕೂಲವಾಗುತ್ತದೆ.

ಶ್ರೀ ಟಿ. ಮರಿಯಪ್ಪ.—10 ಲಕ್ಷ ರೂಪಾಯಿಗಳಾಗುತ್ತವೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಹತ್ತು ಲಕ್ಷವಲ್ಲದಿದ್ದರೆ ಇನ್ನು ಹೆಚ್ಚಾದರೂ ಕೊಡಬಹುದು. ಅದೇನೂ ಸರಕಾರಕ್ಕೆ ದೊಡ್ಡದಲ್ಲ. ಆ ರೀತಿ ಮಾಡಿದರೆ ಸಹಕಾರ ಸಂಘಗಳು ಬೆಳೆಯಲು ಅನುಕೂಲವಾಗುತ್ತದೆ. ಈಗ ಈ ಸಂಘಗಳಿಂದ ಸಾಲವನ್ನು ತೆಗೆದುಕೊಳ್ಳುವುದರಿಂದ ಬಡಜನಗಳು ಹೊರಗೆ ಹೋಗುವುದಿಲ್ಲ. ಹೊರಗಡೆ ಸಾಹುಕಾರರುಗಳಿಂದ ಅವರುಗಳಿಗೆ ಹಿಂಸೆಯಾಗುತ್ತದೆ. ಈಗ ಎರಡು ಮೂರು ವರ್ಷಗಳಿಂದಲೂ ಬಹುಮಟ್ಟಿಗೆ ಈ ಸಹಕಾರ ಸಂಘಗಳಿಂದ ಅನುಕೂಲವಾಗುತ್ತಿದೆ. ಅದಕ್ಕಾಗಿ ಈ ಸ್ಟಾಂಪಿನ ಡ್ಯೂಟಿಯನ್ನು ಕಡಮೆಮಾಡಬೇಕೆಂದು ಇರತಕ್ಕ ವಿಚಾರಗಳನ್ನು ಹೇಳುತ್ತಿದ್ದೇನೆ. ಅಲ್ಲದೆ, ಸಹಕಾರ ಸಂಘಗಳು ಸಾಲದ ಮೇಲೆ ಬಹಳ ಸುಲಭ ದರದ ಬಡ್ಡಿಯ ಮೇಲೆ ಸಾಲಗಳನ್ನು ಕೊಡುತ್ತಿವೆ. ಆದರೆ ಹೊರಗಡೆ ಸಾಹುಕಾರರ ಮುಖೇನ ಸಾಲಕ್ಕೆ ಹೋದರೆ ಬಡ್ಡಿಯ ದರವು ಸೊಸೈಟಿಯ ಬಡ್ಡಿದರಕ್ಕಿಂತ ಎರಡು ಮೂರರಷ್ಟು ಹೆಚ್ಚಾಗಿರುತ್ತದೆ. ಆದಕಾರಣ ಈ ರಿಯಾಯಿತಿಯನ್ನು ಈ ಸೊಸೈಟಿಗಳಿಗೆ ಕೊಡಬೇಕಾದುದು ಅಗತ್ಯವಾಗಿದೆ. ಇಷ್ಟನ್ನು ಹೇಳಿ, ಈಗ ಇಲ್ಲಿ ಮಂಡಿತವಾಗಿರುವ ಡಿಮ್ಯಾಂಡುಗಳನ್ನು ಅನುಮೋದಿಸುತ್ತ ನನ್ನ ಭಾಷಣವನ್ನು ಪೂರೈಸುತ್ತೇನೆ.

*ಶ್ರೀ ಬಿ ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮೀ, ನಾನು ಈ ಡಿಮ್ಯಾಂಡನ್ನು ಒಪ್ಪತಕ್ಕದ್ದು ಸಾಧುವಾದುದಲ್ಲ ಎಂದು ಹೇಳುತ್ತ ಇಷ್ಟು ಹಣ ಬೇಕಾಗಿಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಎರಡನೆಯದಾಗಿ ಇವೊತ್ತು ನಮ್ಮ ಮಂತ್ರಿಮಂಡಲದ ಮುಂದೆ ಸರಿಯಾಗಿ ಹೇಳಬೇಕಾದುದನ್ನು ಹೇಳುವುದಕ್ಕೆ ಆಗುವುದಿಲ್ಲ. ದೇಶದ ಕೆಲಸವಿರುವಾಗ ನಾನು ನನ್ನ ಆರೋಗ್ಯಕ್ಕೆ ಹೆಚ್ಚು ಗಮನಕೊಡಬಾರದು ಎನ್ನುವ ದೃಷ್ಟಿಯಿಂದ ನಾನು ಇಲ್ಲಿಗೆ ಬಂದಿದ್ದೇನೆ.

ಅಧ್ಯಕ್ಷರು.—ನಮ್ಮ ಆರೋಗ್ಯವೇನೂ ನಿಮ್ಮ ಕೆಲ ಕ್ಕೇನೂ ಅಡ್ಡಿಬಂದಿಲ್ಲವಲ್ಲ (ನಗು).

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನನ್ನ ಆರೋಗ್ಯವೇ ಮುಖ್ಯವಲ್ಲ. ನಾನು ಈ ದಿನ ಒಂದು ಸೇವಾಮನೋಭಾವದಿಂದ ಈ ಅಸೆಂಬ್ಲಿಗೆ ಬಂದು ನನ್ನ ಕಾರ್ಯಾಚರಣೆಗೆ ಚ್ಯುತಿ ಬರಬಾರದೆಂದು ಸತ್ಯದಿಂದ ಹೇಳುತ್ತ ಇಲ್ಲಿಗೆ ಬರುತ್ತಿದ್ದೇನೆ. ಎರಡನೆಯದಾಗಿ, ನಾವು ಇವತ್ತು ಎಷ್ಟು ಭಾಷಣಮಾಡಿದರೇನು ಈ ಕಡೆಯ ಭಾಷಣಗಳಿಗೆ ಕಿಂಚಿತ್ತಾದರೂ ಫಲ ದೊರಕುತ್ತಿದೆಯೇ, ಅದನ್ನೇನಾದರೂ ಕನ್ಸಿಡರ್ ಮಾಡುತ್ತಾರೆಯೇ ಎಂದರೆ, ಈಚೆಗೆ ಒಂದು ಹಟದ ಮನೋಭಾವದಿಂದಲೋ ಏನೋ ಏನೂ ಲಕ್ಷ್ಯ ಕೊಟ್ಟಿಲ್ಲ. ನಮ್ಮ ಭಾಷಣದಲ್ಲಿ ತಿರುಳಿದೆ, ಅದು ನ್ಯಾಯವಾದುದು ಎಂದು ಕೂಡ ಅವರಿಗೆ ಕಂಡು ಬರುತ್ತದೆ. ಆದರೂ ಕೂಡ ಏನೋ ಒಂದು ರೀತಿಯ "ಮೊಂಡು ಹಟ" ಎಂದು ಹೇಳುತ್ತಾರಲ್ಲ ಹಾಗೆ ನಾವು ಹೇಳಿದ್ದನ್ನು ಒಪ್ಪಿಕೊಂಡರೆ ಅವರ ಆಡಳಿತಕ್ಕೆ ಚ್ಯುತಿ ಬರಬಹುದೇನೋ ಎಂದು ತಿಳಿದಿದ್ದಾರೆ. ಅಲ್ಲದೆ ನಮ್ಮ ಶ್ರೀ ಮರಿಯಪ್ಪಅವರನ್ನು ನಾನು ಬಹು ದಿವಸದಿಂದಲೂ ನೋಡುತ್ತಲೇ ಇದ್ದೇನೆ. ಅವರು More or less progressive ಎಂದು ಹೇಳಬಹುದು. ಅದನ್ನು ನಾನು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದರೂ ಕೂಡ ನಾನು ಒಂದು ಸಲ ಗವರ್ನರ್ ಜನರಲ್ ಆಗಿದ್ದ ಶ್ರೀ ರಾಜಗೋಪಾಲಾಚಾರಿಯವರನ್ನು ಭೇಟಿಮಾಡಬೇಕಾದ ಪ್ರಸಂಗ ಬಂದಿತ್ತು. ಆಗ ನಾನೂ ಮತ್ತು ಶ್ರೀ ಮರಿಯಪ್ಪ ಅವರೂ ಕೂಡ ಹೋಗಿದ್ದಾಗ ನನ್ನ ಮತ್ತು ಅವರ ಮನೋಭಾವ ಹೇಗಿತ್ತು ಎಂದು ಚೆನ್ನಾಗಿ ತಿಳಿದಿತ್ತು. ಆದರೆ ಈಗೇಕೋ ಜನತೆಗೆ ಅವರಿಂದ ಅಷ್ಟು ಪ್ರಯೋಜನ ದೊರೆಯುತ್ತಿಲ್ಲ.

ಈ ದಿವಸ ಈ Prohibition Policy ಎಂದರೆ ಪಾನ ನಿರೋಧದ ವಿಷಯದಲ್ಲಿ ನಾವು ಎಷ್ಟು ಹೇಳಿದರೂ ಸಾಲದು. ನಾವೇನಾದರೂ ಹೇಳಿದರೆ ಸರಕಾರದವರು ಯಾವತ್ತೂ ವಾದಮಾಡುತ್ತಾರೆ ಎಂದು ಹೇಳುತ್ತಾರೆಯೇ ವಿನಾ ಅದಕ್ಕೆ ಸರಿಯಾದ ಕಾರಣವೇನು ಎಂಬುದನ್ನು ಹುಡುಕುವುದಕ್ಕೆ ಹೋಗುವುದಿಲ್ಲ. ಇದರಿಂದ ನಾನು ಎಷ್ಟು ಹೇಳಿದರೂ ಏನೂ ಪ್ರಯೋಜನವಾಗುವುದಿಲ್ಲ. ತತ್ತ್ವವನ್ನೇನೋ ಒಪ್ಪುತ್ತಾರೆ. ಇವೊತ್ತಿನ ದಿನ ಈ ಪ್ರೊಹಿಬಿಷನ್ ನೀತಿಯನ್ನು ಎಲ್ಲಿಯೂ ಕೂಡ ಖಂಡಿತವಾಗಿ ಒಪ್ಪಿದ್ದೇವೆಂದು ಹೇಳುವುದಿಲ್ಲ. ಖಚಿತವಾದ ಒಂದು ನೀತಿಯನ್ನನುಸರಿಸುತ್ತಿಲ್ಲ. ಇದರಿಂದೇನೂ ಪ್ರಯೋಜನವಾಗುತ್ತಿಲ್ಲ. ಆದರೆ ನಮ್ಮ ಶ್ರೀ ಮರಿಯಪ್ಪ ಅವರು ಮಹಾತ್ಮಾ ಗಾಂಧಿಯವರು ಸ್ವರ್ಗದಲ್ಲಿಯೇ ಇದ್ದಾರೆ ಎಂದರು. ಅವರು ನೀವು ಅನುಸರಿಸುತ್ತಿರುವ ನೀತಿಯನ್ನು ನೋಡಿ ಸ್ವರ್ಗದಲ್ಲಿಯೇ ನಗುತ್ತ ಇರುತ್ತಾರೆ ಎಂದು ನಾನು ಹೇಳಬೇಕಾಗಿದೆ. ಅವರು ಏನು ಹೇಳುತ್ತಿದ್ದರೋ ಅದಕ್ಕೆ ವಿರುದ್ಧವಾಗಿ ಕೆಲಸಗಳು ಈವತ್ತಿನ ದಿವಸ ಮರಿಯಪ್ಪನವರಿಂದ ನಡೆಯುತ್ತಿವೆ ಯೆಂದು ಹೇಳಬೇಕಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ನಿಜಲಿಂಗಪ್ಪನವರ ಸರ್ಕಾರ!

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹೌದು, ಇವರು ಅದರಲ್ಲಿ ಸೇರಿದ್ದಾರೆ.

ಎರಡನೆಯದಾಗಿ ಶ್ರೀಮಾನ್ ಪೂಣಚ್ಚರವರು "ಪಾನ ನಿರೋಧ ನೀತಿ ನನಗೆ ಅರ್ಥವಾಗುತ್ತಿಲ್ಲ. ಅವರು ಈಗತಾನೆ ಏಳು ತಿಂಗಳ ಹಿಂದೆ ಒಂದು ಸರ್ಕಾರ ನಡೆಸಿ ಅಲ್ಲೇನು ಪಾನನಿರೋಧದ ಕಾನೂ

ನನ್ನು ಜಾರಿಗೆ ತಂದಿದ್ದರೋ ಅಂಥ ಕಾನೂನು ಇಲ್ಲಿ ಬೇಡ ಎನ್ನುವ ಕ್ಯಾಬಿನೆಟ್ಟಿನಲ್ಲಿ ಮಂತ್ರಿಗಳಾಗಿರುವುದು ಹೇಗೆ ಒಪ್ಪುತ್ತದೆಯೋ ಗೊತ್ತಿಲ್ಲ. ಅವರ ಆತ್ಮ ಈ ನೀತಿಗೆ ಹೊಂದಿಕೊಂಡು ಹೇಗೆ ಕೆಲಸ ಮಾಡುತ್ತದೋ ಗೊತ್ತಿಲ್ಲ.

Sri T. MARIAPPA.—Co-existence.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅದನ್ನು ಮೊದಲೇ ನಾನು ಹೇಳಿದೆ. ತಮ್ಮ ನೀತಿಯೇನೆಂಬುದನ್ನೂ ಹೇಳಿದ್ದೇನೆ. ಪಾನನಿರೋಧ ಜಾರಿಗೆ ತಂದದ್ದರಿಂದ ಕೊಡಗಿನಲ್ಲಿ ಏನೂ ಹಾನಿಯಾಗಲಿಲ್ಲ. ಅದರಂತೆಯೇ ಇಲ್ಲಿ ಮೈಸೂರುದೇಶದಲ್ಲಿಯೂ ಮಾಡಿದರೇನೋ ಆಗುತ್ತದೆಂದು ಹೆದರಬೇಕಾಗಿಲ್ಲ.

ಶ್ರೀ ಟಿ. ಮರಿಯಪ್ಪ.—ಅವರು ಬುದ್ಧಿವಂತರು. ಅಲ್ಲಿ ಬೇಗ introduce ಮಾಡಿ, ಇಲ್ಲಿಗೆ ಬಂದು ಬಿಟ್ಟರು,

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈಗ ನಾವು ನಮ್ಮ ಭಾಷಣದಿಂದ ಪಾನನಿರೋಧದ ವಿಚಾರವಾಗಿ ಅವರ ಮನಸ್ಸನ್ನು ಪರಿವರ್ತನೆ ಮಾಡುವುದು ಸಾಧ್ಯವಿಲ್ಲ. ಶ್ರೀಮಾನ್ ಪೂಣಚ್ಚರವರನ್ನು ಪ್ರೊಟೆಸ್ಟ್ ಮಾಡಿ ಹೊರಗೆ ಬನ್ನಿ ಎಂದು ಹೇಳುವುದರಿಂದಲಾದರೂ ಏನಾದರೂ ಪ್ರಯೋಜನವಾದೀತೆಂದು ನನಗನ್ನಿಸುತ್ತದೆ. ನಮ್ಮ ಮಿತ್ರರುಗಳೆಲ್ಲಾ ಅನೇಕ ಅಂಕಿ ಅಂಶಗಳನ್ನು ಕೊಟ್ಟು ಭಾಷಣಗಳನ್ನು ಯಥೇಚ್ಛವಾಗಿ ಮಾಡಿದ್ದಾರೆ. ಏನುಮಾಡಿದರೂ ಫಲವಾಗಲಿಲ್ಲವಲ್ಲಾ ಎಂದು ವ್ಯಸನವಾಗುತ್ತದೆ. ಎಲ್ಲ ವಿಷಯಗಳನ್ನೂ ಹೇಳಿದ್ದಾಗಿದೆ. ಇನ್ನೊಂದು ವಿಷಯ ಹೇಳುವುದಿದೆ. ಸೋಷಿಯಲಿಸ್ಟ್ ಪ್ಯಾಟರ್ನ್ ಎಂದು ಹೇಳುತ್ತಾರಲ್ಲಾ, ಆ ನೀತಿಗೂ ಕೂಡ ಇದು ವಿರೋಧವಾಗಿದೆಯಲ್ಲಾ. ಇತ್ತ ನಿಮ್ಮ ನೀತಿಯಲ್ಲಿ ಪಾನ ನಿರೋಧವೂ ಪೂರ್ಣವಾಗಿಲ್ಲ, ಪಾನನಿರೋಧವಿಲ್ಲದೆಯೂ ಇಲ್ಲ. ಪಾನವೂ ಇದೆ, ನಿರೋಧವೂ ಇದೆ! ಏಕೆಂದರೆ ಕೆಲವು ಬಂಡವಾಳಗಾರರಿಗೆ ನೀವೇ ಲೇಸೆನ್ಸ್ ಕೊಟ್ಟಿದ್ದೀರಿ. ಅಮೇಲೆ ಫಾರ್ಮಾಸ್ಯುಟಿಕಲ್, ಬಾರ್ ಷಾಪ್—ಇವುಗಳಿಗೆ ಲೈಸೆನ್ಸ್ ಕೊಟ್ಟಿದ್ದೀರಿ. ಇದರಲ್ಲಿ ಒಂದು ನೀತಿಯೇನೋ ಅನುಸರಿಸುತ್ತೇವೆಂದು ಹೇಳಿದ್ದೀರಿ: ಇನ್ನುಮೇಲೆ ಯಾರಿಗೂ ಕೊಡಕೂಡದೆಂದು ಮಾಡಿದ್ದೇವೆ ಎಂಬುದಾಗಿ ಹೇಳುತ್ತಿದ್ದೀರಿ. ಇದರನೀತಿ, ಈಗ ಯಾರು ಬಂಡವಾಳಗಾರರಾಗಿದ್ದಾರೋ ಅವರಷ್ಟೇ ಜನ ಬಂಡವಾಳಗಾರರಾಗಿರಲಿ ಎಂಬ ಉದ್ದೇಶವಿರುವಂತೆ ಕಾಣುತ್ತದೆ. ಶ್ರೀಮಾನ್ ಚೆಂಗಲರಾಯರೆಡ್ಡಿಯವರ ಕಾಲದಲ್ಲಿ ಸಿವಿಲ್ ಸಪ್ಲೈಸ್ ಬಾಬೆಂಬುದು ಮುಂತ್ರಿಮಂಡಳಕ್ಕೆ ಸೇರಿತ್ತು. ಅವರು ಬಟ್ಟೆಹಂಚಿಕೆಯ ವಿಷಯದಲ್ಲಿ ಹೀಗೆಯೇ ಮಾಡಿದರು. 10-15 ಗಜದ ಮೇಲೆ ಬಟ್ಟೆಕೊಡಬಹುದೆಂದು ಮಾಡಿದರೆ ಯಾರಿಗೂ ಕೊಂಡುಕೊಳ್ಳುವ, ಶೇಖರಿಸಿಕೊಳ್ಳುವ ಮಮತೆಯೇ ಇರುವುದಿಲ್ಲವೆಂದು ಹೇಳಿ ಬಟ್ಟೆ ಕೊಡುವುದನ್ನು ನಿಗದಿ ಮಾಡಿದ್ದರು. ಬಾರ್‌ಷಾಪ್, ಇದೆಲ್ಲಾ ಒಂದು ಜಾತಿ. ಇವುಗಳಿಂದಾಗಿಯೇ ದೇಶದಲ್ಲಿ ಲಂಚ, ದರೋಡೇ ಜಾಸ್ತಿಯಾಗಿದೆ. ಒಂದು ಉದಾಹರಣೆಯನ್ನು ಹೇಳುವುದಾದರೆ ಒಂದು ಫಾರ್ಮ್ಯಾಕ್ಯುಟಿಕಲ್ಸ್‌ಗೆ ಲೈಸೆನ್ಸ್‌ಗೆಂದು ಒಬ್ಬಾನೊಬ್ಬ ಒಂದು ಅರ್ಜಿ ಹಾಕಿದ. ಈ ಸರ್ಕಾರಕ್ಕೆ ಇವನಿಗಿಂತ 15 ತಿಂಗಳಾದ ಮೇಲೆ ಅರ್ಜಿಹಾಕಿದವನು ಒಬ್ಬನಿದ್ದನಂತೆ. ಇವನು expert ಎಂತಲೂ, ಹೆಚ್ಚು ಬಂಡವಾಳ ಹಾಕಬಲ್ಲವನೆಂತಲೂ ಹೇಳಿ, ಎರಡನೆಯವನಿಗೆ ಲೈಸೆನ್ಸ್ ಕೊಟ್ಟರು. ಮೊದಲನೆಯವನಿಗೇಕೆ ಕೊಡಲಿಲ್ಲವೆಂಬ ಕಾರಣವನ್ನೂ ಸಹ ಕೊಡಲಿಲ್ಲ. ಈ ರೀತಿ ತಾವು ಬ್ಲಾಕ್ ಮಾರ್ಕೆಟ್ ಮಾಡುತ್ತಿದ್ದೀರಿ. ಈ ನೀತಿಯನ್ನು ಮಾರ್ಪಾಡು ಮಾಡಿದ ಹೊರತು ಈ ರೀತಿ ದರೋಡೆಯಾಗುತ್ತಿರುವುದು ನಿಲ್ಲುವುದಿಲ್ಲ. ಈ ಸಾರಿ ತಮಗೆ ಬರುವ Revenue ಕೂಡ ಕಡಮೆ ಬಿದ್ದಿದೆ. ಇದಕ್ಕೆ ಕಾರಣ ಅಧಿಕಾರಿಗಳೇ ಎಂದು ನಾನು ಹೇಳಬಲ್ಲೆ. ಇವುಗಳ ವಿಷಯದಲ್ಲಿ ಅಧಿಕಾರಿಗಳು ಕೆಲವು ಪ್ರದೇಶಗಳನ್ನು ತಮ್ಮ ಜಹಗೀರಿಗಳಾಗಿ ಇಟ್ಟುಕೊಳ್ಳಬೇಕೆಂಬ ಮನೋಭಾವವುಳ್ಳವರಾಗಿದ್ದಾರೆ. ಒಬ್ಬೊಬ್ಬ ಅಧಿಕಾರಿಯೂ ತನ್ನ ಕೆಲಸಕ್ಕಾಗಿ ಒಬ್ಬೊಬ್ಬ expert ಇಟ್ಟುಕೊಂಡಿರುತ್ತಾರೆ. ಉದಾಹರಣೆಗೆ ಹೇಳುತ್ತೇನೆ: ಬೆಂಗಳೂರು ಸಿಟಿಯಲ್ಲಿ ಮೂರು ವರ್ಷ ಕಾಲ ಒಬ್ಬ ಅಧಿಕಾರಿಯಿದ್ದರು. ಅವನನ್ನು ಇಲ್ಲಿಂದ ತೆಗೆಯಬೇಕೆಂದು ನಾನಾಕಡೆಯಿಂದ ದೂರುಗಳು ಬಂದುದರಮೇಲೆ ಬೇರೆ ಪ್ರದೇಶಕ್ಕೆ ಟ್ರಾನ್ಸ್‌ಫಾರ್ ಮಾಡಬೇಕೆಂದರೆ ಅವನು ಏನೇನೋ influence ತಂದು ಬೆಂಗಳೂರು ತಾಲ್ಲೂಕಿಗೆ ಹಾಕಿಸಿಕೊಂಡ. ಆದರೆ ಬೆಂಗಳೂರು ಸಿಟಿಗಿಂತ ತಾಲ್ಲೂಕಿನಲ್ಲಿ ವ್ಯಾಪಾರ ಜಾಸ್ತಿ. ಇದನ್ನು ಅರಿತು ಏನೇನೋ ಮಾಡಿ ಮೂರು ತಿಂಗಳಿನಲ್ಲೇ ಮತ್ತೆ ಸಿಟಿಗೆ ಬಂದ. ಇದರ ಹಿನ್ನೆಲೆಯೇನೆಂಬುದು ತಮಗೆಲ್ಲಾ ಗೊತ್ತಿದೆ. ಇಂಥ ಅನ್ಯಾಯಗಳೇ ತಮಗೆ ರೆವಿನ್ಯೂ ಕಡಮೆ ಬೀಳುವುದಕ್ಕೆ ಕಾರಣವಾಗಿವೆ. ಹಾಗೆಯೇ ಎಕ್ಸೈಸ್ ಕಂಟ್ರಾಕ್ಟರುಗಳಿಗೆ ಏನೋ ಮಾಡಿ ಅನುಕೂಲಮಾಡಬೇಕೆಂದು ಅಧಿಕಾರಿಗಳೂ ಮಾತುಮಾಡಿಕೊಂಡಿರುವುದರಿಂದ ಅಲ್ಲಿಯೂ ಹೀಗೆಯೇ ಆಗುತ್ತಿದೆ. ಆದ್ದರಿಂದ ನಿಮಗೆ ಬರುವ ಆದಾಯ ಕಡಮೆಯಾಗುವುದಕ್ಕೆ ನಿಮಗಿಂತ ನಿಮ್ಮ ಅಧಿಕಾರಿಗಳು ಹೆಚ್ಚು ಕಾರಣರು. ಅಂಥವರಿಗೆ ಏನು ಶಿಕ್ಷೆ ಕೊಡಬೇಕೋ ಅದನ್ನು ಕೊಟ್ಟು ಅವರಿಗೆ ಭಯ ಹುಟ್ಟುಸುವಂತೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆ.

ಎರಡನೆಯದಾಗಿ ಬಾರ್‌ಗಳ ವಿಷಯ ಹೇಳುತ್ತೇನೆ. ಈ ಊರಿನಲ್ಲಿ ಕೆಲವು ಭಾರಿಭಾರಿ ಬಾರ್‌ಗಳಿವೆ. ಅವುಗಳಲ್ಲಿ ಯೂರೋಪಿಯನ್ ಸ್ಪೆಷಲ್‌ಗಳವೂ ಇವೆ. ಇಂಡಿಯನ್ ಬಾರ್‌ಗಳ ಮೇಲೆ ಕೇಸ್ ಹಾಕಿದ್ದಾರೆಯೇ ವಿನಾ ಯೂರೋಪಿಯನ್ ಬಾರ್‌ಗಳ ಮೇಲೆ ಕೇಸ್ ಹಾಕಿರುವುದನ್ನು ನೀವು ನೋಡಿದ್ದೀರಾ? ಹೀಗೆ ಕಾರ್ಯಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನೆಂಬುದನ್ನು ಪತ್ತೆಮಾಡಬೇಕು. ಪತ್ತೆಮಾಡಿ ಸೂಕ್ತ ಕಾರ್ಯಕ್ರಮವನ್ನು ಕೈಕೊಳ್ಳಬೇಕು.

ಹೀಗೆಲ್ಲಾ ಒಂದೆಡೆ ಕುಡಿತಕ್ಕೆ ಅವಕಾಶ ಮಾಡಿಕೊಡುವುದು, ಇನ್ನೊಂದೆಡೆ ಕೊಡದಿರುವುದು ಈರೀತಿ ಮಾಡುವುದಕ್ಕೆ ಬದಲಾಗಿ ಒಂದೇ ಸಾರಿ ಎಲ್ಲಾ ಕಡೆಯಲ್ಲಿಯೂ prohibition ಜಾರಿಗೆ ತನ್ನಿ. ನನ್ನ ತಾಲ್ಲೂಕಾದ ಚೆನ್ನಪಟ್ಟಣದಲ್ಲಿ ಬಹಳ ಹಿಂದೆ ನನಗಿನ್ನೂ ರಾಜಕೀಯ ಗೊತ್ತಿಲ್ಲದಿರುವ ಕಾಲದಲ್ಲೇ ಸರ್ ಮಿರ್ಜಾ ಇಸ್ಮೈಲ್ ರವರ ಕಾಲದಲ್ಲಿ prohibtion introduce ಮಾಡಿದರು. ಆ ಸರ್ಕಾರವೇ ಇಲ್ಲಿಯವರೆಗೂ ಇದ್ದಿದ್ದರೆ ಬಹುಶಃ ಪೂರ್ಣವಾಗಿ ಕಾರ್ಯಗತ ಮಾಡುತ್ತಿತ್ತು. ಇಂಥ ಸಂದರ್ಭದಲ್ಲಿ, ಯಾವ ಸರ್ಕಾರವನ್ನು ನಾವು ಬೇಡ ಎನ್ನುತ್ತಿದ್ದೆವೋ ಅವರು ಮಾಡಿದ್ದನ್ನೇ ತಾವು ಮಾಡಲಲ್ಲವಲ್ಲಾ! ಒಂದು ಪೇಳೆ ಧೈರ್ಯವಿದ್ದರೆ ಹೇಳಿ: ಏನೋ commitment ಮಾಡಿಕೊಂಡುಬಿಟ್ಟಿದ್ದೇವೆ, ಈಗ ನಮಗೆ ದುಡ್ಡು ಬೇಕು, ಅದ್ದರಿಂದ ಸದ್ಯಕ್ಕೆ ನಿಲ್ಲಿಸುತ್ತೇವೆಂದು ಹೇಳಬಿಡಿ. ಅದು ಬಿಟ್ಟು ಈ ಅರೆಮನಸ್ಸಿನ ನೀತಿಯೇಕೆ? ಮಾಡಿದರೆ ಪೂರ್ತಿಮಾಡಿ ಸಮರ್ಥನೆ: ಮಾಡಿಕೊಳ್ಳಿ, ಇಲ್ಲದಿದ್ದರೆ ಪೂರ್ತಿಯಾಗಿ ಬಿಟ್ಟುಬಿಡುತ್ತೇವೆಂದು ಹೇಳಿ.

(ಶ್ರೀ ಬಿ. ಕೆ. ಪುಟ್ಟರಾಮಯ್ಯ).

ಎಕ್ಸೈಜ್ ಬಾಕಿಗಳ ವಿಷಯ ಬಂತು. ವಸೂಲಿಯಾಗಲಿಲ್ಲವೆಂದು ಹೇಳಿದರು. ಇವರು ಹೇಳುವ ಹಾಗೆ ವಸೂಲಿಯೂ ಕಷ್ಟವಿಲ್ಲ. ಕೆಲವರು ಟ್ಯಾಕ್ಸ್ ಕೊಡುವುದಕ್ಕೆ ಬರುತ್ತಾರೆ. ಅಂಥವರಿಗೆ ಬೇಗ ಸರಿಯಾದ ರೀತಿಯಲ್ಲಿ ಇತ್ಯರ್ಥಮಾಡಿ ಕೊಡುವುದಾದರೆ, ಒಂದು ದಿವಸದಲ್ಲಿ ಅರ್ಧ ದಿವಸದಲ್ಲಿ ವಸೂಲು ಮಾಡಬಹುದಾದ್ದು ಎಷ್ಟೋ ಇವೆ. ಜಾಗ್ರತೆ ವಿಲೇವಾರಿ ಮಾಡಿದರೆ ಇಷ್ಟೊಂದು ಬಾಕಿಯಿರುವುದೇ ಇಲ್ಲ. ಒಬ್ಬರು ನನ್ನನ್ನೇ ಬಂದು, ನನ್ನ ಬಾಕಿಯನ್ನು ಅನ್ಯಾಯವಾಗಿ ಜಾಸ್ತಿ ಮಾಡಿದ್ದಾರೆ; ನ್ಯಾಯವಾಗಿ ಎಷ್ಟು ಕೊಡಬೇಕೋ ಹೇಳಿದರೆ, ಪೂರ್ತಿಯಾಗಿ ತೀರಿಸುವುದಕ್ಕೆ ಸಿದ್ಧನಾಗಿದ್ದೇನೆ. ಈಗರೇ ಕೊಡುತ್ತೇನೆಂದು ಹೇಳಿದರು. ವಾಯಿದೆ ಕೂಡ ಕೇಳಲಿಲ್ಲ. ಅಂತಹವರ ಬಾಕಿಗಳನ್ನು ಬೇಗ ತನಿಖೆಮಾಡಿ ತೀರ್ಮಾನ ಮಾಡಬೇಡವೇ? ಹೆಚ್ಚಿದೆ, ಕಡಿಮೆ ಇದೆ, ಯಾವುದನ್ನೂ ಹೇಳುವುದಿಲ್ಲ. ರಿಕಾರ್ಡನ್ನು ನೋಡಿ ಹೇಳಬೇಕೆನ್ನುತ್ತಾರೆ, ಅಷ್ಟೆ.

ಶ್ರೀ ಟಿ. ಮರಿಯಪ್ಪ.—ಶ್ರೀಮಾನ್ ಪುಟ್ಟರಾಮಯ್ಯ ಅವರೇ ಆಗಲಿ ಅವರ ಜೊತೆಯವರೇ ಆಗಲಿ ಅಷ್ಟು ಸುಲಭವಾಗಿ ಜಗ್ಗುವವರಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನ್ಯಾಯವಿದ್ದರೆ ರಿಯಾಯಿತಿ ಕೊಡಿ. ಇಲ್ಲದಿದ್ದರೆ, ಅಷ್ಟು ಹಣವನ್ನೂ ಕೊಡಲೇಬೇಕೆಂದು ಹೇಳಿಬಿಡಿ. ಹೇಳುವುದಕ್ಕೂ ತಾವೂ ಸಿದ್ಧವಾಗಿಲ್ಲ, ನಿಜ. ಏಕೆಂದರೆ ನಿಮಗೂ ಜವಾಬ್ದಾರಿಯಿದೆ. ನಮ್ಮ ಹತ್ತಿರ ತಪ್ಪು ನೆಪ್ಪು ಎಲ್ಲಾ ಹೇಳಿಬಿಡುತ್ತಾರೆ, ಅವರವರ ಕಷ್ಟ ಏನೋ ಇರುತ್ತದೆ, ಅದರಂತೆ ಹೇಳುತ್ತಾರೆ. ಆದರೆ ವಿಷಯಗಳನ್ನು ತಿಳಿದಿರುವವರು ನೀವು. ವಿಷಯಗಳನ್ನು ತುಲನೆ ಮಾಡಿ judgment ಕೊಡಿ. ಅಷ್ಟೇ ನಾನು ಹೇಳುವುದು.

ಇನ್ನೂ ಕೆಲವು ವಿಷಯಗಳಿವೆ. ಹಿಂದಿನ ಸರ್ಕಾರ ಕೆಲವರಿಗೆ ಅನ್ಯಾಯಮಾಡಿದೆ, ಯಾವುದೇ ಕಾರಣಾಂತರದಿಂದ ಮಾಡಿರಲಿ.

12-30 P.M.

ಅವರು ಒಂದು ಅನ್ಯಾಯಮಾಡಿದ್ದಾರೆ. ನೀವೀಗ ಅದನ್ನು ರಿವೈಸ್‌ಮಾಡಿ ವಸೂಲಾಗದೆ ನಿಂತಿರತಕ್ಕ ಬಾಕಿಯನ್ನು ಬೇಗ ವಸೂಲ್ಮಾಡಿ. ಈ ಹಿಂದೆ ಶ್ರೀ ಕೆ. ಹನುಮಂತಯ್ಯ ಅವರು ಮುಖ್ಯಮಂತ್ರಿಗಳಾಗಿದ್ದಾಗ ಆಗಿನ ಸರ್ಕಾರದಲ್ಲಿ ಒಂದು ವಿಚಾರ ನಡೆಯಿತು. ಈ ಎಕ್ಸೈಜ್ ಬಾಕಿ ಬರಬೇಕಾಗಿದ್ದಂಥ ಒಬ್ಬ ಮನುಷ್ಯನ ಮೇಲೆ ಕ್ರಮನಡೆಸಿ ಆತನಿಂದ ಬರಬೇಕಾಗಿದ್ದ ಹಣಕ್ಕಾಗಿ ಆತನ ಮನೆಯನ್ನು ಸರ್ಕಾರಕ್ಕೆ ತೆಗೆದುಕೊಳ್ಳುವಂತೆ ತೀರ್ಮಾನವಾಯಿತು. ಆದರೆ ಅಷ್ಟರೊಳಗೇ ಆ ಸರ್ಕಾರ ಹೋಯಿತು; ಶ್ರೀ ಕಡಿದಾಳ್ ಮಂಜಪ್ಪನವರ ಸರ್ಕಾರ ಬಂತು. ಆದರೆ ಆ ಶ್ರೀ ಹನುಮಂತಯ್ಯನವರ ಸರ್ಕಾರದಲ್ಲೇ ಮಂತ್ರಿಗಳಾಗಿದ್ದು ಆ ಎಕ್ಸೈಜ್ ಬಾಕಿದಾರನ ಮನೆಯನ್ನು ಸರ್ಕಾರಕ್ಕೆ ತೆಗೆದುಕೊಳ್ಳಬೇಕೆಂಬ ತೀರ್ಮಾನಕ್ಕೆ ಒಪ್ಪಿದಂಥ ಶ್ರೀ ಎ. ಜಿ. ರಾಮಚಂದ್ರರಾಯರು ಶ್ರೀಯುತ ಕಡಿದಾಳ್ ಮಂಜಪ್ಪನವರಿಗೆ "ಆತನ ಮನೆಯನ್ನು ನಾವೇ ತೆಗೆದುಕೊಳ್ಳಬೇಕು, ಆ ರೀತಿ ತೆಗೆದುಕೊಳ್ಳುವುದೇನೂ ಬೇಕಾಗಿಲ್ಲ; ಆದರೆ ಆ ಮನೆ ನ್ಯಾಯವಾಗಿ ಏನು ಬೆಲೆ ಬಾಳುತ್ತದೋ ಆ ಬೆಲೆಯನ್ನು ಕಟ್ಟಿ ಅದನ್ನು P.W.Dಗೆ ಕೊಟ್ಟು ಅದರಿಂದ ಬರುವ ಮೊಬಲಗನ್ನು ಸರ್ಕಾರಕ್ಕೆ ತೆಗೆದುಕೊಳ್ಳೋಣ" ಎಂದು ಹೇಳಿದರಂತೆ. ಆದರೆ ಆ ವೇಳೆಗೆ ಸರಿಯಾಗಿ ಆ ಪಾರ್ಟಿ ಪುನಃ ಮುಖ್ಯಮಂತ್ರಿಗಳಿಗೊಂದು ಅರ್ಜಿ ಹಾಕಿಕೊಂಡರಂತೆ. ಆದರೆ ಅವರ ಅರ್ಜಿ ಆರುತಿಂಗಳಾದರೂ ತೀರ್ಮಾನ ಆಗಲೇ ಇಲ್ಲ. ಹೀಗೆಲ್ಲ ಏಕೆ ಆಲಸ್ಯದಿಂದ ಕೆಲಸಕಾರ್ಯಗಳು ನಡೆಯುತ್ತಿವೆ ಎಂಬುದನ್ನು ನೀವೀಗ ಕಂಡುಹಿಡಿಯಬೇಕು. ಇದರಲ್ಲಿ ಅಧಿಕಾರಿಗಳ ಕೈವಾಡವೂ ಇರಬೇಕು. ಕೇವಲ ಇನ್‌ಎಫಿಷಿಯೆನ್ಸಿಯಿಂದಲೇ ಹೀಗಾಗುತ್ತದೆಯೋ ಅಥವಾ ಇದಕ್ಕೆ ಮತ್ತೆ ಬೇರೇನಾದರೂ ಕಾರಣವಿದೆಯೋ ಅದನ್ನು ತಾವು ಖಂಡಿತ ಶೋಧಿಸಿ ಪತ್ತೆ ಮಾಡಲೇಬೇಕು. ಆದರೆ ನಾನೇನು ಅಂಥಹವರಿಗೆ ರಿಯಾಯಿತಿ ಕೊಡಿ ಎಂದು ಹೇಳುವುದಿಲ್ಲ. ಇಂಥದಕ್ಕೆಲ್ಲಾ ತಾವು ಅವಕಾಶಕೊಡಬೇಡಿ ಎಂದು ಮಾತ್ರ ಹೇಳುತ್ತಿದ್ದೇನೆ. ನಾವು ಈ ವಿಚಾರದಲ್ಲಿ ಈಗ ಆ ತಪ್ಪಿತಸ್ಥರುಗಳಿಗೆಲ್ಲ ರಿಯಾಯಿತಿ ಕೊಡಿ ಎಂದು ಸಲಹೆ ಮಾಡಿದರೆ ನಾಳೆ ನಮ್ಮಮೇಲೆ ತಾವು ಇನ್ನೊಂದು ಸುಂಕದ ಹೊರೆ ಹೊರಿಸುವ ಪರಿಸ್ಥಿತಿ ಬರಬಹುದು. ಅಂಥ ತೊಂದರೆಯನ್ನು ನಾನು ಸರ್ಕಾರದವರಿಗೆ ಕೊಡಲು ಇಷ್ಟಪಡುವುದಿಲ್ಲ.

ಇನ್ನು ಈ ಅರ್ಜಿ ಸ್ಟ್ಯಾಂಪ್‌ಗಳ ವಿಚಾರದಲ್ಲಿ ಎರಡು ಮಾತುಗಳನ್ನಾಡಬೇಕಾಗಿದೆ. ಹಿಂದಿನ ಕಾಲದಲ್ಲಿ ಅಧಿಕಾರಿಗಳು ತಮ್ಮ ಒಂದು ಅಂತಸ್ತನ್ನು ಉಳಿಸಿಕೊಳ್ಳಲು ಈ ಒಂದು ಸ್ಟ್ಯಾಂಪ್ ಫೀಜನ್ನು ವಿಧಿಸಿದ್ದರು. ಇಂಥಿಂಥ ದರ್ಜೆ ಅಧಿಕಾರಿಗಳಿಗೆ ಇಷ್ಟಿಷ್ಟೇ ಸ್ಟ್ಯಾಂಪನ್ನು ಹಾಕಬೇಕೆಂದು ನಿಗದಿ ಮಾಡಿದ್ದರು. ಅಮಲ್ದಾರರಿಗೆ ಅರ್ಜಿ ಕೊಟ್ಟರೆ ಇಷ್ಟು ಸ್ಟ್ಯಾಂಪ್ ಎಂದೂ ಒಬ್ಬ ಅಸಿಸ್ಟೆಂಟ್ ಕಮಿಷನರಿಗೆ ಒಂದು ಅರ್ಜಿ ಕೊಡಬೇಕಾದರೆ ಅದಕ್ಕೆ ಇಷ್ಟು ಸ್ಟ್ಯಾಂಪೆಂತಲೂ ಮತ್ತು ಜಿಲ್ಲಾಧಿಕಾರಿಗಳಿಗೆ ಅರ್ಜಿ ಕೊಡಬೇಕಾದರೆ ಇಂತಿಷ್ಟು ಸ್ಟ್ಯಾಂಪ್ ಹಾಕಬೇಕೆಂತಲೂ ಒಂದು ನಿಯಮವಿತ್ತು. ಹೀಗೆ ಜನರು ಆಯಾ ಅಂತಸ್ತಿನಲ್ಲಿರುವ ಅಧಿಕಾರಿಗಳ ತೂಕ ಎಷ್ಟೆಷ್ಟಿದೆ ಎಂಬುದನ್ನು ಇದರಿಂದ ಅರ್ಥಮಾಡಿಕೊಳ್ಳುತ್ತಿದ್ದರು. ಆದರೆ ಈ ದಿವಸ ನಾವು ಪೋಲೀಸ್ ಇಲಾಖೆಗೇನಾದರೂ ಒಂದು ಅರ್ಜಿ ಕೊಟ್ಟರೆ ಅದಕ್ಕೆ ಸ್ಟ್ಯಾಂಪ್ ಹಾಕಬೇಕಾದ ಅವಶ್ಯಕತೆಯಿಲ್ಲ. ಆ ಅರ್ಜಿಗೆ ಅಂಟಿಸಬೇಕಾಗಿದ್ದಂಥ ಸ್ಟ್ಯಾಂಪಿನ ಮೊಬಲಗನ್ನು ನಾವು ಮೊದಲೇ ಆ ಇಲಾಖೆಗೆ ಕೊಟ್ಟುಬಿಟ್ಟಿರುತ್ತೇವೆ. ಆದರೆ ಈ ದಿವಸ ನ್ಯಾಯದೇಶದಲ್ಲಿ ಜನರಿಗೆ ವಿಕ್ರಯವಾಗುತ್ತಿದೆ. ಹಾಗಾಗ ಬಾರದೆಂದು ಹೇಳುತ್ತೇನೆ. ನ್ಯಾಯಾಲಯಕ್ಕೆ ಜನರು ಏಕೆ ಬರುತ್ತಾರೆ? ಅವರಿಗೇನಾದರೂ ಒಂದು ಕಷ್ಟ ಬಂದರೆ ತಾನೆ? ಹಾಗೆ ಅವರು ಮೊದಲೇ ಕಷ್ಟದಲ್ಲಿ ಸಿಕ್ಕಿಕೊಂಡಿರುವಾಗ ಅವರ ಮೇಲೆ 'ಕೋರ್ಟಿಗೆ ಬಂದಿದ್ದೀರಿ; ನೀವು ಸ್ಟ್ಯಾಂಪ್ ಫೀಜ್‌ಕೊಡಿ' ಎಂದು ಕೇಳತಕ್ಕದ್ದು ಯಾವ ನ್ಯಾಯ? ಅವರಿಗೆ ನೀವು ಒಂದು ಪರಿಹಾರ ನೀಡುವುದಕ್ಕೆ ಬದಲಾಗಿ ಅವರಿಂದಲೇ ನೀವು ಪರಿಹಾರ ಹೊಂದುವುದು ಯಾವ ಧರ್ಮ? ಒಬ್ಬ ಸಾಮಾನ್ಯ ಮನುಷ್ಯನಿಗೆ ಏನೋ ಹತ್ತು ರೂಪಾಯಿಗಳ ಬಾಕಿ ಬರಬೇಕಾಗಿದ್ದಾಗ ಆತನು ಒಂದು ಅರ್ಜಿ ಕೊಡಲಿಕ್ಕೆ ಬಂದರೆ ಅವನಿಂದ ಸ್ಟ್ಯಾಂಪ್ ಫೀಜನ್ನು ಅಪೇಕ್ಷಿಸುವುದು ಯಾವ ಧರ್ಮ? ಆದ್ದರಿಂದ ನಾನೀಗ ಸರ್ಕಾರಕ್ಕೆ ಸಲಹೆ ಮಾಡತಕ್ಕದ್ದೇನೆಂದರೆ—ಹಳ್ಳಿಗಳಿಂದ ಬರತಕ್ಕ ಬಡರೈತನಿಗೆ ಈಗ ಈ ಅರ್ಜಿಗಳ ಬಗ್ಗೆ ತೆರಬೇಕಾಗಿರತಕ್ಕ ಸ್ಟ್ಯಾಂಪ್ ಡ್ಯೂಟಿಯನ್ನಾದರೂ ಮನ್ನಾಮಾಡಲು ಒಂದು ಪ್ರಥಮ ಹೆಜ್ಜೆಯನ್ನು ಇಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ಸರ್ಕಾರಕ್ಕೆ ಕೊಡತಕ್ಕ ಎಲ್ಲ ಅರ್ಜಿಗಳಿಗೂ ಜನರು ಸ್ಟ್ಯಾಂಪ್ ಡ್ಯೂಟಿಯನ್ನು

ಕೊಡಬೇಕಾಗಿಲ್ಲ. ಅಪೀಲ್ ಕೇಸು ದಾಖಲೆ ಇತ್ಯಾದಿ ಅರ್ಜಿಗಳ ಬಗ್ಗೆ ಮಾತ್ರ ಕೊಡಬೇಕೆಂದಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಾನು ಈ ಮೊದಲೇ ಹೇಳಿದ್ದೇನೆ. ಸರ್ಕಾರದವರಿಗೆ ರೈತನಿಗೆ ಉಪಕಾರ ಮಾಡಬೇಕೆಂಬ ಮನಸ್ಸಿಲ್ಲ ಎಂದು. ಅವರ ಮನಸ್ಸು ಅಷ್ಟು ಬೇಗ ಪರಿವರ್ತನೆಯಾಗುವುದಿಲ್ಲ ಅನ್ನುವುದೂ ಸಹ ನನಗೆ ಗೊತ್ತಿದೆ. ಹೀಗಿರುವುದರಿಂದ ನಾನು ಒಂದೊಂದುಸಾರಿ ಇವರಿಗೆ ಈ ವಿಚಾರಗಳನ್ನು ಹೇಳುವುದನ್ನೇ ಬಿಟ್ಟು ಬಿಡೋಣವೇ ಎಂದುಕೂಡ ಆಲೋಚನೆ ಮಾಡಿದ್ದೇನೆ.

ಅಧ್ಯಕ್ಷರು.—ತಾವು ಭಾಷಣವನ್ನು ಪೂರೈಸಿರಿ; ತಮ್ಮ ವೇಳೆ ಮುಗಿಯಿತು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, ನಾನೀಗ ಈ ರೋಡ್ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ಎರಡೇ ಎರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸಿಬಿಡುತ್ತೇನೆ. ಈಗ ಸರ್ಕಾರದವರು R.T.A. and S.T.A. ಎಂದು ಕೆಲವು ಸಮಿತಿಗಳನ್ನು ನೇಮಕ ಮಾಡಿದ್ದಾರೆ. ಇದರಿಂದ ಅರ್ಥ ಈ ವ್ಯವಹಾರ ಹದಗೆಡುತ್ತಿದೆ. ಈ ಸಮಿತಿಗಳಲ್ಲಿರತಕ್ಕ ಜನರೆಲ್ಲ ಜನ ಬೆಂಬಲವಿಲ್ಲದವರು. ಇಂಥವರ ಬೆಂಬಲದಿಂದ ಸರ್ಕಾರಕ್ಕೆ ಯಾವ ಪ್ರಯೋಜನವೂ ಇಲ್ಲ. ಅವರಿಗೆ ದೇಶದಲ್ಲಿ ಅಂಥ ಜನ ಬೆಂಬಲವಿದ್ದಿದ್ದರೆ ಅವರೇಕೆ ನಿಮ್ಮ ಹತ್ತಿರ ಬಂದು ಈ ಸಮಿತಿಗಳಿಗೆ ನಾಮಕರಣಮಾಡಿ ಎಂದು ನಿಮ್ಮನ್ನು ಕಾಡಿ ಬೇಡಿಕೊಳ್ಳುತ್ತಿದ್ದರು ! ಈ ಜನರೆಲ್ಲ ಅನ್ ಪಾಪ್ಯುಲರ್ ಆಗಿರತಕ್ಕವರು. ಇಂಥ ಜನರಿಂದ ನೀವೊಂದು ಪಾಪ್ಯುಲಾರಿಟಿಗಳಿಸುವುದು ಬೇಡ. ನೀವು ಹಾಗೊಂದುವೇಳೆ ಇವರಿಂದ ಗಳಿಸುವುದಿದ್ದರೆ ಅದೇ ಒಂದು ರೀತಿಯ ಪಾಪ್ಯುಲಾರಿಟಿ! ಆದ್ದರಿಂದ ನೀವು ನಿಷ್ಪಕ್ಷಪಾತರೀತಿಯಲ್ಲಿ ಇವುಗಳನ್ನೆಲ್ಲ ವಜಾಮಾಡಿ ಈ ಸಂಸ್ಥೆಗಳಿಗೆ ಚುನಾವಣೆಯ ಮೂಲಕ ಜನರನ್ನು ಆರಿಸಿ —ಆಗ ಇದರ ಕೆಲಸ ಚೆನ್ನಾಗಿ ನಡೆಯುತ್ತದೆ. ಈಗ ಇಲ್ಲಿ ಹಗಲು ದರೋಡೆ ನಡೆಯುತ್ತಿದೆ. ಈ ಪೈಕಿ ನಮಗೆ S.T.A. ಒಂದಿದ್ದರೇ ಸಾಕು. ಈ ದಿವಸ ಈ ಸಂಸ್ಥೆಗಳಿಂದ ಎಷ್ಟು ಹಣ ಹಾಳಾಗುತ್ತಿದೆ ಎನ್ನುವ ಬಗ್ಗೆ ನಾನು ಎಷ್ಟು ಹೇಳಿದರೂ ಸಾಲದಾಗಿದೆ. ಈ ಡಿಸ್ಟ್ರಿಕ್ಟ್ ಟ್ರಾನ್ಸ್‌ಪೋರ್ಟ್ ಸಮಿತಿಗಳು ಲೂಟಿ—ಹಗಲು ದರೋಡೆ ಮಾಡುತ್ತಿವೆ. ಆದ್ದರಿಂದ ಈ ವಿಧಾನವನ್ನು ತಪ್ಪಿಸಿ ತಾವು ಈ ಉಭಯ ಸಭೆಗಳ ಸದಸ್ಯರನ್ನೇ ಒಂದುರೀತಿಯ ಚುನಾವಣೆಯ ಮೂಲಕ ಆ ಸಂಸ್ಥೆಗಳಿಗೆ ನೇಮಕಮಾಡುವುದು ಅತ್ಯಗತ್ಯ ಎಂದು ಹೇಳುತ್ತೇನೆ. ಈ ಇಲಾಖೆಯಲ್ಲಿ ಬಹಳ ಮುಖ್ಯವಾದ ಇಬ್ಬರು ಅಧಿಕಾರಿಗಳೆಂದರೆ ಜನರಲ್ ಮ್ಯಾನೇಜರು ಮತ್ತು ಟೆಕ್ನಿಕಲ್ ಮ್ಯಾನೇಜರು ಈ ಇಬ್ಬರು. ಇವರ ವಿನಾ ನಿಮ್ಮ ಆ I.A.S. ಅಥವಾ I.P.S. ಅಧಿಕಾರಿಗಳನ್ನು ಇಲ್ಲಿಗೆ ಹಾಕುವುದರಿಂದೇನೂ ಪ್ರಯೋಜನವಿಲ್ಲ. ಈ ಹಿಂದೆ ನನಗೆ ಮಾನ್ಯ ಶ್ರೀ ಟಿ. ಮರಿಯಪ್ಪನವರೇ ಒಂದೆರಡು ಬಸ್ ಲೈನುಗಳನ್ನು ಮಂಜೂರುಮಾಡಿದ್ದರು. ಇನ್ನೂ ಒಂದು ಲೈನ್ ಬೇಕಾದರೆ ಕೊಡುತ್ತೇನೆಂದು ಹೇಳಿದ್ದರು. ಆಗ ನಾನೇ ಬೇಡ ಎಂದು ಹೇಳಿದ್ದೆ. ಅದಕ್ಕೆ ತಕ್ಕಹಾಗೆ ಆ ಲೈನನ್ನೂ ಸಹ ನಾನು ಸರ್ಕಾರಕ್ಕೆ ಸರೆಂಡರ್ ಮಾಡಿದೆನು. ಆ ದಿವಸ ಹಾಗೆ ಸರೆಂಡರ್ ಮಾಡಿದ ನಾನೇ ಈ ದಿವಸ ಕೆಟ್ಟವನು, ಆ ಲೈನನ್ನು ಬೇರೆ ಮಂತ್ರಿಗಳು ಬೇರೊಬ್ಬರಿಗೆ ಕೊಟ್ಟರು. ಅನುಕೂಲ ಅವರಿಗೆ ಆಗುತ್ತಿದೆ. ನಾನು ಈ ವಿಚಾರವನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ ತಮಗೆ ನ್ಯಾಷನಲೈಜ್ ಮಾಡುತ್ತೇವೆಂಬ ಉದ್ದೇಶ ವಿದ್ದಲ್ಲಿ ಎಲ್ಲ ರಸ್ತೆಗಳನ್ನೂ ನ್ಯಾಷನಲೈಜ್ ಮಾಡಿ—ಇಲ್ಲವೇ ಎಲ್ಲವನ್ನೂ ಬಿಟ್ಟುಬಿಡಿ. ಒಳ್ಳೆಯ ರಸ್ತೆ ಆದರೆ ನಮಗಿರಲಿ—ಕೆಟ್ಟ ರಸ್ತೆಗಳೆಲ್ಲ ನಿಮಗಿರಲೆಂದರೆ ಅದು ಚೆನ್ನಾಗಿಲ್ಲ. ಈ ದಿವಸ ಗ್ರಾಮಾಂತರ ಪ್ರದೇಶದಲ್ಲಿ ವಿಪರೀತವಾಗಿ ಓವರ್‌ಲೋಡ್ ಮಾಡಿಕೊಂಡು ಜನ ವಿಪರೀತ ಕಷ್ಟನಷ್ಟಗಳಿಗೆ ಗುರಿಯಾಗುತ್ತಿದ್ದಾರೆ. ಏನೋ ಈ ದಿವಸ ತಾವು ಬೆಂಗಳೂರು—ಮೈಸೂರು ಇತ್ಯಾದಿ ಟಾರ್—ಸಿಮೆಂಟ್ ರಸ್ತೆಗಳನ್ನು ನ್ಯಾಷನಲೈಜ್ ಮಾಡಿಕೊಂಡಾಕ್ಷಣಕ್ಕೆ ಎಲ್ಲವೂ ರಾಷ್ಟ್ರೀಕರಣವಾದಂತಾಗಲಲ್ಲ. ಆದ್ದರಿಂದ ತಾವು ಪ್ರತಿಯೊಂದು ರಸ್ತೆಯನ್ನೂ ರಾಷ್ಟ್ರೀಕರಣ ಮಾಡಬೇಕು. ಈ ಇಲಾಖೆಗೆ ಸರಿಯಾದ—ದಕ್ಷರಾದಂಥ ಒಬ್ಬ ಟೆಕ್ನಿಕಲ್ ಬಾಬಿನಲ್ಲಿ ಪರಿಶ್ರಮವುಳ್ಳ ಜನರಲ್ ಮ್ಯಾನೇಜರನ್ನು ಹಾಕಬೇಕೇ ಶಿವಾಯಿ ನಿಮ್ಮ ಆ I.A.S. ಅಧಿಕಾರಿಗಳಿಂದ ಏನೂ ಪ್ರಯೋಜನವಿಲ್ಲವೆಂದು ಸಲಹೆ ಮಾಡುತ್ತೇನೆ. ಈ ವಿಚಾರವೆಲ್ಲ ಪ್ರತಿನಿತ್ಯವೂ ಸ್ವತಃ ಡ್ರೈವಿಂಗ್ ಮಾಡುತ್ತಿರುವ ಗೃಹ ಸಚಿವರಾದ ಶ್ರೀ ಪೂಣಚ್ಚರವರಿಗೆ ಗೊತ್ತಾಗುತ್ತದೆಂದು ನಾನು ಭಾವಿಸಿದ್ದೇನೆ. ಆದ್ದರಿಂದ ಮೆಕ್ಯಾನಿಕ್ ಬಾಬಿನಲ್ಲಿ ತಿಳಿವಳಿಕೆ ಇಲ್ಲದ ಮ್ಯಾನೇಜರಿದ್ದರೆ ಈ ಮೆಕ್ಯಾನಿಕ್‌ಗಳು ಬಹಳ ಮೋಸಮಾಡುತ್ತಾರೆ; ಫೋರ್‌ಮನ್‌ಗಳು ಮೋಸಮಾಡುತ್ತಾರೆ. ಆದ್ದರಿಂದ ಟೆಕ್ನಿಕಲ್ ಬಾಬಿನಲ್ಲಿ ಚೆನ್ನಾಗಿ ಪರಿಶ್ರಮವುಳ್ಳ ಒಬ್ಬ ಮ್ಯಾನೇಜರನ್ನು ಹಾಕಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The House will now rise and will meet on Monday at 1 P.M.

The House adjourned at Forty Minutes past Twelve of the Clock to meet again at One of the Clock on Monday, the 22nd July 1957.